
ಪುಸ್ತಕ ಪ್ರಪಂಚ

ಸಂಪುಟ ೩೭ ೧೯೮೨ ಅಕ್ಟೋಬರ್ ಸಂಚಿಕೆ ೩



ವಿ ಷ ಯ ಸೂ ಚಿ

ಮುಖಚಿತ್ರ : ಗಾಂಧೀಜಿ

ಸಂಪಾದಕೀಯ ಮಂಡಲಿ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೩೭ ಅಕ್ಟೋಬರ್ ೧೯೮೨ ಸಂಚಿಕೆ ೩

ವಯಸ್ಕರ ಶಿಕ್ಷಣದ ಮೂಲಕ ಮಿತಕುಟುಂಬ ಯೋಜನೆ

"ಕುಟುಂಬಕಲ್ಯಾಣ–ದೇಶಕಲ್ಯಾಣ" ಎಂಬ ಮಾತು ಸತ್ಯ. ದೇಶದಲ್ಲಿ ಪ್ರಜೆಗಳು ಸಂತೃಪ್ತರೂ ಆರೋಗ್ಯವಂತರೂ ತಿಳುವಳಿಕೆಯುಳ್ಳವರೂ ಆಗಿರಬೇಕು. ಸಾಮಾನ್ಯ ವ್ಯಕ್ತಿಯೂ ಸಹ ತನ್ನ ಜೀವನವನ್ನು ನೆಮ್ಮದಿಯಿಂದ ಕಳೆಯಲು ಅವಕಾಶವಿದ್ದು, ಜೀವನ ಗುಣಮಟ್ಟದಿಂದ ಕೂಡಿರಬೇಕು. ಇದು ಕಲ್ಯಾಣ ರಾಜ್ಯದ ಕಲ್ಪನೆ, ಪೂಜ್ಯ ಮಹಾತ್ಮ ಗಾಂಧೀಜಿಯವರ ಕನಸು. ಸಂವಿಧಾನದ ಒಂದು ಗುರಿ.

ಸ್ವಾತಂತ್ರ್ಯದ ನಂತರ ಕಲ್ಯಾಣರಾಜ್ಯ ಸ್ಥಾಪನೆಯ ಬಗ್ಗೆ ಅನೇಕ ಪ್ರಯತ್ನಗಳು ನಡೆದಿವೆ. ಈಗಾಗಲೇ ಐದು ಪಂಚವಾರ್ಷಿಕ ಯೋಜನೆಗಳು ಮುಗಿದು ಆರನೇ ಪಂಚವಾರ್ಷಿಕ ಯೋಜನೆಯು ಜಾರಿಯಲ್ಲಿದೆ. ಈ ಯೋಜನೆಗಳಿಂದ ದೇಶ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. ಶಾಲೆಗಳ ಸಂಖ್ಯೆ, ಅವುಗಳಲ್ಲಿ ಕಲಿಯುವ ಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಸಹ ವೈದ್ಯಕೀಯ ಸೌಲಭ್ಯ ಉತ್ತಮಗೊಂಡಿದೆ. ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಾಗಿದೆ. ಸಂಚಾರ ಸೌಲಭ್ಯ ಮುಂದುವರೆದಿದೆ. ಹರಿಜನರ—ಗಿರಿಜನರ ದುರ್ಬಲ ವರ್ಗದವರ ಏಳಿಗೆಗಾಗಿ ಅನೇಕ ಯೋಜನೆಗಳು ರೂಪಿತವಾಗಿವೆ.

ಇಷ್ಟು ಯೋಜನೆಗಳು ರೂಪಿತವಾದರೂ ನಿರೀಕ್ಷಿತ ಫಲ ದೊರೆತಿಲ್ಲ. ಇದಕ್ಕೆ ಅನೇಕ ಕಾರಣಗಳು ಇವೆ. ಮುಖ್ಯವಾಗಿ ನಿರಕ್ಷರತೆ ಮತ್ತು ಜನಸಂಖ್ಯಾ ಸ್ಫೋಟ. ರಾಷ್ಟ್ರಪಿತ ಗಾಂಧೀಜಿಯವರು ಹೇಳಿದಂತೆ ನಿರಕ್ಷರತೆಯು ಒಂದು

(ಆಕಾಶವಾಣಿ ಕೃಪೆಯಿಂದ).

ಶಾಪ. ನಿರಕ್ಷರಸ್ಥರು ರಾಷ್ಟ್ರದ ಅಭಿವೃದ್ಧಿ ಕಾರ್ಯಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲಾರರು. ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಉತ್ತಮ ರೀತಿಯಲ್ಲಿ ಭಾಗವಹಿಸಬೇಕಾದರೆ ಅವರು ಮೊದಲು ಸುಶಿಕ್ಷಿತರಾಗಿರಬೇಕಾದುದು 'ಅವಶ್ಯಕ.'

ನಮ್ಮ ದೇಶದಲ್ಲಿ ಸಾಕ್ಷರತಾ ಪ್ರಮಾಣ ಬೆಳೆಯುತ್ತಿದ್ದರೂ ನಿರಕ್ಷರಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ನಮ್ಮ ರಾಜ್ಯದಲ್ಲಿಯೇ ಓದು ಬರಹ ಬಾರದವರ ಸಂಖ್ಯೆ ೨೩೦ ಲಕ್ಷಕ್ಕೂ ಮೀರಿದೆ. ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ಗಿರಿಜನರಲ್ಲಿ ಅನಕ್ಷರಸ್ಥರ ಸಂಖ್ಯೆಯ ಪ್ರಮಾಣ ಮತ್ತೂ ಹೆಚ್ಚು—೧೦೦ಕ್ಕೆ ೮೭ ರಷ್ಟು. ಮಹಿಳೆಯರಲ್ಲಿ ನಿರಕ್ಷರತಾ ಪ್ರಮಾಣ ಜಾಸ್ತಿ. ದೇಶದ ಪ್ರತಿ ಐದು ಮಂದಿ ಮಹಿಳೆಯರಲ್ಲಿ ನಾಲ್ಕು ಜನರು ನಿರಕ್ಷರರಿಗಳು. ಆದುದರಿಂದ ಮಹಿಳಾ ವಯಸ್ಕರ ಶಿಕ್ಷಣ ಕೇಂದ್ರಗಳು ಸ್ಥಾಪನೆಗೆ ಆದ್ಯತೆ ಕೊಡಲಾಗಿದೆ.

ಮಹಿಳೆಯರು ವಿದ್ಯಾವಂತರಾಗದ ಹೊರತು ಕುಟುಂಬ ಕಲ್ಯಾಣ ಅಸಾಧ್ಯ. ಒಬ್ಬ ಮಹಿಳೆ ಶಿಕ್ಷಿತಳಾದರೆ ಇಡೀ ಕುಟುಂಬವೇ ಶಿಕ್ಷಿತವಾದಂತೆ ಎಂದು ಪಂಡಿತ ಜವಹರಲಾಲ ನೆಹರೂರವರು ಹೇಳಿದ ಮಾತನ್ನು ಇಲ್ಲಿ ನಾವು ಸ್ಮರಿಸಬಹುದು. ಕುಟುಂಬ ಕಲ್ಯಾಣವಾಗದ ಹೊರತು ದೇಶ ಕಲ್ಯಾಣ ಆಗದು. ನಿರಕ್ಷರಸ್ಥ ವಯಸ್ಕರನ್ನು ಅದರಲ್ಲೂ ೧೫-೩೫ ವರ್ಷದವರನ್ನು ಸುಶಿಕ್ಷಿತರನ್ನಾಗಿ ಮಾಡುವುದೇ ವಯಸ್ಕರ ಶಿಕ್ಷಣದ ಮುಖ್ಯ ಗುರಿ. ವಯಸ್ಕರ ಶಿಕ್ಷಣವೆಂದರೆ, ಬರೀ ಅಕ್ಷರಾಭ್ಯಾಸ ಮಾತ್ರವಲ್ಲ, ಕ್ರಿಯಾತ್ಮಕ ಸಾಕ್ಷರತೆಯಿಂದ ಜನರಲ್ಲಿ ತಿಳಿವಳಿಕೆ ಉಂಟುಮಾಡುವುದು, ಅವರ ಆಲೋಚನೆಯಲ್ಲಿ ಬದಲಾವಣೆ ತರುವುದು, ಮೂಢನಂಬಿಕೆಗಳನ್ನು ಹೋಗಲಾಡಿಸುವುದು, ತಮ್ಮ ಹಕ್ಕು ಮತ್ತು ಜವಾಬ್ದಾರಿಯ ಬಗ್ಗೆ ಅರಿವು ಮೂಡಿಸುವುದು, ಆರ್ಥಿಕ ಅಭಿವೃದ್ಧಿಯನ್ನು ಪಡೆಯಲು ಅವರ ಕುಶಲತೆ ಮತ್ತು ಸಂಪನ್ಮೂಲಗಳನ್ನು ಹೆಚ್ಚಿಸಲು ಸಲಹೆ ಕೊಡುವುದು, ಆರೋಗ್ಯ ರಕ್ಷಣೆ, ಮಕ್ಕಳ ಪಾಲನೆ, ಮಿತ ಕುಟುಂಬದ ಅವಶ್ಯಕತೆ ಇವುಗಳ ಬಗ್ಗೆ ಜ್ಞಾನ ಒದಗಿಸುವುದು, ಪ್ರಗತಿ ಮತ್ತು ಉತ್ಪಾದನಾ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡುವುದು. ಒಟ್ಟಾರೆ ಹೇಳುವುದಾದರೆ, ಜನರು ಸಮಾಜದಲ್ಲಿ ಗುಣಮಟ್ಟ ಜೀವನ ನಡೆಸುವಂತೆ ಪ್ರೇರೇಪಿಸುವುದು ವಯಸ್ಕರ ಶಿಕ್ಷಣದ ವಿಧಾನ. ಹೀಗಾದರೆ ವಯಸ್ಕರ ಶಿಕ್ಷಣ ಜೀವನ ಶಿಕ್ಷಣವಾಗುತ್ತದೆ.

ನಮ್ಮ ದೇಶವನ್ನು ಕಾಡುತ್ತಿರುವ ಇನ್ನೊಂದು ಸಮಸ್ಯೆ ಜನಸಂಖ್ಯಾಸ್ಫೋಟ.

೧೯೮೧ರ ಜನಗಣತಿಯ ಪ್ರಕಾರ ಜನಸಂಖ್ಯೆ ರಾಷ್ಟ್ರದಲ್ಲಿ ೬೮೩ ಮಿಲಿಯ. ಕರ್ನಾಟಕದಲ್ಲಿ ೩೭ ಮಿಲಿಯ. ಈ ಜನಸಂಖ್ಯೆ ಏರಿಕೆಯು ಅಭಿವೃದ್ಧಿ ಯೋಜನೆಗಳ ಮೇಲೆ ತೀವ್ರವಾದ ಪರಿಣಾಮ ಬೀರಿದೆ. ದೇಶದ ಅಭಿವೃದ್ಧಿಗೆ ಜನಸಂಖ್ಯೆಯ ಬೆಳವಣಿಗೆಯು ಹತೋಟಿಯಲ್ಲಿರಬೇಕಾಗುವುದು. ಒಂದು ಕುಟುಂಬವು ಸುಖದಿಂದ ಬಾಳಲು ಅದರ ಗಾತ್ರವು ಸಹ ಕಡಿಮೆ ಇರುವುದು ಅಗತ್ಯ. ಕುಟುಂಬ ಮಿತವಾಗಿದ್ದರೆ ಬಾಳೂ ಹಿತ.

ಜನರು ಹಿಂದುಳಿಯುವುದಕ್ಕೆ ನಿರಕ್ಷರತೆ ಮತ್ತು ಜನಸಂಖ್ಯಾ ಸ್ಫೋಟವೇ ಮುಖ್ಯ ಕಾರಣಗಳು. ನಿರಕ್ಷರತೆಯನ್ನು ನಿವಾರಿಸುವ ಕಾರ್ಯಕ್ರಮದೊಟ್ಟಿಗೆ ಜನರಿಗೆ ಮಿತಕುಟುಂಬದ ಪ್ರಯೋಜನಗಳನ್ನು ವಿವರವಾಗಿ ತಿಳಿಯಪಡಿಸುವುದು ಸೂಕ್ತ ಮತ್ತು ಪರಿಣಾಮಕಾರಿ. ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಲು, ಆರೋಗ್ಯವನ್ನು ಕಾಪಾಡಲು, ಆರ್ಥಿಕ ಮಟ್ಟ ಏರಲು ಒಟ್ಟಾಗಿ ಜೀವನ ಗುಣ ಮಟ್ಟವನ್ನು ಏರಿಸಲು ಚಿಕ್ಕ ಸಂಸಾರವು ಅನುಕೂಲ ಎಂಬುದನ್ನು ಮನವರಿಕೆ ಮಾಡಿಕೊಡಬೇಕು.

ನಮ್ಮ ರಾಜ್ಯದಲ್ಲಿ ೧೫-೩೫ ವರ್ಷ ಮಿತಿಯುಳ್ಳ ನಿರಕ್ಷರಸ್ಥ ವಯಸ್ಕರ ಸಂಖ್ಯೆ ಜೀವನ ಪ್ರಸ್ತುತ ಸಾಲಿನಲ್ಲಿ ೬೦ ಲಕ್ಷ. ಇವರಲ್ಲಿ ಬಹುತೇಕ ಜನರು ಕುಟುಂಬ ನಡೆಸುವವರು. ಉಳಿದವರು ಮುಂದೆ ಕುಟುಂಬ ಜೀವನಕ್ಕೆ ಕಾಲಿಡತಕ್ಕವರು. ಇವರಲ್ಲಿ ಹೆಚ್ಚು ಮಂದಿ ಮಹಿಳೆಯರು ಮದುವೆಯಾಗುವವರು. ಈ ವಯಸ್ಸಿನಲ್ಲಿ ಮಕ್ಕಳಾಗುವ ಸಾಧ್ಯತೆಗಳೂ ಹೆಚ್ಚು. ಇವರಲ್ಲಿ ಬಡಜನರ ವರ್ಗಕ್ಕೆ ಸೇರಿದವರೇ ಹೆಚ್ಚು. ಅವರಲ್ಲೇ ಮೂಢನಂಬಿಕೆ ಹೆಚ್ಚು. ತಿಳಿವಳಿಕೆ ಕಡಿಮೆ. ಪರಿಣಾಮವಾಗಿ ದೊಡ್ಡ ಸಂಸಾರ. ಆದ್ದರಿಂದ ಚಿಕ್ಕ ಕುಟುಂಬದ ಅರಿವು ಮೂಡಿಸುವುದರಿಂದ ಪರಿಣಾಮ ಉತ್ತಮವಾಗುವುದು. ಸಾಮಾನ್ಯವಾಗಿ ವಿದ್ಯಾವಂತರಲ್ಲಿ ಅದರಲ್ಲೂ ಸುಶಿಕ್ಷಿತ ಮಹಿಳೆಯರಲ್ಲಿ ಮಿತಕುಟುಂಬ ಪ್ರಜ್ಞೆ ಹೆಚ್ಚು. ಅವಿದ್ಯಾವಂತರಲ್ಲಿ ಈ ಅರಿವು ಕಡಿಮೆ. ಆದುದರಿಂದ ವಯಸ್ಕರ ಶಿಕ್ಷಣದಲ್ಲಿ ಮಿತಕುಟುಂಬದ ಅರಿವನ್ನು ಅಳವಡಿಸಲಾಗಿದೆ. ವಯಸ್ಕರ ಶಿಕ್ಷಣ ಕೇಂದ್ರವು ೧೦ ತಿಂಗಳ ಅವಧಿಗೆ ಸೀಮಿತವಾಗಿದೆ. ಈ ಅವಧಿಯಲ್ಲಿ ಮಿತ ಕುಟುಂಬದ ಬಗ್ಗೆ ಪರಿಣಾಮಕಾರಿ ರೀತಿಯಲ್ಲಿ ಪಾಠ ಹೇಳಿಕೊಡುವುದಲ್ಲದೆ, ಚಲನಚಿತ್ರ ಪ್ರದರ್ಶನ, ತಜ್ಞರಿಂದ ವಿಶೇಷ ಉಪನ್ಯಾಸ ಹಾಗೂ ರೇಡಿಯೋ ಕಾರ್ಯಕ್ರಮ, ಲಾವಣಿ, ಗೀಗೀ ಪದಗಳು, ಸಣ್ಣಪುಟ್ಟ ನಾಟಕಗಳು ಮುಂತಾದ ಚಟುವಟಿಕೆಗಳಿಂದ ತಿಳಿಸಿಕೊಡಲಾಗುತ್ತಿದೆ. ಅಲ್ಲದೆ, ಮಿತ

ಕುಟುಂಬಕ್ಕೆ ಸಂಬಂಧಪಟ್ಟ "ಮನೆಯೊಂದು ಮಕ್ಕಳಿರಡು", "ಚಿಕ್ಕ ಸಂಸಾರ ಚೊಕ್ಕ ಸಂಸಾರ" "ಕುಟುಂಬ ಕಲ್ಯಾಣ ದೇಶ ಕಲ್ಯಾಣ" ಮುಂತಾದ ಹಲವಾರು ಉಪಯುಕ್ತ ಪುಸ್ತಕಗಳು ಓದು ಕಲಿತ ವಯಸ್ಕರಿಗಾಗಿಯೇ ಬರೆದವುಗಳಾಗಿದ್ದು, ಇವನ್ನು ಅವರು ಓದಲು ಒದಗಿಸಿಕೊಡಲಾಗುತ್ತಿದೆ. ಈ ದಿಸೆಯಲ್ಲಿ ವಯಸ್ಕರ ಶಿಕ್ಷಣ ಸಮಿತಿಯ ರಾಜ್ಯ ಸಂಪನ್ಮೂಲ ಕೇಂದ್ರ, ಮೈಸೂರು ಇವರಿಂದ ಹಲವು ಪ್ರಕಟಣೆಗಳು ಹೊರಡಿಸಲ್ಪಟ್ಟಿವೆ. ರಾಜ್ಯದಲ್ಲಿ ಅಲ್ಲಲ್ಲಿ ನಡೆಯುವ ವಸ್ತುಪ್ರದರ್ಶನದ ಸಂದರ್ಭದಲ್ಲಿ ವಯಸ್ಕರ ಶಿಕ್ಷಣ ಮತ್ತು ಕುಟುಂಬ ಕಲ್ಯಾಣದ ಬಗ್ಗೆ ಆಕರ್ಷಣೀಯ ಪ್ರಕಟನಾ ಭಿತ್ತಿಪತ್ರಗಳನ್ನು ಪ್ರದರ್ಶಿಸುವ ಏರ್ಪಾಡನ್ನೂ ಮಾಡಲಾಗುತ್ತಿದೆ.

ಈ ಕಾರ್ಯಕ್ರಮವನ್ನು ದೂರದರ್ಶನದ (ಟೆಲಿವಿಷನ್) ಮೂಲಕವೂ ಮುಂದೆ ಪ್ರಸಾರ ಮಾಡಲು ಸಾಧ್ಯತೆ ಇದೆ. ಮಿತಕುಟುಂಬ ಮತ್ತು ಕುಟುಂಬದ ಆರೋಗ್ಯ ಭಾಗ್ಯದ ಬಗ್ಗೆ ವಯಸ್ಕರ ಶಿಕ್ಷಣ ಕೇಂದ್ರದ ಅಧ್ಯಾಪಕರುಗಳಿಗೆ ಸೂಕ್ತ ತರಬೇತಿಯನ್ನು ವಯಸ್ಕರ ಶಿಕ್ಷಣ ಇಲಾಖೆಯಿಂದ ಕೊಡಲಾಗಿದೆ.

ವಯಸ್ಕರ ಶಿಕ್ಷಣವು ಮಿತಕುಟುಂಬದ ಬಗ್ಗೆ ತಿಳಿಸಲು ಉತ್ತಮ ಮಾಧ್ಯಮ. ವಯಸ್ಕರ ಶಿಕ್ಷಣ ಮತ್ತು ಅದರ ಮೂಲಕ ಮಿತ ಕುಟುಂಬದ ಅರಿವು, ಇವುಗಳಿಂದ ಕುಟುಂಬ ಕಲ್ಯಾಣವಾಗಿ ದೇಶ ಕಲ್ಯಾಣವಾಗುವುದೆಂದು ನಿರೀಕ್ಷಿಸುವ. ಆಗ ಗಾಂಧೀಜಿಯವರ "ಕಲ್ಯಾಣ ರಾಜ್ಯದ" ಕನಸು ನೆನಸಾಗುವುದು.

ಬಿ. ಅಹಲ್ಯ ಅಚ್ಚಯ್ಯ

ಮತವಿಚಾರಣವಲ್ಲಿ ಬಲಾತ್ಕಾರ ಕೂಡದು. ನಂಬಿಕೆ ದೇವರಿಂದಲೇ ಬರಬೇಕಾದು. ಆದುದರಿಂದ ಜನರಲ್ಲಿ ಬಲಾತ್ಕಾರದಿಂದ ನಂಬಿಕೆಯನ್ನು ಹುಟ್ಟಿಸಲು ಪ್ರಯತ್ನಿ ಮಾಡಬೇಡಿರಿ.

—ಮುಹಮ್ಮದ ಪೈಗಂಬರ್

ಗುರಿಯಿಲ್ಲದ ಸಾಧನೆಗಳಿಂದ ಏನೂ ಉಪಯೋಗವಿಲ್ಲ. ಗುರಿಯಷ್ಟೇ ಸಾಧನಗಳೂ ನಿರ್ಮಲವಾಗಿರಬೇಕು.

—ಗಾಂಧೀಜಿ

ಸುಟ್ಟಗಾಯಗಳಾದಾವು ಎಚ್ಚರ!

ಪ್ರತಿವರ್ಷ ಲಕ್ಷಾಂತರ ಭಾರತೀಯರು ಸುಟ್ಟಗಾಯಗಳಿಂದ ನರಳುತ್ತಾರೆ. ಕೇವಲ ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡರೆ ಸಾಕು, ಈ ನೋವು ತರುವ ಗಾಯಗಳಾಗದಂತೆ ತಡೆಯಬಹುದು.

ಮುಂಬಯಿಯ ಗೃಹಿಣಿ ಅನಿತಾ ಆನಂದಳಿಗೆ ಮಧ್ಯರಾತ್ರಿಯಲ್ಲಿ ಎಚ್ಚರವಾಯಿತು. ಅವಳ ಗಂಡುಮಗು ಅಳುತ್ತಿದೆ. ಅವನಿಗೆ ಹಾಲು ಕಾಯಿಸಲೆಂದು ಗಡಿಬಿಡಿಯಿಂದೆದ್ದು ಅಡಿಗೆಮನೆಗೆ ಓಡಿದಳು. ನಿದ್ದೆಗಣ್ಣಿನಲ್ಲಿ ಗ್ಯಾಸ್ ಒಲೆಯನ್ನು ಹಚ್ಚುತ್ತಿದ್ದಾಗ ಉರಿವ ಬೆಂಕಿಕಡ್ಡಿ ಅವಳ ಕೈಯಿಂದ ಜಾರಿಬಿತ್ತು. ಅವಳು ಉಟ್ಟ ವಾಯಿಲ್ ಇರುಳುಡುಗೆಗೆ ತಗುಲಿತು. ಅನಿತಾಳ ಕಾಲುಗಳಿಗೆ ಉರಿ ತಾಕಿತು. ಅವಳಿಗೆ ಬೆಂಕಿ ಬಿದ್ದಿತು.

ಬೆಂಕಿಯ ಜ್ವಾಲೆ ಮೇಲುಮೇಲಕ್ಕೆ ಏರುತ್ತಿದ್ದಂತೆ, ಆಕೆ ಚೀರಿಕೊಂಡು ಹೊರಗೆ ಓಡಿಬಂದಳು. ಅವಳ ಗಂಡ ಮಲಗುಕೋಣೆಯಿಂದ ಧಾವಿಸಿದವನೆ, ಅವಳುಟ್ಟಿದ್ದ ಉಡುಗೆಯನ್ನು ಹರಿದೊಗೆದ, ಕುಟುಂಬ ವೈದ್ಯನಿಗೆ ಫೋನ್ ಮಾಡಿದ. ವೈದ್ಯರು ಬಂದು ಅನಿತಾಳ ನೋವು ಶಮನಕ್ಕಾಗಿ ಮಾರ್ಫೀನ್ ಇಂಜಕ್ಷನ್ ಕೊಟ್ಟರು. ನಂತರ ಅವಳನ್ನು ಆಂಬುಲೆನ್ಸ್ ವಾಹನದಲ್ಲಿ ಮುಂಬಯಿ ಭಾಟಿಯಾ ಜನರಲ್ ಆಸ್ಪತ್ರೆಯ ಸುಟ್ಟಗಾಯ ಚಿಕಿತ್ಸಾ ಕೇಂದ್ರಕ್ಕೆ ಕರೆದೊಯ್ಯಲಾಯಿತು.

ಆಸ್ಪತ್ರೆಯ ಸುಟ್ಟಗಾಯ ತಜ್ಞ ತಂಡದ ಮುಖ್ಯರು ಪ್ಲಾಸ್ಟಿಕ್ ತಜ್ಞ ವೈದ್ಯ ನರೇಂದ್ರ ಪಾಂಡ್ಯ. ಅನಿತಾ ಆಳ ಆಘಾತಕ್ಕೆ ಒಳಗಾಗಿದ್ದಳು. ಹೆಚ್ಚುಕಡಿಮೆ ಅವಳ ಅರ್ಧಮೈ ಬೆಂದುಹೋಗಿತ್ತು. ಈ ಸುಟ್ಟಗಾಯಗಳಲ್ಲಿ ಶೇಕಡ ೩೦ ಭಾಗ ತೀವ್ರ ಗಾಯಗಳಾಗಿದ್ದವು. ಡಾ|| ಪಾಂಡ್ಯ ಅವರು ತಕ್ಷಣವೇ ಅವಳಿಗೆ ರಕ್ತನಾಳಕ್ಕೆ ನೇರವಾಗಿ ಪ್ಲಾಸ್ಮಾ, ಗ್ಲೂಕೋಸ್ ಹಾಗೂ ಲವಣ ದ್ರಾವಣವನ್ನು ಕೊಡುವ ವ್ಯವಸ್ಥೆ ಮಾಡಿದರು. ಇದರಿಂದಾಗಿ ಅವಳ ದೇಹದಿಂದ ನಷ್ಟವಾದ ದ್ರವವನ್ನು ತುಂಬಿಕೊಟ್ಟಂತಾಯಿತು. ಆಂತರಿಕ ಸೋಂಕನ್ನು

೧೯೮೨ರ ಮೇ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ "ಬಿವೇರ್ ಆಫ್ ಬರ್ನ್ಸ್" ಲೇಖನದ ಅನುವಾದ.

ನಿವಾರಿಸಲು ಪ್ರತಿಮದ್ದನ್ನೂ ನೋವು ನಿವಾರಣೆಗೆ ಇನ್ನೂ ಹೆಚ್ಚು ಮಾರ್ಫೀನ್‌ನ್ನು ಕೊಟ್ಟರು. ಅನಿತಾಳ ಗಾಯಗಳನ್ನು ತೊಳೆದು ಶುದ್ಧಮಾಡಲಾಯಿತು; ಸುಟ್ಟ ಚರ್ಮದ ತುಣುಕುಗಳನ್ನು ತೆಗೆಯಲಾಯಿತು, ಪ್ರತಿವಿಷವಾದ ಸಿಲ್ವರ್ ಸಲ್ಫಡಯಾಜೈನ್ ಉಳ್ಳ ಕೆನೆ ಮುಲಾಮನ್ನು ನೋವು ಕಿಂದ ಜಾಗಗಳಿಗೆ ಹಚ್ಚಲಾಯಿತು. ಅವಳ ಕೈಗಳಿಗೆ ಬ್ಯಾಂಡೇಜ್ ಮಾಡಲಾಯಿತು. ಅವಳ ದೇಹದ ಮೇಲೆ ಸಡಿಲವಾದ ಕ್ರಿಮಿಶುದ್ಧಿಗೊಳಿಸಿದ ಹೊದಿಕೆಯನ್ನು ಹೊದಿಸಲಾಯಿತು.

೪೮ ಗಂಟೆಗಳ ಆತಂಕಕಾರಿ ಗಡುದಾಟಿದ ಮೇಲೆ ಅನಿತಾಳ ಪರಿಸ್ಥಿತಿ ಒಂದು ಹದಕ್ಕೆ ಬಂದಿತು. ಆದರೂ ಇನ್ನೆರಡು ತಿಂಗಳು ಅವಳು ಆಸ್ಪತ್ರೆಯನ್ನು ಬಿಡುವಂತಿರಲಿಲ್ಲ. ಅನಿತಾಳ ಮೇಲುಗಾಯಗಳು ಮಾಗುತ್ತಿದ್ದಂತೆಯೇ ಆಳ ಸುಟ್ಟಗಾಯಗಳ ಭಾಗಗಳಲ್ಲಿನ ನಶಿಸಿದ ಚರ್ಮವನ್ನು ವೈದ್ಯರು ಕತ್ತರಿಸಿ ತೆಗೆದರು. ಅರಿವಳಿಕೆಯನ್ನು ಬಳಸಿ ಹಸಿಯಾದ ಮೃದು ಮಾಂಸಲವಿದ್ದ ತೆರೆದ ಗಾಯಗಳಿಗೆ ಚಿಕಿತ್ಸೆ ನೀಡಲಾಯಿತು. ಅನಂತರ ಸೀಮಿತ ಶಸ್ತ್ರಚಿಕಿತ್ಸೆಯನ್ನು ಅವಳು ತಡಕೊಳ್ಳುವಂತಾದಾಗ, ಡಾ|| ಪಾಂಡ್ಯ ಅವರು ಅವಳ ತೊಡೆ ಮತ್ತು ತೋಳುಗಳಲ್ಲಿ ಸುಡದ ಭಾಗಗಳಿಂದ ಚರ್ಮವನ್ನು ಕತ್ತರಿಸಿಕೊಂಡು ಸುಟ್ಟ ಭಾಗಗಳ ಮೇಲೆ ಕಸಿ ಚಿಕಿತ್ಸೆ ನಡೆಸಿದರು. ಚಲನವಲನಗಳಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಕೀಲುಗಳ ಮೇಲಿನ ಗಾಯಗಳಿಗೇ ಆದ್ಯತೆ ಕೊಟ್ಟರು. ಕಸಿ ಚಿಕಿತ್ಸೆಯಿಂದಾಗಿ ಗಾಯ ಮಾಗುವ ಕ್ರಿಯೆ ತ್ವರಿತಗೊಂಡಿತು. ವಾರಗಳು ಕಳೆಯುವಷ್ಟರಲ್ಲಿ ಎಲ್ಲ ಭಾಗಗಳೂ ಹೊಸ ಚರ್ಮವನ್ನು ಪಡೆದವು.

ಪ್ರತಿ ವರ್ಷ ತೀವ್ರ ಸುಟ್ಟಗಾಯಗಳಿಗೆ ಬಲಿಯಾಗುವ ಸುಮಾರು ೮,೪೦೦೦ ಭಾರತೀಯರಲ್ಲಿ ಅನಿತಾ ಒಬ್ಬಳು. ಅದೃಷ್ಟವಶಾತ್ ತ್ವರಿತ ವೈದ್ಯಕೀಯ ಗಮನ ಹಾಗೂ ಸಕಾಲಿಕ ಕಸಿ ಚಿಕಿತ್ಸೆಯಿಂದ ಇವಳು ಶಾಶ್ವತವಾಗಿ ಅಂಗವಿಕಲವಾಗುವುದು ತಪ್ಪಿತು, ಪ್ರಧಾನ ಶಸ್ತ್ರಚಿಕಿತ್ಸೆಯ ಅಗತ್ಯವೂ ಬೀಳಲಿಲ್ಲ. ಕನಿಷ್ಠ ಪಕ್ಷ ೧,೨೦,೦೦೦ ಭಾರತೀಯರು ಸುಟ್ಟಗಾಯಗಳಿಂದ ಸಾಯುತ್ತಾರೆ. ಅಲ್ಲದೆ ಇನ್ನೂ ಲಕ್ಷಾಂತರ ಮಂದಿ ಪ್ರತಿವರ್ಷ ಸಣ್ಣಪುಟ್ಟ ಸುಟ್ಟಗಾಯ ಹಾಗೂ ಬೊಬ್ಬೆಗಳಿಂದ ನರಳುತ್ತಾರೆ.

ಶೇಕಡ ಎಪ್ಪತ್ತೈದಕ್ಕೂ ಹೆಚ್ಚು ಮಂದಿಗೆ ಸುಟ್ಟಗಾಯಗಳಾಗುವುದು ಮನೆಯಲ್ಲಿನ ಅವಘಡಗಳಿಂದಲೇ. ಬಹುತೇಕವಾಗಿ ಇವಕ್ಕೆ ಬಲಿಯಾಗುವವರು ಹೆಂಗಸರು ಮತ್ತು ಮಕ್ಕಳು. ಭಾರತದ ಸುಟ್ಟಗಾಯ ಸಂಘದ ಕಾರ್ಯದರ್ಶಿ

ಡಾ| ಎಂ. ಎಚ್. ಕೇಸ್ವಾನಿ ಅವರ ಅಭಿಪ್ರಾಯ ಹೀಗೆ:

"ಒಂದೇ ಬಾಗಿಲಿನ ಒಂದೇ ಕೋಣೆಯ ನಿವಾಸಗಳು, ನೆಲದಮೇಲೆ ಅಡಿಗೆ ಮಾಡುವುದು, ದೋಷಪೂರ್ಣ ಒಲೆ ಹಾಗೂ ವಿದ್ಯುತ್ ಉಪಕರಣಗಳು, ನೆಲದ ಮೇಲೆ ಚೆಲ್ಲಾಡುವಂಥ ಉಡುಗೆಗಳು, ಜೊತೆಗೆ ಅಜ್ಞಾನ ಹಾಗೂ ಎಚ್ಚರಗೇಡಿತನ ಸೇರಿಕೊಂಡು ಈ ಅಪಘಾತಗಳನ್ನುಂಟುಮಾಡುತ್ತವೆ".

ದೀಪಾವಳಿ ದಾಂಧಲೆ: "ಹಬ್ಬದ ದಿನಗಳಲ್ಲಿ ಅದರಲ್ಲೂ ದೀಪಾವಳಿ ಕಾಲದಲ್ಲಿ ಸುಟ್ಟಗಾಯ ಪ್ರಕರಣಗಳು ಯಾವಾಗಲೂ ಹೆಚ್ಚು. ಈ ಸಂತೋಷ ಕರ ಸಂದರ್ಭಗಳು ಅಗ್ನಿಶಾಮಕದಳದವರಿಗೆ, ವೈದ್ಯರಿಗೆ, ನರ್ಸ್‌ಗಳಿಗೆ ಎಂದೂ ಸಂತೋಷ ತಂದಿಲ್ಲ". ಎಂದು ಮುಂಬಯಿಯ ಅಗ್ನಿಶಾಮಕದಳದ ಮುಖ್ಯರಾದ ಎಲ್. ಎಸ್. ಡಿ. ಮೆಹರ್‌ವಾನ್‌ಜೀ ಹೇಳುತ್ತಾರೆ. ಅಡಿಗೆ ಚಟುವಟಿಕೆಯ ಕಾಲದಲ್ಲಿ ನಿರ್ಲಕ್ಷ್ಯದಿಂದ ಒಲೆಯ ಬಳಿ ಓಡಾಡುವುದು, ಪಟಾಕಿಗಳನ್ನು ಅವಿವೇಕದಿಂದ ಹಚ್ಚಿಸುವುದು ಮೊದಲಾದವಿಂದ ಅಪಘಾತಗಳುಂಟಾಗುತ್ತವೆ. ಕಳೆದ ದೀಪಾವಳಿ ಸಮಯದಲ್ಲಿ ಮುಂಬಯಿ ಅಗ್ನಿಶಾಮಕದಳದವರು ೧೭೩ ಬೆಂಕಿ ಕರೆಗಳಿಗೆ ಓಗೊಡಬೇಕಾಯಿತು. ದೆಹಲಿ ಅಗ್ನಿಶಾಮಕದಳವರು ಇದರ ಇಮ್ಮಡಿ ಸಂಖ್ಯೆ ಕರೆಗಳಿಗೆ ಓಗೊಟ್ಟರು. ಮಧುರೈ ಬಳಿಯ ಶಿವಕಾಶಿಯಲ್ಲಿ ಪಟಾಕಿ ಕಾರ್ಖಾನೆಯಲ್ಲಿ ಹತ್ತಿದ ಬೆಂಕಿ ೩೨ ಮಂದಿಯನ್ನು ಬಲಿ ತೆಗೆದು ಕೊಂಡಿದ್ದಲ್ಲದೆ ಅನೇಕ ಮಳಿಗೆಗಳನ್ನು ಸುಟ್ಟು ನೆಲಸಮ ಮಾಡಿತು.

ಸುಟ್ಟಗಾಯಗಳಿಗೆ ಚಿಕಿತ್ಸೆ ನೀಡಿ, ಚೇತರಿಸಿಕೊಳ್ಳುವುದು ಅನೇಕ ಅಂಶಗಳ ಮೇಲೆ ಅವಲಂಬಿಸಿದೆ. ಸಾಮಾನ್ಯವಾಗಿ ಭಾರತದಲ್ಲಿ ದೇಹದ ಶೇಕಡ ಐದು ಭಾಗಕ್ಕಿಂತ ಕಡಿಮೆ ಭಾಗಗಳಲ್ಲಿ ಸುಟ್ಟಗಾಯಗಳಿದ್ದರೆ ಅದನ್ನು ಗೌಣ ಎಂದು ಪರಿಗಣಿಸಲಾಗುತ್ತದೆ. ಶೇಕಡ ಹದಿನೈದಕ್ಕೂ ಹೆಚ್ಚು ದೇಹ ಭಾಗಗಳು ಸುಟ್ಟಿ ದ್ದರೆ ಆಸ್ಪತ್ರೆಗೆ ಸೇರಿಸುವುದು ಅನಿವಾರ್ಯ. ಶೇಕಡ ೩೦ರಷ್ಟು ಭಾಗ ಬೆಂದು ಹೋಗಿದ್ದರೆ ಪರಿಸ್ಥಿತಿ ಚಿಂತಾಜನಕ; ಶೇಕಡ ೬೦ಕ್ಕಿಂತ ಹೆಚ್ಚು ಭಾಗ ಸುಟ್ಟಿದ್ದ ರಂತೂ ಅದು ಮರಣಾಂತಿಕ. ಮುಖ, ಕೈಗಳು ಅಥವಾ ಜನನೇಂದ್ರಿಯ ಭಾಗ ಗಳಲ್ಲಿ ಸುಟ್ಟಗಾಯಗಳಾದರೆ ವಿಶೇಷ ಗಮನವನ್ನು ನೀಡಬೇಕು. ಸುಟ್ಟಗಾಯ ಗಳಿಗೆ ಬಲಿಯಾದವರು ಮಕ್ಕಳಾಗಿದ್ದರೆ, ವೃದ್ಧರಾಗಿದ್ದರೆ ಅಥವಾ ಸರಿಯಾದ ಆಹಾರ ಪೋಷಣೆಯಿಲ್ಲದೆ ದುರ್ಬಲರಾಗಿದ್ದರೆ ಅವರು ಚೇತರಿಸಿಕೊಳ್ಳುವ ಸಾಧ್ಯತೆ ವಿರಳ.

ಹಬೆ ಅಥವಾ ಕುದಿಯುವ ದ್ರವಗಳಿಂದುಂಟಾಗುವ ಬೊಬ್ಬೆಗಳಂಥ ಸಂದರ್ಭ

ಗಳಲ್ಲಿ ಕೇವಲ ದೇಹದ ಹೊರಚರ್ಮ ಮಾತ್ರ ಸುಟ್ಟಿರುತ್ತದೆ. ಸುಮಾರು ಎರಡು ವಾರಗಳಲ್ಲಿ ಅಂಥ ಹೆಚ್ಚು ಕಲೆಗಳನ್ನುಳಿಸದ ಚರ್ಮ ಗುಣವಾಗುತ್ತದೆ. ಆದರೆ ಒಳಚರ್ಮವೇ ಬೆಂದುಹೋದರೆ ಅಂಗಾಂಶ ಗುಣವಾಗುವುದು ನಿಧಾನ, ಜೊತೆಗೆ ಕಲೆಗಳೂ ಉಳಿಯುತ್ತವೆ. ವಿದ್ಯುತ್, ಆಮ್ಲ, ವಿಕಿರಣ ಬಟ್ಟೆ ಸುಡು ವುದು ಮೊದಲಾದವುಗಳಿಂದ ಉಂಟಾಗುವ ಇನ್ನೂ ಆಳ ಸುಟ್ಟಗಾಯಗಳು ಗುಣವಾಗಲು ತಿಂಗಳುಗಳೇ ಹಿಡಿಯುತ್ತವೆ. ಚರ್ಮ ಕಸಿ ಕಟ್ಟುವುದು ಹಾಗೂ ಪುನರ್ರಚನಾ ಶಸ್ತ್ರಚಿಕಿತ್ಸೆಗಳ ಸಹಾಯದಿಂದ ಗುಣವಾಗುವುದನ್ನು ತೀವ್ರ ಗೊಳಿಸಬಹುದು, ಕಲೆಗಳನ್ನು ಇಲ್ಲವಾಗಿಸಬಹುದು.

ನಿಮ್ಮ ಮನೆಯಲ್ಲಿ ಕೆಲವೇ ಕೆಲವು ಸರಳವಾದ ಮುನ್ನೆಚ್ಚರಿಕೆಗಳನ್ನು ತೆಗೆದು ಕೊಂಡರೆ ಸಾಕು, ನೀವು ಸುಟ್ಟಗಾಯ ರೋಗಿಯಾಗುವುದರಿಂದ ತಪ್ಪಿಸಿಕೊಳ್ಳ ಬಹುದು. ಸುಟ್ಟಗಾಯಕ್ಕೊಳಗಾಗುವ ಸ್ತ್ರೀಯರಲ್ಲಿ ಶೇಕಡ ೪೦ ಮಂದಿ ಗ್ಯಾಸ್ ಒತ್ತಡ ಒಲೆಯ ಅವಘಡಗಳಲ್ಲಿ ಸಿಕ್ಕಿಕೊಂಡವರೇ. ಬಹುತೇಕ ಗ್ಯಾಸ್ ಒಲೆಗಳ ಅಪಘಾತಗಳು ಅದನ್ನು ಹಚ್ಚುತ್ತಿರುವಾಗಲೇ ಸಂಭವಿಸುವುವು ಎಂದು ಒಂದು ಸರ್ವೇಕ್ಷಣೆಯಿಂದ ತಿಳಿದುಬಂದಿದೆ. ಸೀಮೆಎಣ್ಣೆ ಸ್ಟೌವ್‌ಗಳನ್ನು ಪಂಪ್ ಮಾಡುವಾಗ ಅತಿ ಹೆಚ್ಚು ಮಾಡುವುದು, ಇಲ್ಲವೇ ತಪ್ಪುತಪ್ಪಾಗಿ ಮಾಡು ವುದು, ಬರ್ನರ್‌ಗಳನ್ನು ಸರಿಯಾಗಿ ಶುದ್ಧಮಾಡದಿರುವುದು, ಇಂಧನ ಟ್ಯಾಂಕನ್ನು ಪೂರಾ ತುಂಬುವುದು ಇತ್ಯಾದಿಗಳು ಅಪಘಾತಕ್ಕೆ ಕಾರಣಗಳಾಗು ವುದುಂಟು. ಸ್ಟೌವ್‌ಗೆ ತೀರಾ ಸಮೀಪವಾಗಿ ಬಗ್ಗಿ ನಿಲ್ಲುವುದು ಕೂಡ ಬಟ್ಟೆ ಅಥವಾ ಕೂದಲಿಗೆ ಬೆಂಕಿ ಬೀಳಲು ಸಹಕಾರಿ. ಆದ್ದರಿಂದ ಸ್ಟೌವ್‌ಗೆ ಸ್ವಲ್ಪ ದೂರಾಗಿ ನಿಲ್ಲಬೇಕು; ಉದ್ದನೆಯ ಕೂದಲುಗಳನ್ನು ಚೆಲ್ಲಾಪಿಲ್ಲಿಯಾಗಿ ಬಿಡದೆ ಜಡೆಯಾಗಿ ಇಲ್ಲ ಮುಡಿಯಾಗಿ ಕಟ್ಟಬೇಕು.

ಗ್ಯಾಸ್ ಒಲೆಗಳಲ್ಲಿ ಇನ್ನೊಂದು ಬಗೆಯ ತೊಂದರೆ ಇದೆ. ಮುಂಬಯಿಯ ಶರದ್‌ರಾಣೆಯ ಮನೆಯಲ್ಲಿ ನಡೆದ ಘಟನೆ ಹೀಗೆ. ಅವನ ಮನೆಯ ಗ್ಯಾಸ್ ಒಲೆಯ ರಬ್ಬರ್ ನಳಿಗೆಯನ್ನು ಇಲಿ ಕಚ್ಚಿಹಾಕಿತು. ಈ ರಬ್ಬರ್ ನಳಿಗೆ ಗ್ಯಾಸ್ ಸಿಲಿಂಡರ್ ಮತ್ತು ಒಲೆಯ ಬರ್ನರ್‌ಗೆ ಸಂಪರ್ಕ ಕಲ್ಪಿಸುವಂಥಾದ್ದು. ಅವನು ಒಲೆ ಆರಿಸುವಾಗ ಒಲೆಯ ಬಳಿಯ ಸ್ವಿಚ್ ಮಾತ್ರ ಆರಿಸಿದ್ದನೇ ಹೊರತು ಸಿಲಿಂಡರ್ ಬಳಿಯ ಮುಖ್ಯ ಕವಾಟವನ್ನು ಮುಚ್ಚಿರಲಿಲ್ಲ. ಹಾಗಾಗಿ ರಂಧ್ರಗೊಂಡ ನಳಿಗೆ ಯಿಂದ ಗ್ಯಾಸ್ ಸೋರಿ ಅಡಿಗೆ ಮನೆಯಲ್ಲಿ ಮಡುಗಟ್ಟಿತ್ತು. ಕಿಡಿ ಸೋಕಿದ ಕ್ಷಣವೇ ಭಗ್ಗೆಂದಿತು. ರಾಣೆ ಮತ್ತು ಅವನ ಕುಟುಂಬ ಸಣ್ಣಪುಟ್ಟ ಗಾಯ

ಗಳೊಂದಿಗೆ ಪಾರಾದರು. ಅವರ ಮನೆ ಪೂರ್ತಾ ಆಹುತಿಯಾಯಿತು.

ಸೂಚನೆಗಳನ್ನು ಪಾಲಿಸಿ : ಸಿಲಿಂಡರ್‌ನ ಮುಖ್ಯ ಕವಾಟವನ್ನು ತೆರವಿಡಲೇಬಾರದು. ದ್ರವೀಕೃತ ಪೆಟ್ರೋಲಿಯಂ ಅತ್ಯಂತ ಬೇಗನೆ ಹತ್ತಿಕೊಳ್ಳುವಂಥಾದ್ದು. ಭಗ್ಗನೆ ಬೆಂಕಿಯಾಗುವಂಥಾದ್ದು. ಮುಖ್ಯ ಕವಾಟವನ್ನು ತೆರೆದು, ಸ್ಟೌವ್ ಸ್ವಿಚನ್ನು ಹಾಕಿ ಆಮೇಲೆ ಬೆಂಕಿಕಡ್ಡಿಗಾಗಿ ಹುಡುಕಾಡುವುದೂ ಅಪಾಯಕಾರಿ.

ನೆಲದಮೇಲೆ ಒಲೆ ಇಟ್ಟು ಅಡಿಗೆ ಮಾಡುವುದು ಇನ್ನೊಂದು ಸಾಮಾನ್ಯ ಕಾರಣ. ಒಲೆಯ ಮೇಲೆ ಅಟ್ಟದಲ್ಲಿನ ಪದಾರ್ಥಗಳನ್ನು ತೆಗೆಯಲು ಗೃಹಿಣಿ ಪ್ರಯತ್ನಿಸುವಾಗ ಅವಳ ಸೀರೆಗೆ ಬೆಂಕಿ ತಗಲುವುದು ಅಂಥ ಕಷ್ಟವೇನಲ್ಲ. ಕಾರ್ಖಾನೆಯಲ್ಲಿ ತಯಾರಾದ ಕೃತಕ ಎಳೆಗಳ ಬಟ್ಟೆಯ ಉಡುಗೆಗಳನ್ನು ಅಡಿಗೆ ಮನೆಯಲ್ಲಿ ಧರಿಸುವುದೂ ಬೆಂಕಿ ಅಪಘಾತಗಳಿಗೆ ಆಹ್ವಾನ ನೀಡಿದಂತೆ. ಕೃತಕ ಎಳೆಗಳ ಬಟ್ಟೆಗಳು ಬಹುಬೇಗ ಹತ್ತಿಕೊಳ್ಳುವಂಥವು, ಅಲ್ಲದೆ ಅವು ಬೆಂಕಿಗೆ ಕರಗುತ್ತಿದ್ದಂತೆ ಚರ್ಮಕ್ಕೆ ಬಲವಾಗಿ ಅಂಟಿಕೊಂಡು ತೀವ್ರ ಸುಟ್ಟಗಾಯಗಳನ್ನುಂಟುಮಾಡುತ್ತವೆ. ಸೀರೆ ತುದಿಗೆ ಬೆಂಕಿ ಬಿದ್ದೊಡನೆ, ದೇಹ ಹಾಗೂ ಬಟ್ಟೆಯ ನಡುವಣ ಪ್ರದೇಶ ಚಿಮಣಿಯ ತರ ಕೆಲಸಮಾಡಿ ಹೆಚ್ಚು ಹೆಚ್ಚು ಗಾಳಿಯನ್ನು ಒಳಗೆ ಸೇದಿಕೊಂಡು ಬೆಂಕಿಯನ್ನು ಉಲ್ಬಣಗೊಳಿಸುತ್ತದೆ. ಇಂಥ ಅಪಘಾತಗಳನ್ನು ತಪ್ಪಿಸಲು ಗೃಹಿಣಿಯರು ಹತ್ತಿಬಟ್ಟೆಗಳನ್ನೇ ಉಡಬೇಕು, ಉಬ್ಬಿಕೊಳ್ಳುವಂಥಾ ಉಡುಗೆಗಳನ್ನು ಧರಿಸಬಾರದು, ಸೀರೆಯ ಅಂಚನ್ನು ತೇಲಾಡಲು ಬಿಡಬಾರದು. ಸೊಂಟಮಟ್ಟದ ಕಟ್ಟೆಯಮೇಲೆ ಒಲೆ ಇಟ್ಟು ಅಡಿಗೆ ಮಾಡಬೇಕು, ಮೇಜನ್ನಾದರೂ ಬಳಸಬೇಕು, ಈ ಕಟ್ಟೆ ಅಥವಾ ಮೇಜಿನ ಕೆಳಭಾಗದ ಜಾಗದಲ್ಲಿ ಅಡಿಗೆ ಸರಕುಗಳನ್ನು ಇಟ್ಟುಕೊಳ್ಳಬಹುದು.

ಒಲೆಯ ಮೇಲಿನ ಬಿಸಿ ಪಾತ್ರೆಗಳನ್ನು ಇಳಿಸಲು ಅನೇಕ ಸ್ತ್ರೀಯರು ಬಟ್ಟೆಗಳನ್ನು ಬಳಸುತ್ತಾರೆ, ಅದರ ತುದಿ ಬೆಂಕಿಯ ಜ್ವಾಲೆಗೆ ತಗಲುವ ಸಂಭವ ಬಹಳ ಹೆಚ್ಚು. ಪ್ರೆಷರ್ ಕುಕ್ಕರ್‌ಗಳಿಂದ ಅಡಿಗೆ ಮಾಡುವುದರಿಂದ ಸಮಯ, ಇಂಧನ, ವಿಟಮಿನ್ ಎಲ್ಲ ಉಳಿತಾಯವಾಗುವುದಾದರೂ ಅದನ್ನು ಬಳಸುವ ಕ್ರಮದ ಸೂಚನೆಗಳನ್ನು ಪಾಲಿಸದಿದ್ದರೆ ಅಪಾಯ ಖಂಡಿತ. ಪಾತ್ರೆಯಲ್ಲಿ ಇರಬೇಕಾದಷ್ಟು ನೀರು ಯಾವಾಗಲೂ ಇರಬೇಕು, ಸಿಳ್ಳಿನ ಶಬ್ದ ಕೇಳಬಂದೊಡನೆ ಉರಿಯನ್ನು ಇಳಿಸಬೇಕು. ಇದರ ಮುಚ್ಚಳವನ್ನು ಬಲ ಪ್ರಯೋಗಿಸಿ ತೆರೆಯಲೇಬಾರದು.

ಬಾಗಿಲು ಬಡಿದ ಶಬ್ದ ಅಥವಾ ಫೋನ್ ಕಿಣಿಕಿಣಿಸುವ ಶಬ್ದ ಕೇಳಿ ಬಂದೊಡನೆ ವಿದ್ಯುತ್ ಒಲೆ ಅಥವಾ ಇಸ್ತ್ರಿಪೆಟ್ಟಿಗೆಯನ್ನು ಹಾಗೇ ಬಿಟ್ಟು ಓಡಿ ಹೋದಾಗಲೂ ಅನೇಕ ಬೆಂಕಿ ಅಪಘಾತಗಳಾಗಿವೆ.

ತಮ್ಮ ಮನೆಯ ವಿದ್ಯುತ್ ಸಾಕೆಟ್‌ಗಳಿಗೆ ಹೆಚ್ಚು ಉಪಕರಣಗಳ ಭಾರ ಹೇರುವುದು, ಜೊತೆಗೆ ತಾವು ಮನೆಯಲ್ಲಿ ಇಲ್ಲದಾಗ ಸ್ವಿಚ್‌ಗಳನ್ನು ಹಾಕಿ ಹೋಗುವುದು ಇಲ್ಲದೆಹೋದ ಪಕ್ಷದಲ್ಲಿ ವಿದ್ಯುತ್ ಆಘಾತ ಹಾಗೂ ಸುಟ್ಟ ಗಾಯಗಳ ಪ್ರಕರಣಗಳು ಬಹಳ ಕಡಿಮೆ ಇರುತ್ತಿದ್ದವು ಎಂದು ತಜ್ಞರೊಬ್ಬರು ಅಭಿಪ್ರಾಯ ಪಡುತ್ತಾರೆ. ಮನೆಯ ವಿದ್ಯುತ್ ಸರಬರಾಜು ಪ್ರಮಾಣ ಸಾಮಾನ್ಯವಾಗಿ ೨೨೦ ರಿಂದ ೨೪೦ ವೋಲ್ಟ್‌ಗಳಷ್ಟು. ಈ ವಿದ್ಯುತ್ ದೇಹ ಸಂಪರ್ಕಕ್ಕೆ ಬಂದರೆ ಮರಣಾಂತಿಕ. ತೇವಗೊಂಡ ಕೈಗಳಿಂದ ಸ್ವಿಚ್ ಮುಟ್ಟು ವುದು ಅಥವಾ ಪ್ಲಗ್‌ಗಳನ್ನು ಎಳೆಯುವುದು ಅಪಾಯಕಾರಿ. ವಿದ್ಯುತ್ ಪ್ಲಗ್ ಗಳ ಮೇಲೆ ಭಾರ ಹೇರಬೇಡಿ, ಸಾಕೆಟ್ ಒಳಗೆ ಕೈ ಹಾಕಬೇಡಿ, ವಿದ್ಯುತ್ ಸ್ವಿಚ್ ಅಥವಾ ಉಪಕರಣಗಳನ್ನು ಮುಟ್ಟುವ ಮೊದಲು ತೇವವಿರುವ ಕೈಗಳನ್ನು ಚೆನ್ನಾಗಿ ಒರಸಿಕೊಳ್ಳಿ.

ಇತರ ಮುನ್ನೆಚ್ಚರಿಕೆ ಕ್ರಮಗಳು: ಆಮ್ಲಗಳು, ಅಪಾಯಕಾರಿ ರಾಸಾಯನಿಕಗಳು ಮತ್ತು ಬೇಗನೆ ಹತ್ತಿಕೊಳ್ಳುವ ವಸ್ತುಗಳನ್ನು ಗುರುತಿಸಿ, ಪ್ರತ್ಯೇಕಿಸಿ ಮಕ್ಕಳ ಕೈಗೆ ಸಿಗದಂಥಾ ಜಾಗದಲ್ಲಿ ಇಡಿ. ಪುಟ್ಟ ಮಕ್ಕಳ ಕೈಗೆ ಬೆಂಕಿಪೊಟ್ಟಣ ಗಳು ಸಿಗದಂತೆ ಮಾಡಿ. ದೊಡ್ಡ ಮಕ್ಕಳಿಗೆ ಬೆಂಕಿಕಡ್ಡಿಯನ್ನು ಸರಿಯಾಗಿ ಹಚ್ಚುವುದು ಹೇಗೆ ಎಂದು ಹೇಳಿಕೊಡಿ. ತೋಳುದೂರದಲ್ಲಿ ಬೆಂಕಿಪಟ್ಟಣವನ್ನು ಹಿಡಿದುಕೊಂಡು ಬೆಂಕಿಕಡ್ಡಿಯನ್ನು ದೇಹದ ಕಡೆಗೆ ಗೀರದೆ ಆಚೆಗೆ ಗೀರಬೇಕು.

ಹಾಸಿಗೆಯಲ್ಲಿ ಮಲಗಿಕೊಂಡು ಧೂಮಪಾನ ಮಾಡುವುದನ್ನು ಬಿಡಿ, ಅರ್ಧ ಸೇದಿದ ಸಿಗರೇಟುಗಳನ್ನು ಪೂರ್ತಿ ನಂದಿಸದೆ ಬಿಸಾಡಬೇಡಿ. ಕೊನೆಯದಾಗಿ ಪ್ರತಿ ರಾತ್ರಿ ಹಾಸಿಗೆ ಸೇರುವುದಕ್ಕೆ ಮೊದಲು ಮನೆಯಲ್ಲಿ ಎಲ್ಲ ದೀಪಗಳನ್ನು ಆರಿಸಿದೆಯೆ, ಒಲೆಯ ಬೆಂಕಿ ನಂದಿದೆಯೆ, ಗ್ಯಾಸ್ ಒಲೆಯ ಸ್ವಿಚ್‌ಗಳೆಲ್ಲ ಆರಿಸಿದೆಯೇ ನೋಡಿ ಮಲಗಿ.


ಗೃಹ ಬೆಂಕಿ ತಡೆಗಟ್ಟುವಿಕೆಯ ಪ್ರಾಮುಖ್ಯವನ್ನು ಜನರಲ್ಲಿ ಪ್ರಸಾರಮಾಡುವ ಉದ್ದೇಶದಿಂದ ಭಾರತದಲ್ಲಿ ಹಲವಾರು ಸಂಘ ಸಂಸ್ಥೆಗಳು ಹುಟ್ಟಿಕೊಂಡಿವೆ. ಭಾರತದ ಸುಟ್ಟಗಾಯ ಸಂಸ್ಥೆ, ಪೋಲಿಯ ಲಯನ್ಸ್ ಕ್ಲಬ್ SR ಸೊಸೈಟಿ, ಸರ್ ದೊರಾಬ್ಜಿ ಟಾಟಾ ಟ್ರಸ್ಟ್ ಮತ್ತು ವಾಡಿಯಾ ಚಾರಿಟೀಸ್ ಇತ್ಯಾದಿ.

ಶಾಲಾಮಕ್ಕಳು ಹಾಗೂ ಗೃಹಿಣಿಯರಿಗೆ ಬೆಂಕಿ ಅಪಘಾತಗಳ ತಡೆಗಟ್ಟುವಿಕೆ ಹಾಗೂ ಪ್ರಥಮ ಚಿಕಿತ್ಸೆಯ ಬಗ್ಗೆ ಶಿಕ್ಷಣ ನೀಡುವ ವ್ಯಾಪಕ ಕಾರ್ಯಕ್ರಮಗಳನ್ನು ಈ ಸಂಸ್ಥೆಗಳು ಹಮ್ಮಿಕೊಂಡಿವೆ.

ಬೆಂಕಿ ಅಪಘಾತಗಳ ಘೋರ ಬಲಿಗಳನ್ನು ಬಹುಮಟ್ಟಿಗೆ ತಡೆಗಟ್ಟಬಹುದು. ಪ್ರಯತ್ನ ಬೇಕು.

"ಸುಟ್ಟಗಾಯಗಳ ವಿರುದ್ಧದ ಸಮರವನ್ನು ಗೆಲ್ಲಲು ಸಾಧ್ಯ, ಪ್ರತಿಬಂಧಕ ಕ್ರಮಗಳೇ ವಿಜಯದ ಅಸ್ತ್ರಗಳು."

ಎಸ್. ಶ್ರೀಧರಮೂರ್ತಿ



ತಮ್ಮನ್ನು ತಾವು ಸಂತೋಷಪಡಿಸಿಕೊಳ್ಳಲು ಇಚ್ಛಿಸುವವರು, ಮೊದಲು ಇತರರನ್ನು ಸಂತೋಷಪಡಿಸುವದನ್ನು ಕಲಿಯಬೇಕು.

—ನೇತಾಜಿ

ಐಶ್ವರ್ಯ ಹಾಗೂ ಅಧಿಕಾರದ ಬಯಕೆ ಇರುವವರೆಗೂ ಮನುಷ್ಯನಿಗೆ ತೃಪ್ತಿ-ನೆಮ್ಮದಿಗಳು ದೊರೆಯಲಾರವು. ಆ ಬಯಕೆಗಳನ್ನು ಎಷ್ಟು ಬೇಗ ಕಳೆದರೂ ಅಷ್ಟು ಬೇಗ ತೃಪ್ತಿ, ನೆಮ್ಮದಿ ಲಭಿಸುವವು.

—ರೂಸೊ

ಎಲ್ಲ ಪೂರ್ಣಗಳನ್ನು ಕೂಡಿಸುವ ಒಂದು ಪರಿಪೂರ್ಣವೂ ಇರಬೇಕು. ಪೂರ್ಣ ಸಹಕಾರವೇ ನಿಜವಾದ ಸಹಕಾರ.

—ವಿನೋಬಾ

ಮುಪ್ಪು ಭಾರವೇ?

ಕಾಣಿಸದ ಕಣ್ಣು, ಕೇಳಿಸದ ಕಿವಿ, ನರೆತಕೂದಲು, ಸುಕ್ಕುಗಟ್ಟಿದ ಚರ್ಮ, ಬೊಚ್ಚುಬಾಯಿ, ಬಾಗಿದ ಬೆನ್ನು—ಹೀಗೆ ಶಕ್ತಿ ಉತ್ಸಾಹ-ಧೈರ್ಯಗಳೆಲ್ಲ ಕುಂದಿ ಹಲವರ ಕರುಣೆಗೆ ಕೆಲವರ ಉಪೇಕ್ಷೆಗೆ ಪಾತ್ರವಾಗುವಂತೆ ಮಾಡುವ ಮುದಿತನ ಭಯವನ್ನು ತರುವಂಥ ಸಂಗತಿಯೇ ಆಗಬಹುದು. ಕುಟುಂಬದ ಎಲ್ಲರ ಆನಂದ ಉಲ್ಲಾಸಗಳಿಗೆ ಕಾರಣವಾಗಿರುವ ಬಾಲ್ಯ ಹಾಗೂ ಚಿಮ್ಮುವ ಉತ್ಸಾಹ-ಸಂತೋಷಗಳ ಆಗರವಾಗಿರುವ ಯೌವನದ ಹಿನ್ನೆಲೆಯಲ್ಲಿ ಮುಪ್ಪು ಭಾರವಾಗಿ ಕಂಡರೆ ಆಶ್ಚರ್ಯವಿಲ್ಲ. ನಮಗೆಲ್ಲ ಚಿರಪರಿಚಿತವಾಗಿರುವ ಯಯಾತಿ ಮಹಾರಾಜನ ಪ್ರಸಂಗವನ್ನೇ ತೆಗೆದುಕೊಳ್ಳೋಣ. ವ್ಯಸನದ ಬಯಕೆಗಳೆಲ್ಲ ತೃಪ್ತಿಯನ್ನು ಕಾಣುವ ಮೊದಲೇ ಋಷಿ ಶಾಪದಿಂದ ಮುಪ್ಪಿಗೆ ತುತ್ತಾದ ಯಯಾತಿಗೆ ತಾತ್ಕಾಲಿಕವಾಗಿಯಾದರೂ ಯೌವನ ದಾನಮಾಡಲು ಮಕ್ಕಳೇ ಒಪ್ಪಲಿಲ್ಲ—ಪುರುವಿನ ಹೊರತು, ಮುಪ್ಪಿನ ಭೀತಿಯ ಎದುರಿಗೆ, ಉಳಿದ ಎಲ್ಲ ಪ್ರಲೋಭನೆಗಳೂ ಸೋಲನ್ನು ಒಪ್ಪಿದ ಪ್ರಸಂಗ ಇದು. ಮುಪ್ಪಿನ ಬಗೆಗಿನ ಈ ಭಯ ಬಹುಕಾಲದಿಂದಲೂ ಮಾನವರನ್ನು ಕಾಡುತ್ತಿದೆ.

ಬಾಲ್ಯದಿಂದ ಯೌವನಕ್ಕೆ, ಯೌವನದಿಂದ ಮುಪ್ಪಿಗೆ ಮುನ್ನಡೆಯುವುದು ಪ್ರತಿಯೊಂದು ಜೀವಿಯ ಸಹಜಧರ್ಮವೆಂಬುದನ್ನು ಅರಿತಾಗ, ಬಾಳಿನ ಈ ಅನಿವಾರ್ಯ ಹಂತವನ್ನು ಭಾರವೆಂದು ಪರಿಗಣಿಸುವುದರಲ್ಲಿ ಅರ್ಥವಿಲ್ಲ. ಈ ಬೆಳವಣಿಗೆಗಳಲ್ಲಿ ಯಾವುದನ್ನೂ ಹಿನ್ನಡೆಸುವುದು ಸಾಧ್ಯವಿಲ್ಲವೆಂಬುದು ನಿಜ. ಆದರೆ ಆ ಕಾರಣಕ್ಕಾಗಿಯೇ ಜರೆ ಭಾರವಾಗಬೇಕಾಗಿಲ್ಲ. ಅದು ಆನಂದ ದಾಯಕವಾಗಬಹುದು, ಆಗಬೇಕು. ಮುಪ್ಪು ಆನಂದದಾಯಕ ಅನುಭವ ವಾಗಬೇಕಾದರೆ ನಮ್ಮ ನಿವೃತ್ತ ಜೀವನವನ್ನು ನಾವು ಮುಂಚಿತವಾಗಿಯೇ ಯೋಜಿಸಿಕೊಳ್ಳುವಂತೆ, ಆರೋಗ್ಯದ ದೃಷ್ಟಿಯಿಂದಲೂ—ಅಂದರೆ ವೈದ್ಯಕೀಯ ವಾಗಿಯೂ ನಮ್ಮ ಬದುಕನ್ನು ನಾವು ಯೋಜಿಸಿಕೊಳ್ಳಬೇಕು. ಹಾಗೆ ಮಾಡಿ ದಾಗ ಮುಪ್ಪು ಭಾರವಾಗಲಾರದು. ಅದು ಹೇಗೆ ಸಾಧ್ಯ ಎಂಬುದನ್ನು ನೋಡೋಣ.

ಮುಪ್ಪು ಹಿತಕರ ಅನುಭವವಾಗಿ ಪರಿಣಮಿಸುವುದಕ್ಕೆ ನಮ್ಮ ಬದುಕಿ ನಲ್ಲಿ ದೇಹಶಕ್ತಿಯಂತೆಯೇ ಮನೋವೃತ್ತಿಯೂ ಕಾರಣವಾಗುತ್ತದೆ.

ಕೃಪೆ: ಆಕಾಶವಾಣಿ, ಮೈಸೂರು.

ಸರ್. ಎಂ. ವಿಶ್ವೇಶ್ವರಯ್ಯನವರನ್ನು ಅವರ ಶತಾಯುಷ್ಯದ ರಹಸ್ಯವೇನೆಂದು ಕೇಳಿದಾಗ ತಮ್ಮ ಮನಃಸಾಕ್ಷಿಗೆ ವಿರುದ್ಧವಾಗಿ ತಾವೆಂದೂ ಏನನ್ನೂ ಮಾಡದೆ ಇದ್ದುದೇ ಆ ರಹಸ್ಯವೆಂದು ಹೇಳಿದರಂತೆ. ಪ್ರವೃತ್ತಿ ಹಾಗೂ ನಿವೃತ್ತಿಗಳೆರಡನ್ನೂ ಮಾನಸಿಕವಾಗಿ ಯೋಜಿಸಿಕೊಂಡಿದ್ದುದೇ ಇದಕ್ಕೆ ಕಾರಣವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಶಿಸ್ತು-ಸಂಯಮಗಳನ್ನೊಳಗೊಂಡಂತೆ ಒಳ್ಳೆಯ ರೀತಿಯಲ್ಲಿ ನಡೆಸಿದ ಯೌವನ ಒಳ್ಳೆಯ ಮುಪ್ಪಿನಲ್ಲಿ ಕೊನೆಗೊಳ್ಳುವುದು ಸಾಧ್ಯ, ಸಹಜ. ವಿಜ್ಞಾನದ ಮುನ್ನಡೆಯ ಈ ಯುಗದಲ್ಲಿ ಮುಪ್ಪು ಭೀತಿಕಾರಕ ಹಂತವಾಗಿ ಯೇನೂ ಉಳಿದಿಲ್ಲವೆಂಬುದು ಒಂದು ಮುಖ್ಯವಾದ ಸಂಗತಿ. ವೈದ್ಯಕೀಯ ವಿಜ್ಞಾನ ಈ ದಿಕ್ಕಿನಲ್ಲಿ ಹೇಗೆ ನೆರವಾಗಬಲ್ಲದು ಎಂಬುದನ್ನು ಪರಿಶೀಲಿಸೋಣ.

ಮುಪ್ಪಿನ ಸಮಸ್ಯೆಗಳನ್ನು ಸ್ಥೂಲವಾಗಿ ಮೂರು ಬಗೆಯಲ್ಲಿ ವಿಂಗಡಿಸಬಹುದು: ೧) ದೈಹಿಕ, ೨) ಮಾನಸಿಕ; ಮತ್ತು ೩) ಇತರ. ಸಿಹಿಮೂತ್ರ ರೋಗ, ರಕ್ತದ ಒತ್ತಡ, ಉಸಿರಾಟದ ತೊಂದರೆ, ಅಜೀರ್ಣ, ಮಲಬದ್ಧತೆ, ದೃಷ್ಟಿ ಮತ್ತು ಶ್ರವಣೇಂದ್ರಿಯಗಳ ಪಟುತ್ವ ಕುಂದುತ್ತ, ಬರುವುದು ಕೀಲುನೋವು, ಮೂತ್ರಕ್ಲೇಶ, ಪಾರ್ಶ್ವವಾಯು, ಹೃದಯಾಘಾತ, ಅರ್ಬುದ ಅಥವಾ ಕ್ಯಾನ್ಸರ್ ಇವೇ ಮೊದಲಾದುವು ದೈಹಿಕ ಸಮಸ್ಯೆಗಳು. ನೆನಪಿನ ಶಕ್ತಿ ಕುಂದುವುದು, ದೃಷ್ಟಿಕೋನ ಬದಲಾಗದೆ ಇರುವುದು, ಯಾವುದೇ ಬದಲಾವಣೆಯನ್ನು ವಿರೋಧಿಸುವುದು. ಆಸಕ್ತಿಗಳೆಲ್ಲ ತನ್ನಲ್ಲಿಯೇ ಕೇಂದ್ರೀಕೃತವಾಗುವುದು, ಅಂತರ್ಮುಖಿಯಾಗುವುದು, ಬದುಕು ಸಾಕಪ್ಪ ಎನಿಸುವುದು, ವಿಷಣ್ಣತೆಯ ಭಾವ ತುಂಬಿಕೊಳ್ಳುವುದು ಸಾವಿನ ಭಯ ಆವರಿಸಿಕೊಳ್ಳುವುದು, ಆತ್ಮಹತ್ಯೆಯ ಭಾವನೆ ಮೂಡುವುದು—ಇವು ಮಾನಸಿಕ ಸಮಸ್ಯೆಗಳು. ಲೈಂಗಿಕ ಸಮಸ್ಯೆಗಳು ಮತ್ತು ಆರ್ಥಿಕ ಬವಣೆಗಳನ್ನು ಮೂರನೆಯ ವರ್ಗಕ್ಕೆ ಸೇರಿಸಬಹುದು.

ದೈಹಿಕ ಸಮಸ್ಯೆಗಳಲ್ಲಿ ಪಾರ್ಶ್ವವಾಯು, ಹೃದಯಾಘಾತ ಕ್ಯಾನ್ಸರ್ ಹಾಗೂ ಸಿಹಿಮೂತ್ರರೋಗ ಮುಪ್ಪಿಗೇ ಮೀಸಲಾದುವೇನೂ ಅಲ್ಲ. ಉಳಿದ ದೈಹಿಕ ಸಮಸ್ಯೆಗಳಲ್ಲಿ ಬಹುಪಾಲು ಸಮಸ್ಯೆಗಳನ್ನು ವೈದ್ಯವಿಜ್ಞಾನದ ನೆರವಿನಿಂದ ನಾವಿಂದು ಪರಿಹರಿಸಬಹುದಾಗಿದೆ; ತಡೆಗಟ್ಟಬಹುದಾಗಿದೆ. ಅನೇಕವನ್ನು ಅನಿರ್ದಿಷ್ಟಕಾಲದವರೆಗೆ ಮುಂದೂಡಬಹುದಾಗಿದೆ. ವಾಸ್ತವವಾಗಿ ಆರೋಗ್ಯ ಎಂಬುದು ರೋಗದ ಇಲ್ಲದಿರುವಿಕೆ ಮಾತ್ರವಲ್ಲ. ಅದು ಬೌದ್ಧಿಕ ಮಾನಸಿಕ, ಸಾಮಾಜಿಕ ಮತ್ತು ಆರ್ಥಿಕ ಸುಸ್ಥಿತಿಯೂ ಹೌದು. ಯಾವುದೇ ತೊಂದರೆ

ಯನ್ನು ಪೂರ್ವಾಪರ ವಿವೇಚನೆಯೇ ಇಲ್ಲದೆ ಮುಪ್ಪಿಗೆ ಆರೋಪಿಸುವುದು ಸರಿಯಲ್ಲ.

ತಾರುಣ್ಯದಲ್ಲಿಯೇ ಆರಂಭಿಸಿ ನಿಯತವಾಗಿ ನಡೆಸುಕೊಂಡು ಬಂದ ವ್ಯಾಯಾಮ ಸ್ಥೂಲಕಾಯತ್ವ, ಸಿಹಿಮೂತ್ರರೋಗ, ಸಂಧಿವಾತ, ಹೃದಯ ರೋಗ, ಅಜೀರ್ಣ, ಮಲಬದ್ಧತೆ ಮೊದಲಾದುವನ್ನು ದೂರವಿಡಲು ನೆರವಾಗುತ್ತದೆ. ಆದ್ದರಿಂದ, ನೀವು ಕ್ರೀಡಾಪಟುಗಳಾಗಿದ್ದಲ್ಲಿ, ನಿಮ್ಮ ಕ್ರೀಡೆಗಳನ್ನು ಅದೇ ಪ್ರಮಾಣದಲ್ಲಿ ಅಲ್ಲವಾದರೂ ಮುಂದುವರಿಸಿಕೊಂಡು ಬನ್ನಿ. ಗಾಳಿ ಸಂಚಾರವಂತೂ ಮುಪ್ಪಿಗೆ ತುಂಬ ವಿಹಿತವಾದಂಥ ವ್ಯಾಯಾಮ. ಯೋಗ ಮತ್ತು ಧ್ಯಾನದ ಅಭ್ಯಾಸಗಳು ಉಬ್ಬಸ, ಕಣ್ಣಿನ ತೊಂದರೆಗಳು, ಜೀರ್ಣ ಶಕ್ತಿಯ ಏರುಪೇರುಗಳು. ಮಲಬದ್ಧತೆ ಮೊದಲಾದುವನ್ನು ನಿವಾರಿಸಲು ನೆರವಾಗುತ್ತವೆ.

ಸ್ವಂತ ಔಷಧೋಪಚಾರ ಮಾಡಿಕೊಳ್ಳುವುದು ಸರಿಯಲ್ಲ. ಕಾಲಕಾಲಕ್ಕೆ ವೈದ್ಯಕೀಯ ತಪಾಸಣೆ ಮಾಡಿಸಿಕೊಂಡು, ನಿಮ್ಮ ಸಮಸ್ಯೆಗಳನ್ನು ವೈದ್ಯರಿಗೆ ಬಿಡಿಸಿ ಹೇಳಿದಲ್ಲಿ, ನಿಮ್ಮ ಅನೇಕ ಸಮಸ್ಯೆಗಳಿಗೆ ಅವರಿಂದ ಖಂಡಿತವಾಗಿಯೂ ಪರಿಹಾರ ದೊರೆಯುತ್ತದೆ. ತಿಂಗಳಿಗೆ ಎರಡು ಸಲವಾದರೂ ರಕ್ತದ ಒತ್ತಡವನ್ನು ಪರೀಕ್ಷಿಸಿಕೊಳ್ಳಿ, ಆಗಿಂದಾಗ್ಗೆ ಮೂತ್ರಪರೀಕ್ಷೆ ಮಾಡಿಸಿಕೊಳ್ಳಿ. ಏಕೆಂದರೆ, ಸಿಹಿಮೂತ್ರರೋಗ ಮತ್ತು ರಕ್ತದ ಒತ್ತಡ ವೃದ್ಧಾಪ್ಯದ ಶತ್ರುಗಳು. ಆದ್ದರಿಂದ ಅವುಗಳ ಬಗ್ಗೆ ಕಣ್ಣಿಟ್ಟಿರಿ. ಈ ಎರಡು ರೋಗಗಳನ್ನೂ ಹಿಡಿತದಲ್ಲಿಟ್ಟುಕೊಳ್ಳುವುದು ಸಾಧ್ಯವೆಂಬುದನ್ನು ನೆನಪಿಡಿ.

ನಿಮ್ಮ ಸೊಂಟದ ಅಳತೆಯ ಬಗ್ಗೆ ಎಚ್ಚರವಾಗಿರಿ. ನಿಮ್ಮ ಸೊಂಟಪಟ್ಟಿ ದೊಡ್ಡದಾದಷ್ಟು ತೊಡಕುಗಳು ಹೆಚ್ಚುತ್ತವೆ. ಜೀವಮಾನ ಕಿರಿದಾಗುತ್ತ ಬರುತ್ತದೆ. ಆದ್ದರಿಂದ, ಕಾಲಕಾಲಕ್ಕೆ ನಿಮ್ಮ ತೂಕವನ್ನು ನೋಡಿಕೊಳ್ಳಿ. ಅಂದರೆ, ಅತಿಯಾಗಿ ತಿನ್ನುವುದು ಮುಪ್ಪಿಗೊಂದು ಶಾಪ. ಮಿತಾಹಾರವೇ ಇದಕ್ಕೆ ಮದ್ದು. ಮುಪ್ಪಿನಲ್ಲಿ ಶಕ್ತಿಯ ವ್ಯಯ ಕಡಿಮೆಯಾಗಿರುವುದರಿಂದ, ಅತಿಯಾದ ಪ್ರಮಾಣದಲ್ಲಿ ಆಹಾರ ಸೇವನೆ ಅನಗತ್ಯವಾಗುತ್ತದೆ. ಆಹಾರವೂ ಹೆಚ್ಚಿನ ಕಾಯಿಪಲ್ಲೆಗಳನ್ನು, ಹಣ್ಣುಹಂಪಲುಗಳನ್ನು ಒಳಗೊಂಡಿದ್ದಲ್ಲಿ ಉತ್ತಮ. ಅತಿಯಾಗಿ ತಿಂದು, ಕೊಬ್ಬು ಹೆಚ್ಚಿ, ರಕ್ತನಾಳಗಳು ಪೆಡಸಾಗಲು ಅವಕಾಶ ಮಾಡಿಕೊಡಬೇಡಿ.

ನಲವತ್ತರ ತರುವಾಯ ಕಣ್ಣುಗಳನ್ನು ಪರೀಕ್ಷೆ ಮಾಡಿಸಿಕೊಳ್ಳುವುದು

ಉತ್ತಮ. ಸರಿಯಾದ ಕನ್ನಡಕವನ್ನು ಬಳಸಿ, ಕಣ್ಣುಗಳಿಗೆ ಆಗುವ ಅನಗತ್ಯ ಶ್ರಮವನ್ನು ತಪ್ಪಿಸಿ. ಕಣ್ಣಿನಲ್ಲಿ ದ್ರವದ ಒತ್ತಡ ಹೆಚ್ಚಿ, ದೃಷ್ಟಿಗೆ ಅಪಾಯ ವನ್ನುಂಟುಮಾಡುವ ಗ್ಲೌಕೋಮಾ ಕಾಹಿಲೆಯನ್ನು ಈ ರೀತಿ ದೂರವಿಡ ಬಹುದು. ಅಂತೆಯೇ ವರ್ಷಕ್ಕೊಮ್ಮೆಯಾದರೂ ನಿಮ್ಮ ಕಿವಿಗಳನ್ನು ಪರೀಕ್ಷಿಸಿ ಕೊಳ್ಳಿ.

ಎಲ್ಲ ಕೆಟ್ಟ ಚಟಗಳನ್ನು ಬಿಟ್ಟುಬಿಡಿ. ಧೂಮಪಾನ ಇಳಿವಯಸ್ಸಿನಲ್ಲಿ ಅಪಾರ ಹಾನಿಯನ್ನುಂಟುಮಾಡುವುದರಿಂದ, ಅದನ್ನು ಸಂಪೂರ್ಣವಾಗಿ ಬಿಟ್ಟು ಬಿಡಿ. ಮದ್ಯಪಾನವನ್ನು ವರ್ಜಿಸಿ. ಹಾಗೆ ಮಾಡಲು ಸಾಧ್ಯವೇ ಆಗದಿದ್ದಲ್ಲಿ, ಅದನ್ನು ಮಿತಿಗೆ ಒಳಪಡಿಸುವುದು ಒಳಿತು. ಅನಗತ್ಯವಾಗಿ ಜುಲಾಬಿನ ಗುಳಿಗೆ ಗಳು, ಪಚನಕಾರಿಗಳು ಹಾಗೂ ನಿದ್ರಾಕಾರಕಗಳನ್ನು ತೆಗೆದುಕೊಳ್ಳಬೇಡಿ. ವಯಸ್ಸಾಗುತ್ತಬಂದಂತೆ, ಮೂಳೆಗಳು ಕ್ಯಾಲ್ಸಿಯಂ, ಫಾಸ್ಫರಸ್ ಮತ್ತು ಪ್ರೋಟೀನುಗಳನ್ನು ಕಳೆದುಕೊಳ್ಳುತ್ತ ಬರುವುದರಿಂದ, ಅವುಗಳನ್ನು ಸರಿಯಾಗಿ ಸರಿತೂಗಿಸುತ್ತಬಂದರೆ, ಕ್ಷುಲ್ಲಕ ಕಾರಣಗಳಿಂದಾಗಿ ಉಂಟಾಗುವಂಥ ಮೂಳೆ ಮುರಿತಗಳನ್ನು ತಪ್ಪಿಸಬಹುದು. ರೋಗಕ್ಕೆ ಪ್ರತಿರೋಧವೂ ಇಳಿವಯಸ್ಸಿನಲ್ಲಿ ಕಡಿಮೆಯಾಗಿರುವುದರಿಂದ, ಶೀಘ್ರವಾಗಿ ಅದನ್ನು ಗುರುತಿಸಿ ಚಿಕಿತ್ಸೆ ಪಡೆಯು ವುದೂ ಅಗತ್ಯ.

ಮುಪ್ಪಿನಲ್ಲಿ ನಮಗೆ ಮಾನಸಿಕವಾಗಿ ನೆರವಾಗುವ ಸಂಗತಿಗಳೆಂದರೆ ಜೀವನದ ಬಗೆಗಿನ ಉತ್ಸಾಹ, ಧಾರ್ಮಿಕ ಅಭಿರುಚಿ, ತತ್ತ್ವಶಾಸ್ತ್ರದಲ್ಲಿ ಆಸಕ್ತಿ, ಎದೆ ಗುಂದಲು ಎಡೆಗೊಡದಂಥ ಆಶಾವಾದಿತ್ವ ಹಾಗೂ ಆತ್ಮಹತ್ಯೆಯ ಆಲೋಚನೆ ಯನ್ನು ಮತ್ತು ಸಾವಿನ ಬಗೆಗಿನ ಭಯವನ್ನು ದೂರವಿರಿಸುವುದು. ವಯಸ್ಸಾ ದಂತೆ ಅಚ್ಚುಕಟ್ಟಿನ ಬಗ್ಗೆ ಗಮನ ಕೊಡದಿರುವುದು, ಅಡ್ಡಾದಿಡ್ಡಿಯಾಗಿ ಬಟ್ಟೆ ಹಾಕಿಕೊಳ್ಳುವುದು ಸರಿಯಲ್ಲ. ದೈಹಿಕವಾಗಿ, ಮಾನಸಿಕವಾಗಿ, ಬೌದ್ಧಿಕವಾಗಿ ನಿಮ್ಮನ್ನು ನೀವು ಕ್ರಿಯಾಶೀಲರಾಗಿ ಇರಿಸಿಕೊಳ್ಳಿ. ಮೈಗೆಂತೋ ಮನಸ್ಸಿಗೂ ಅಂತೆಯೇ ವ್ಯಾಯಾಮ ಅಗತ್ಯವೆಂಬುದನ್ನು ಮರೆಯದಿರಿ. ಸಾಮಾಜಿಕವಾಗಿ ಬೇರ್ಪಟ್ಟು ಒಂಟಿಯಾಗಿ ಬಾಳಬೇಕಾಗಿ ಬರುವುದು ಇಳಿವಯಸ್ಸಿನ ಇನ್ನೊಂದು ಸಮಸ್ಯೆ. ಕಿರಿಯರೊಡನೆ ಬೆರೆಯುವ, ಸೇವಾಸಂಸ್ಥೆಗಳೊಂದಿಗೆ, ಧಾರ್ಮಿಕ ತಂಡಗಳೊಂದಿಗೆ ಸಂಬಂಧವನ್ನಿರಿಸಿಕೊಳ್ಳುವ ಮೂಲಕ ಇದನ್ನು ದೂರ ಮಾಡಲು ಸಾಧ್ಯ. "ವಿಜ್ಞಾನ, ಜೀವನವನ್ನು ಮುಂದುವರಿಸಿಕೊಂಡು ಬರ ಬಹುದಾದರೆ, ತತ್ತ್ವಶಾಸ್ತ್ರ ಅದನ್ನು ಆಳವಾಗಿಸುತ್ತದೆ" ಎಂಬ ಹಿರಿಯ

ಚಿಂತಕನೊಬ್ಬನ ಮಾತನ್ನು ನೆನಪಿನಲ್ಲಿ ಇಟ್ಟುಕೊಳ್ಳಿ. ಸಾವಿನ ಬಗೆಗಿನ ಅಸಹಜವಾದ ಭಯವೂ ಬೇಡ; ಆತ್ಮಹತ್ಯೆಯ ಆಲೋಚನೆಯೂ ಬೇಡ. "ಅಗಲುವ ಕ್ಷಣ ಬಂದಿತೆಂದು ಹೇಳಿ, ಸಾವು ನನ್ನ ಮನೆಯ ಬಾಗಿಲನ್ನು ಬಡಿದಾಗ, "ನಾನು ಸಿದ್ಧನಾಗಿದ್ದೇನೆ" ಎಂದು ಹೇಳುತ್ತೇನೆ" ಎಂಬ ರವೀಂದ್ರರ 'ಗೀತಾಂಜಲಿ'ಯ ಮಾತಿನಲ್ಲಿ ಸೂಚಿತವಾಗಿರುವ ಮನೋಧರ್ಮವನ್ನು ಬೆಳೆಸಿಕೊಳ್ಳಬೇಕು. ವ್ಯಾಪಕವಾದ ಓದಿನ ಅಭಿರುಚಿಯನ್ನುಳ್ಳ, ಬೌದ್ಧಿಕವಾಗಿ ಕ್ರಿಯಾಶೀಲನಾಗಿರುವ, ಬದುಕಿನ ನಾನಾ ಮುಖಗಳಲ್ಲಿ ತೀವ್ರವಾದ ಆಸಕ್ತಿಯನ್ನಿರಿಸಿಕೊಂಡಿರುವ, ಕಲೆ-ಸಂಗೀತ-ಸಾಹಿತ್ಯಗಳಿಗೆ ಮಾರುಹೋಗಬಲ್ಲ ಪ್ರವೃತ್ತಿಯನ್ನು ಬೆಳೆಸಿಕೊಂಡಿರುವ ವ್ಯಕ್ತಿಗೆ ಬದುಕು ಭಾರವೆಂದು ಅನಿಸುವುದೇ ಇಲ್ಲ.

ಜಗತ್ತಿನಲ್ಲಿ ವೃದ್ಧರ ಸಂಖ್ಯೆ ಹೆಚ್ಚುತ್ತಿದೆ. ಅಕಾಲಿಕ ಸಾವಿಗೆ ವೈದ್ಯವಿಜ್ಞಾನ ಯಶಸ್ವಿಯಾಗಿ ತಡೆಯೊಡ್ಡುತ್ತಿರುವುದೇ ಇದಕ್ಕೆ ಕಾರಣವೆಂಬುದು ಸ್ಪಷ್ಟ. ಕ್ರಿ.ಶ. ೨೦೦೦ದ ಹೊತ್ತಿಗೆ ಜಗತ್ತಿನ ಮೂರನೇ ಒಂದು ಭಾಗದಷ್ಟು ಮಂದಿ ವೃದ್ಧರೇ ಆಗಿರುತ್ತಾರೆಂದು ಅಂದಾಜು ಮಾಡಲಾಗಿದೆ. ಜರಾವಿಜ್ಞಾನ ಬೆಳೆಯುತ್ತಿದೆ. ಜರಾವಿಜ್ಞಾನಿಗಳ ಸಂಖ್ಯೆಯೂ ಹೆಚ್ಚುತ್ತಿದೆ. ಮುಪ್ಪಿಗೆ ಮತ್ತಷ್ಟು ಚೈತನ್ಯವನ್ನು ತುಂಬಲು ಹೇಗೆ ಸಾಧ್ಯವಾಗಬಹುದೆಂಬುದನ್ನು ಕಂಡುಕೊಳ್ಳಲು ವೈದ್ಯರಾದ ನಾವು ನಮ್ಮಿಂದ ಆದಷ್ಟು ಪ್ರಯತ್ನಿಸುತ್ತಿದ್ದೇವೆ. ಜೇಮ್ಸ್ ಸ್ಟರ್ಲಿಂಗ್ ರಾಸ್ ಹೀಗೆನ್ನುತ್ತಾರೆ: ಮುಪ್ಪನ್ನು ನಿವಾರಿಸಲು ಸಾಧ್ಯವಿಲ್ಲ; ಅದನ್ನು ನೀವು ಸಂರಕ್ಷಿಸಬಹುದು; ಅದಕ್ಕೆ ಚೈತನ್ಯವನ್ನು ತುಂಬಿಸಬಹುದು." ಒಟ್ಟಿನಲ್ಲಿ, ವೃದ್ಧಾಪ್ಯದ ಬಹುಪಾಲು ಸಮಸ್ಯೆಗಳು ದೂರಮಾಡಬಹುದಾದಂಥವು; ಮುಂದೂಡಬಹುದಾದಂಥವು ಮುಂದಾದರೂ ವೃದ್ಧಾಪ್ಯದ ಭವಿಷ್ಯ ಹೆಚ್ಚುಹೆಚ್ಚು ಆಶಾದಾಯಕವೇ ಆಗಿ ಪರಿಣಮಿಸಲಿದೆ. ಹೀಗಾಗಿ, 'ಜರೆ ಭಾರವೆ?' ಎಂಬ ಪ್ರಶ್ನೆಗೆ ಉತ್ತರವಾಗಿ "ಜರೆ ಭಾರವೇನೂ ಅಲ್ಲ" ಎಂದು ಧೈರ್ಯವಾಗಿ ಹೇಳಬಹುದಾಗಿದೆ. ಅದನ್ನು ಹಿತಕರವಾಗಿ, ಆನಂದದಾಯಕವಾಗಿ, ಉಲ್ಲಾಸಕರವಾಗಿ ಅನುಭವವನ್ನಾಗಿಸಿಕೊಳ್ಳುವುದು ನಮ್ಮ ಕೈಯಲ್ಲೇ ಇದೆ. ಅಂಥ ಪ್ರಯತ್ನಕ್ಕೆ ವೈದ್ಯವಿಜ್ಞಾನದ, ವೈದ್ಯರ ಹೃತ್ಪೂರ್ವಕ ಬೆಂಬಲವೂ ಇದೆ. ಮುದಿ ಮೊಗದಲ್ಲೂ ಮುಗುಳನಗೆಯನ್ನು ಅರಳಿಸುವ ಆನಂದ ನಮಗೆ ಸಂತೋಷದ ಹೆಮ್ಮೆಯ ಸಂಗತಿಯಲ್ಲವೆ!

ಡಾ|| ಪಿ. ಆರ್. ಅನಂತರಾವ್

ತ್ಯಾಗಶೀಲ ಬಾಲಕಿ

ಮಹಾತ್ಮ ಗಾಂಧೀಜಿ ಅವರು ಸ್ವಾತಂತ್ರ್ಯ ಚಳುವಳಿಗಾಗಿ ಜನರನ್ನು ಜಾಗೃತಿಗೊಳಿಸಲು ಸುಮಾರು ೪೮ ವರ್ಷಗಳ ಹಿಂದೆ ದೇಶ ಪರ್ಯಟನೆ ಮಾಡುತ್ತಿದ್ದು, "ಹರಿಜನ ನಿಧಿ"ಗಾಗಿ ಹಣ ಸಂಗ್ರಹಿಸಲು ಕೇರಳದಲ್ಲಿ ಪ್ರವಾಸ ಕೈಗೊಂಡಿದ್ದರು.

೧೯೩೪ರ ಫೆಬ್ರವರಿ ತಿಂಗಳ ಒಂದು ಶುಕ್ರವಾರ. ಗಾಂಧೀಜಿ ಬಡ್ಗರ ಎಂಬ ಗ್ರಾಮದಲ್ಲಿ ಹೆಂಗಸರ ಸಭೆಯಲ್ಲಿ ಭಾಷಣ ಮಾಡುತ್ತಾ ಈ ನಿಧಿಗಾಗಿ ನೀವೆಲ್ಲ, ಧರಿಸಿರುವ ಒಡವೆಗಳನ್ನು ದಾನ ಮಾಡಬೇಕು ಎಂದು ಮನವಿ ಮಾಡುತ್ತಿದ್ದರು.

ಮಹಿಳೆಯರ ನಡುವೆ ಗಾಂಧೀಜಿಯವರು ವಿವರಿಸಿದ ಸಂಗತಿಗಳು ಹೃದಯಕ್ಕೆ ತಗಲಿದಾಗ ಕೊಡುವುದೊ? ಬೇಡವೋ ಎಂಬ ಜಿಜ್ಞಾಸೆ ಮೂಡಿತು. ಆದರೆ ಗಾಂಧೀಜಿಯ ಭಾಷಣ ಮುಗಿದೊಡನೆ ಸುಮಾರು ೧೫-೧೬ ವರ್ಷ ವಯಸ್ಸಾಗಿದ್ದ ಬಾಲಕಿಯೊಬ್ಬಳು ಎದ್ದು, ಭಾಷಣದ ವೇದಿಕೆಯ ಮುಂದೆ ಬಂದಳು. ಸೌಮ್ಯ ಮುಖದ ಆಕೆ ಕಿರು ಪುಸ್ತಕವನ್ನು ಬಾಪೂಜಿ ಮುಂದೆ ಹಿಡಿದು, ಇದರಲ್ಲಿ ನಿಮ್ಮ ಸಹಿ ಕೊಡಿ ಎಂದು ವಿನಯದಿಂದ ಕೇಳಿದಳು ಮತ್ತು ತಾನಾಗಿಯೇ ತನ್ನ ಎಡಗೈನ ಚಿನ್ನದ ಬಳೆ ಕಳಚಿಕೊಟ್ಟಳು. ಗಾಂಧೀಜಿ, ಆಕೆಯ ಪುಸ್ತಕದಲ್ಲಿ ಸಹಿಮಾಡಿ ಮುಗಿಸುವಷ್ಟರಲ್ಲಿ ತನ್ನ ಬಲಗೈನ ಲ್ಲಿದ್ದ ಚಿನ್ನದ ಬಳೆಯನ್ನು ತೆಗೆದುಕೊಟ್ಟಳು. ಇದನ್ನು ನಿರೀಕ್ಷಿಸದಿದ್ದ ಮಹಾತ್ಮರು "ಅಮ್ಮ ನೀನು ಒಂದೇ ಬಳೆ ಕೊಟ್ಟಿದ್ದರೂ ಸಹಿ ಮಾಡಿಕೊಡುತ್ತಿದ್ದೆ. ಎರಡು ಬಳೆ ಕೊಡಬೇಕಾಗಿರಲಿಲ್ಲ" ಎನ್ನುತ್ತಿದ್ದಂತೆಯೇ ಆ ಬಾಲಕಿ, ತನ್ನ ಕೊರಳಿನಲ್ಲಿದ್ದ ಚಿನ್ನದ ಸರವನ್ನೂ ತೆಗೆದು ಅರ್ಪಿಸಿ ಎಲ್ಲರನ್ನು ಚಕಿತಗೊಳಿಸಿದಳು.

ಅಮ್ಮ ಇವನ್ನೆಲ್ಲಾ ಕೊಡುತ್ತಿದ್ದೀಯಾ ನಿಮ್ಮ ಮನೆಯವರ ಅನುಮತಿ ಪಡೆದಿದ್ದೀಯಾ? ಎಂದು ಬೆರಗಾದ ಗಾಂಧೀಜಿ ಕೇಳುತ್ತಿದ್ದಂತೆಯೇ ಆಕೆ ಉತ್ತರವನ್ನೇನೂ ಹೇಳದೆ ತನ್ನ ಕಿವಿಯಲ್ಲಿದ್ದ ಬಂಗಾರದ ಓಲೆಗಳನ್ನು ಕಳಚಲು ತೊಡಗಿದಳು. ಗಾಂಧೀಜಿ ಆಕೆಯ ಕೈಹಿಡಿದು ಹತ್ತಿರ ಎಳೆದುಕೊಂಡು "ಅಮ್ಮ ನೀನಾರು? ಹೆಸರೇನು?" ಎಂದು ಕೇಳಿದರು. ಆಕೆ "ನನ್ನ ಹೆಸರು ಕೌಮುದಿ" ಎಂದಳು.

(ಗಾಂಧಿ ಗ್ರಂಥದ ಆಧಾರ.)

ಆಗ ಗಾಂಧೀಜಿ ಏನಮ್ಮ ನನ್ನ ಪ್ರಶ್ನೆಗೆ ಉತ್ತರಿಸಲಿ ಇಲ್ಲ ಎಂದು ಹೇಳಿ “ಈಗ ನೀನೇನೂ ಆಭರಣಗಳ ದಾನ ಮಾಡಿದ್ದೀಯ. ಆದರೆ ಇನ್ನು ಮುಂದೆ ಎಂದೂ ಒಡವೆಗಳನ್ನು ಧರಿಸುವುದಿಲ್ಲವೆಂದು ವಾಗ್ದಾನ ಮಾಡಬೇಕು” ಎಂದು ಕೇಳಿದರು.

ಬಾಯಿನಲ್ಲೇನೂ ಹೇಳದ ಕೌಮುದಿಯು, ಅವರ ಸಲಹೆಗೆ “ಒಪ್ಪಿಗೆ” ಎಂಬಂತೆ ತಲೆಯಾಡಿಸಿದಳು.

ಕೇರಳ ಪ್ರವಾಸ ಮುಗಿಸಿ ಗಾಂಧೀಜಿ ಬೇರೆ ರಾಜ್ಯಗಳಿಗೆ ಹೊರಡುವ ಮುನ್ನ ಅವರಿಗೆ ಬೀಳ್ಕೊಡುವಾಗ ಉಪಸ್ಥಿತಳಾಗಿದ್ದ ಕೌಮುದಿಯನ್ನು “ಈಗೇನೋ ಜಿದ್ದ ಆಭರಣಗಳನ್ನು ನೀಡಿಬಿಟ್ಟೆ, ಎಷ್ಟಾದರೂ ನೀನು ಹೆಣ್ಣು.” ಮುಂದೆ ಮದುವೆಯಾಗಬೇಕು. ಆಭರಣ ಧರಿಸದವಳನ್ನು ವಿವಾಹವಾಗಲು ವರನಾಗುವವನು ವಿರೋಧಿಸಿದರೆ ಏನು ಮಾಡುವೆ ಹೇಳು? ನಾನು ‘ಹರಿಜನ’ ಪತ್ರಿಕೆಗೆ ನಿನ್ನ ತ್ಯಾಗ ಕುರಿತು ಲೇಖನ ಬರೆದಿದ್ದೇನೆ. ಅಗತ್ಯವಾದರೆ ಬದಲಾಯಿಸುತ್ತೇನೆ ಎಂದರು.

ಆಗ ಆಕೆ ಒಡವೆ ಧರಿಸೆಂಬುವವನನ್ನು ಕೈಹಿಡಿಯೆನು, ಆಭರಣ ಧರಿಸಲು ಕಡ್ಡಾಯ ಮಾಡದವನ ಕರಹಿಡಿಯೇನು ಎಂದು ನುಡಿದಾಗ, ಬಾಪೂಜಿ “ನಿನ್ನದು ಆದರ್ಶಮಯ ದೃಷ್ಟಿ. ಅನುಕರಣೀಯ” ಎಂದು ಉದ್ಗಾರವಾಡಿದರು. ಅಲ್ಲದೆ ಹೋದ ಕಡೆಗಳಲ್ಲೆಲ್ಲಾ ಕೌಮುದಿಯ ತ್ಯಾಗ ಹಾಗೂ ಸಂಕಲ್ಪಗಳನ್ನು ಪ್ರಸಾರಮಾಡಿದ್ದಲ್ಲದೆ, ಹರಿಜನರ ಕ್ಷೇಮಕ್ಕಾಗಿ ಕೌಮುದಿ ಮಾಡಿದ ತ್ಯಾಗವನ್ನು ತಮ್ಮ ದಿನಚರಿಯಲ್ಲಿ ಬರೆದಿಟ್ಟಿದ್ದಾರೆ.

ಹ. ಲ. ಶ್ರೀಕಂಠಮೂರ್ತಿ

ಮಾನವನು ಪರಮಾತ್ಮನನ್ನು ಮರೆತು ಭೌತಿಕ ಸುಖದ ಬೆನ್ನು ಹತ್ತಿ ಹೋಗುವುದರಿಂದಲೇ ಆತನ ದೇಹಕ್ಕೆ ರೋಗರುಜಿನಗಳು ಅಂಟಿಕೊಳ್ಳುತ್ತವೆ.

—ಗುರುನಾನಕ

ನ್ಯಾಯನೀತಿಗಳಿಲ್ಲದ ಶಕ್ತಿಯಿಂದ ಯಾವ ಪುರುಷಾರ್ಥವೂ ಸಿದ್ಧಿಸದು. ಅದರಿಂದ ಆತ್ಮನಾಶವಾಗುವುದು:

—ಹೋರೇಸ್

ವಾದ್ಯಗಳ ಮೂಲಕ ಸಂಕೇತ ಮತ್ತು ಸಂಭಾಷಣೆ

ಪ್ರಪಂಚದಲ್ಲಿ ಸುಮಾರು ಮೂರುಸಾವಿರ ಭಾಷೆಗಳಿವೆಯೆಂದು ಅಂದಾಜು ಮಾಡಲಾಗಿದೆ. ಭಾಷೆಯೆಂದಕೂಡಲೇ ಅದರ ಶಬ್ದರೂಪಗಳು ನಮ್ಮ ಗಮನಕ್ಕೆ ಬರುತ್ತವೆ. ಭಾಷೆಯಲ್ಲಿ ಒಂದು ಅರ್ಥಸಹಿತ ಶಬ್ದಕ್ಕೆ ಚಾಕ್ಷುಷ ಮತ್ತು ಶಾಬ್ದಿಕವೆಂದು ಎರಡು ರೂಪಕಗಳಿವೆ. ಇವು ಭಾಷೆಯನ್ನು ಸಂಕೇತಿಸುತ್ತವೆ. ವ್ಯಕ್ತಿಯ ಮನಸ್ಸಿನಲ್ಲಿ ಮೂಡಿದ ಭಾವನೆಗಳು ಆಲೋಚನೆಗಳು ಬರವಣಿಯ ಮೂಲಕ ವ್ಯಕ್ತವಾಗಬಹುದು ಅಥವಾ ಶಬ್ದದ ಮೂಲಕ ವ್ಯಕ್ತವಾಗಬಹುದು. ಒಂದು ಶಬ್ದ ಅಥವಾ ಪದಕ್ಕೆ ಅರ್ಥ ಇಂಥದ್ದೆಂದು ನಿಯೋಜಿತವಾಗಿರುವುದರಿಂದ, ಒಂದು ಸಮುದಾಯದಲ್ಲಿ ಆಲೋಚನೆಗಳ ವಿನಿಮಯ ಭಾಷೆಯ ಮೂಲಕ ಏರ್ಪಡುತ್ತದೆ. ಲಿಪಿಸಹಿತ, ಲಿಪಿರಹಿತ ಭಾಷೆಗಳ ಜೊತೆಗೆ ಸಂಕೇತ ಭಾಷೆಗಳೂ ಇವೆಯೆಂಬ ವಿಚಾರ ಕುತೂಹಲಕರವಾದುದು. ಸಂಕೇತ ಭಾಷೆಗಳು ಎಂದ ಕೂಡಲೇ ನಮಗೆ ಕಿವುಡು ಮೂಕರ ಭಾಷೆ ನೆನಪಿಗೆ ಬರಬಹುದು. ಸಂಗೀತ ಮತ್ತು ನೃತ್ಯಗಳು ಭಾವಲಹರಿಯ ಸಂಕೇತಗಳೇ ಆದ್ದರಿಂದ ಅವು ಆಲೋಚನೆಯ ಭಾವನೆಯ ಸಮರ್ಥಮಾಧ್ಯಮವಾಗಿ ವ್ಯಕ್ತಗೊಳ್ಳುತ್ತವೆ.

ಆಫ್ರಿಕ, ಪೆಸಿಫಿಕ್, ಮಧ್ಯ ಮತ್ತು ದಕ್ಷಿಣ ಅಮೇರಿಕದ ಕೆಲವು ಬುಡಕಟ್ಟು ಜನರಲ್ಲಿ ಆಡುಭಾಷೆಗಳಿವೆ. ಈ ಆಡು ಭಾಷೆಗಳಲ್ಲಿ ಸಂವಹನಕ್ರಿಯೆ ಎಷ್ಟೊಂದು ಪ್ರಭಾವಶಾಲಿಯಾಗಿ ಅಭಿವ್ಯಕ್ತಗೊಳ್ಳುತ್ತದೆಯೋ, ಅಷ್ಟೇ ಪ್ರಭಾವಶಾಲಿಯಾಗಿ ವಾದ್ಯಗಳ ಮೂಲಕ ಸಂಕೇತ, ಸಂಭಾಷಣೆಗಳು ನಡೆಯುತ್ತವೆಂಬ ಸಂಗತಿ ಆಶ್ಚರ್ಯಕರವಾದುದು! ಸಂಕೇತಗಳನ್ನು ಸೂಚಿಸಲು ಸಂಭಾಷಣೆಗಳನ್ನು ನಡೆಸಲು ಈ ಜನರು ಸಿಳ್ಳು, ಕೊಳಲು, ಕೊಂಬು, ಡ್ರಂ (ತಮಟೆ, ನಗಾರಿ, ಢೋಲು), ಜಾಗಟೆ, ಬಟ್ಟಲುಗಂಟೆ, ಕ್ಸೈಲೊಫೋನ್ ಮುಂತಾದ ವಾದ್ಯಗಳನ್ನು ಸಮರ್ಥವಾಗಿ ಬಳಸುತ್ತಾರೆ. ವಾದ್ಯಗಳಿಂದ ಹೊರಡುವ ನಾದವು ಮಾತಿಗೆ ಮೀರಿದ ಅರ್ಥಪ್ರತೀತಿಯನ್ನು ತಂದುಕೊಡುತ್ತವೆಯಾದ್ದರಿಂದ ಸಂಕೇತ, ಸಂಭಾಷಣೆಗಳನ್ನು ವಾದ್ಯಗಳ ಮೂಲಕ ಅಭಿವ್ಯಕ್ತಿಸುವ ಒಂದು ಮಾಧ್ಯಮವನ್ನು ವ್ಯಾವಹಾರಿಕ ಉಪಯೋಗಕ್ಕೆ ಅಲ್ಲಿನ ಜನರು ಬಳಸಿಕೊಂಡಿದ್ದಾರೆ. ಮೆಜಾಟೆಕೊ ಇಂಡಿಯನ್ನರು ಮತ್ತು ಲ-ಗೊಮೆರ ಜನರು ಸಿಳ್ಳನ್ನು, ಜಬೊ ಭಾಷೆಯನ್ನಾಡುವ ಜನರು ಡ್ರಂ ಮತ್ತು ಕೊಂಬುಗಳನ್ನು, ಬುರುಂಡಿ ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತಿರುವ ಜನರು ನಗಾರಿಯನ್ನು, ಫಿಜಿ ದ್ವೀಪವಾಸಿ

ಗಳು ತಮಟೆಯನ್ನು, ಉತ್ತರಬರ್ಮದ ಚಿನ್ನರು ಕ್ಸೈಲೊಫೋನನ್ನು ಬಳಸಿದರೆ, ಎಫಿಕ್ ಜನರು ಜಾಗಟೆಯನ್ನು ಬಳಸುವರೆಂದು ತಿಳಿದುಬಂದಿದೆ. ಅಮೆರಿಕನ್ ಇಂಡಿಯನ್ನರಲ್ಲಿ ಕೆಲವರು ತಮ್ಮ ಗುಪ್ತವ್ಯವಹಾರವನ್ನು ಸಂಕೇತಿಸಲು, ಬಾಯಿಂದ ವಿವಿಧಾಕೃತಿಯ ಧೂಮವನ್ನು ಬಿಡುವುದು ಉಂಟು. ಹೀಗೆ ವಿವಿಧ ವಾದ್ಯಗಳ ಮೂಲಕ ಸಂಕೇತ ಮತ್ತು ಸಂಭಾಷಣೆಗಳನ್ನು ನಡೆಸುವ ಜನರನ್ನು ಕುರಿತು ಅಧ್ಯಯನ ಮಾಡಿರುವವರ ಪೈಕಿ ಕೋವನ್, ಕ್ಲಾಸೆ (ಸಿಳ್ಳುಮಾತು), ಹರ್‌ಜೋಗ್ (ಡ್ರಂ), ಸಿಮ್ಮನ್ಸ್ (ಜಾಗಟೆ), ಮುಖ್ಯರಾಗಿದ್ದಾರೆ.

ಮೆಕ್ಸಿಕೊ ದೇಶದ ಒಕ್ಸಾಕ ರಾಜ್ಯದಲ್ಲಿನ ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತಿರುವ ಮಜಾಟಿಕೊ-ಇಂಡಿಯನ್ನರು ಸಿಳ್ಳಿನ ಮೂಲಕ ನಡೆಸುವ ಭಾಷಾವ್ಯವಹಾರ ವಿಶಿಷ್ಟವಾದುದು. ಬಾಯಿ ಮಾತಿನಲ್ಲಿ ಯಾವ ಒಂದು ಪದವನ್ನು ಹೇಳಬಹುದೋ ಅದನ್ನೇ ಆ ಜನರು ಸಿಳ್ಳಿನ ಮೂಲಕ ತಿಳಿಸುತ್ತಾರೆ. ಇವರ ಸಿಳ್ಳುಗಳು ಸಮುದಾಯದ ಒಪ್ಪಂದದಂತೆ ಖಚಿತ ಅರ್ಥಮೌಲ್ಯವನ್ನು ಬಿಂಬಿಸುವ ಸಂಕೇತಗಳಾಗಿವೆ. ಯುಜೇಬಿಯೊ ಮಾರ್ಟಿನೆಜ್ ಎಂಬುವನು ತನ್ನ ಗುಡಿಸಿಲಿನ ಮುಂದೆ ನಿಂತಿದ್ದಾಗ, ಮಾರುಕಟ್ಟೆಗೆ ದವಸವನ್ನು ಒಯ್ಯುತ್ತಿದ್ದ ವ್ಯಾಪಾರಿಯೊಬ್ಬನನ್ನು ಕಂಡು ತಕ್ಷಣವೇ ಸಿಳ್ಳು ಹಾಕಿದನು. ಇದನ್ನು ಕೇಳಿದ ವ್ಯಾಪಾರಿ ಸಿಳ್ಳಿನ ಮೂಲಕವೇ ಪ್ರತಿಕ್ರಿಯಿಸಿದ. ಸ್ವಲ್ಪ ಹೊತ್ತು ಇವರಿಬ್ಬರ ಸಂವಾದ ಸಿಳ್ಳಿನ ಮೂಲಕವೇ ನಡೆದ ಅನಂತರ, ಪರಸ್ಪರ ಇಬ್ಬರೂ ಒಂದು ಒಪ್ಪಂದಕ್ಕೆ ಬಂದರೋ ಎನ್ನುವಂತೆ ವ್ಯಾಪಾರಿ ಮಾರ್ಟಿನೆಜ್‌ನ ಗುಡಿಸಿಲಿನ ಮುಂದೆ ತನ್ನ ಸರಕನ್ನು ಹಾಕಿದನು. ಮಾರ್ಟಿನೆಜ್ ಹೊರೆಯನ್ನು ನೋಡಿ ಗುಡಿಸಿಲಿನ ಒಳಗೆ ಹೋಗಿ ಹಣವನ್ನು ತಂದು ವ್ಯಾಪಾರಿಗೆ ಕೊಟ್ಟನು. ಹಣವನ್ನು ಪಡೆದ ವ್ಯಾಪಾರಿ ಹೊರಟುಹೋದನು. ಈ ವ್ಯವಹಾರದಲ್ಲಿ ಇಬ್ಬರೂ ಒಂದು ಮಾತನ್ನು ತಪ್ಪಿಯೂ ಕೂಡ ಆಡಲಿಲ್ಲ. ಆದರೂ ಅವರಿಬ್ಬರೂ ಸಂಭಾಷಿಸಿದರು. ದವಸದ ಬೆಲೆಯನ್ನು ಕುರಿತು ಇಬ್ಬರಿಗೂ ಸಮಾಧಾನಕರವಾಗುವಂತೆ ಒಂದು ನಿರ್ಣಯಕ್ಕೆ ಬಂದರು. ಅನಂತರ ಕೊಳ್ಳುವಿಕೆ-ಕೊಡುವಿಕೆ ನಡೆಯಿತು. ಇಷ್ಟೆಲ್ಲ ಸಿಳ್ಳಿನ ಮೂಲಕವೇ ನಡೆಯಿತು (ಕೋವನ್, ೧೯೪೮).

ತಾವು ಸಂಭಾಷಿಸಬೇಕಾದ ವ್ಯಕ್ತಿ ದೂರದಲ್ಲಿದ್ದರೆ ಅಥವಾ ಪರ್ವತ ತಪ್ಪಲಿನ ಹೊಲಗಳಲ್ಲಿ ಕೆಲಸ ಮಾಡುತ್ತಿದ್ದರೆ ಮಾತ್ರ ಮಜಾಟಿಕೊ ಜನರು ಸಿಳ್ಳಿನ ಮೂಲಕ ಸಂಭಾಷಿಸುವರು. ತನ್ನ ಅಂಗಡಿಯಲ್ಲಿ ಒಂಟಿಯಾಗಿ ಕೆಲಸಮಾಡು

ತ್ತಿರುವ ಹಳ್ಳಿಯ ಚಮ್ಮಾರನು, ತನ್ನೊಡನೆ ಹರಟೆಹೊಡೆಯಲು ವ್ಯಕ್ತಿಯೊಬ್ಬ ಬೇಕೆನಿಸಿದಾಗ, ತನ್ನ ಪರಿಚಿತರನ್ನು ಸಿಳ್ಳಿನ ಮೂಲಕ ಕರೆಯುತ್ತಾನೆ. ಸ್ನೇಹಿತನ ಗುಡಿಸಿಲಿಗೆ ಭೇಟಿ ನೀಡುವ ಉದ್ದೇಶದಿಂದ ಬಂದ ವ್ಯಕ್ತಿಯೊಬ್ಬ, ಸ್ನೇಹಿತನ ಹೆಸರನ್ನು ಬಾಯಿ ಮಾತಿನ ಮೂಲಕ ಕೂಗಿ ಕರೆಯುವ ಬದಲು ಸಿಳ್ಳು ಹಾಕುವನು. ಸ್ನೇಹಿತ ಗುಡಿಸಿಲಿನ ಒಳಗಿದ್ದರೆ ತಕ್ಷಣ ಸಿಳ್ಳಿನ ಮೂಲಕ ಒಳಗೆ ಬರಲು ತಿಳಿಸುವನು ಅಥವಾ ತಾನಾಗಿಯೇ ಹೊರ ಬಂದು ಸ್ವಾಗತಿಸುವನು. ಬಯಲು ಪ್ರದೇಶದ ದನಗಾಹಿಯೊಬ್ಬ ಆಗುಂತಕರನ್ನು ಕಂಡಾಗ ತಕ್ಷಣವೇ ತನ್ನ ಬುಡಕಟ್ಟಿನ ಜನರಿಗೆ ಸಿಳ್ಳಿನ ಮೂಲಕ ಸೂಚನೆ ನೀಡುವನು. ಆ ಕ್ಷಣವೇ ಹೊಲಗಳಲ್ಲಿ ದುಡಿಯುತ್ತಿರುವ ಹಾಗೂ ಗುಡಿಸಿಲಲ್ಲಿರುವ ಗಂಡು ಹೆಣ್ಣುಗಳು ಜಾಗರೂಕರಾಗುವರು. ಸಾಮಾನ್ಯವಾಗಿ ಗಂಡಸರು ಮತ್ತು ಮಕ್ಕಳು ಮಾತ್ರ ಸಿಳ್ಳಿನ ಮೂಲಕ ಸಂಭಾಷಿಸುತ್ತಾರೆ. ಕೆಲವು ಪ್ರಣಯಿಗಳು ಗುಪ್ತವಾಗಿ ಸಿಳ್ಳುಗಳ ಮೂಲಕ ಸಂಭಾಷಣೆ ನಡೆಸುವರು. ತಮ್ಮ ತಾಯಿಯ ಕರೆಗೆ, ಚಿಕ್ಕಮಕ್ಕಳು ಸಿಳ್ಳಿನಮೂಲಕವೇ ಉತ್ತರಕೊಡುವರು. ಸಿಳ್ಳು ಸಂಭಾಷಣೆಗಳು ಒಂದು ಪ್ರಶ್ನೆಗೆ ಒಂದೇ ಉತ್ತರವನ್ನು ಒಳಗೊಂಡಿರುವಂಥವು. ಸಣ್ಣ ಪ್ರಶ್ನೆಗೆ ಪುಟ್ಟ ಉತ್ತರ.

ಕೆಲವೊಮ್ಮೆ ಸಿಳ್ಳು ಸಂಭಾಷಣೆಗಳಲ್ಲಿ ಸಂದಿಗ್ಧತೆ ತಲೆದೋರುವುದುಂಟು. ಇದಕ್ಕೆ ಮುಖ್ಯ ಕಾರಣ ಮಜಾಟೆಕೊ ತಾನಾತ್ಮಕ ಭಾಷೆಯಾಗಿರುವುದು. ಈ ಭಾಷೆಯಲ್ಲಿ ವಿಭಾಜಕ ಮತ್ತು ಅವಿಭಾಜಕ ಧ್ವನಿಮಾಗಳಿವೆ. ಆದರೆ ಸಿಳ್ಳು ಮಾತಿನಲ್ಲಿ ಈ ಧ್ವನಿಮಾಗಳನ್ನು ಕೆಲವು ಸಾರಿ ಗುರುತಿಸಲು ಸಾಧ್ಯವಿಲ್ಲದ ಕಾರಣ, ಭಿನ್ನಾರ್ಥ ತಲೆದೋರುವುದುಂಟು. ಅಂಕಿತ ನಾಮಗಳನ್ನು ಸಿಳ್ಳು ಮಾತಿನಲ್ಲಿ ಹೇಳುವುದು ಕಷ್ಟಸಾಧ್ಯ. ಬಾಯಿಮಾತಿನಲ್ಲಿರುವ ತಾನಾತ್ಮಕ ಲಕ್ಷಣಗಳನ್ನು ಸಿಳ್ಳುಮಾತಿನಲ್ಲಿಯು ಕಾಣಬಹುದು. ಈ ಎರಡು ಬಗೆಯ ಮಾತಿನಲ್ಲಿ ಪ್ರಾತಿಪದಿಕದ ಕೊನೆಯಾಕ್ಷರದ ಮೇಲೆ ಮುಖ್ಯ ಪದ–ಬಲಾಘಾತ ಬೀಳುತ್ತದೆ. ಸಿಳ್ಳು ಮಾತಿನ ಧ್ವನಿಗಳು ಹೆಚ್ಚಾಗಿ ಓಷ್ಠ್ಯ ಧ್ವನಿಗಳು.

ಲೈಬೀರಿಯಾದ (ಪಶ್ಚಿಮ ಆಫ್ರಿಕ) ಜಬೊ ಭಾಷೆಯನ್ನಾಡುವ ಜನರು ಡ್ರಂ ವಾದ್ಯಗಳನ್ನು ವಿಶಿಷ್ಟ ರೀತಿಯಲ್ಲಿ ಬಾರಿಸುವುದರ ಮೂಲಕ ಸಂಕೇತ ನೀಡುವರಲ್ಲದೆ, ಸಂಭಾಷಣೆಯನ್ನು ನಡೆಸಬಲ್ಲರು. ಇವರು ಮುಖ್ಯವಾಗಿ ಮರದ ಅಥವಾ ಸೀಳುಡ್ರಂ ಮತ್ತು ಚರ್ಮಹೊದಿಕೆಯನ್ನು ಹೊಂದಿರುವ

ಡ್ರಂಗಳನ್ನು ಬಳಸುವರು. ಈ ಎರಡು ಬಗೆಯ ವಾದ್ಯಗಳನ್ನು ಬಾರಿಸಲು ನುರಿತ ನಿಯೋಜಿತರಾದ ವಾದಕರಿರುತ್ತಾರೆ. ಸಾಮಾನ್ಯವಾಗಿ ಹಳ್ಳಿಯ ಮುಖಂಡ ಮುಖ್ಯವಾದಕ. ಇವನ ಗುಡಿಸಿಲಿನ ಒಂದು ಪಕ್ಕಕ್ಕೆ ಡ್ರಂಗಳನ್ನು ಬಾರಿಸಲು ಅನುಕೂಲಕರವಾಗಿರುವಂತೆ ಹಗ್ಗಕ್ಕೆ ಬಿಗಿದು ಕಟ್ಟಿರುತ್ತಾರೆ. ಕೆಲವು ಡ್ರಮ್ಮುಗಳು ಎಂಟು ಅಡಿ ಉದ್ದ ವಿರುವುದೂ ಉಂಟು. ಇವುಗಳನ್ನು ಬಾರಿಸಲು ಅವುಗಳ ಪಕ್ಕದಲ್ಲಿ ದೊಂಬು ಅಥವಾ ಚಿಕ್ಕಚಿಕ್ಕ ಕಲ್ಲುಗಳಿಂದ ಒಂದು ಚಿಕ್ಕ ವೇದಿಕೆಯನ್ನು ನಿರ್ಮಿಸಿರುತ್ತಾರೆ. ಮುಖಂಡನು ಇದರ ಮೇಲೆ ನಿಂತುಕೊಂಡು ಸಭೆಯನ್ನು ಕರೆಯಲು, ಅಪ್ಪಣೆಕೊಡಲು, ಮುಕ್ತಾಯ ಮಾಡಲು ಉದ್ದವಾಗಿ ತೂಕವಾಗಿರುವ ಎರಡು ಕಡ್ಡಿಗಳಿಂದ ಡ್ರಮ್ಮನ್ನು ವಿವಿಧ ಗತಿಗಳಲ್ಲಿ ಬಾರಿಸುವುದರ ಮೂಲಕ ಸೂಚನೆಗಳನ್ನು ನೀಡುವನು. ಅಪಾಯದ ಸುಳಿವು ಕಂಡು ಬಂದರೆ ಡ್ರಮ್ಮನ್ನು ಮೂರು ಸಾರಿ ನಿಧಾನವಾಗಿ ಬಾರಿಸಿ, ಬುಡಕಟ್ಟಿನ ಜನರು ನಿಶ್ಶಬ್ದವಾಗಿ ಎಚ್ಚರಿಕೆಯಿಂದ ಇರಲು ಸೂಚನೆ ನೀಡುತ್ತಾನೆ. ಬಾಯಿ ಮಾತಿನಲ್ಲಿ ಯಾವ ವಿಚಾರವನ್ನು ಅವನು ವ್ಯಕ್ತಪಡಿಸುವುದಿಲ್ಲ.

ಬುಡಕಟ್ಟಿನ ಮುಖಂಡನಿಗೆ ಜಯವಾದಾಗ, ಉತ್ತಮ ಬೇಟೆ ದೊರಕಿದಾಗ ಅಥವಾ ಯಾವುದಾದರೂ ಸಂತೋಷದ ಸುದ್ದಿ ತಿಳಿದಾಗ ನೃತ್ಯ ಕಾರ್ಯಕ್ರಮ ಏರ್ಪಡುತ್ತದೆ. ಈ ನೃತ್ಯಕಾರ್ಯಕ್ರಮಕ್ಕೆಂದೇ ಮೀಸಲಾದ ಡ್ರಂ ಇರುತ್ತದೆ. ಇದು ದೋಲನ್ನು ಹೋಲುತ್ತದೆ. ಗಾತ್ರದಲ್ಲಿ ಸಣ್ಣದಿರುವ ಇದನ್ನು ಬಾರಿಸುವ ಹೊಣೆ ಮುಖಂಡನದು. ವಾದ್ಯದ ಸದ್ದಿಗನುಗುಣವಾಗಿ ನೃತ್ಯಗಾತಿಯರು ನರ್ತನವನ್ನು ಮಾಡುವರು. ಈ ನೃತ್ಯಕಾರ್ಯಕ್ರಮದಲ್ಲಿ ಹಾಡುಗಾರಿಕೆ ಇರುವುದಿಲ್ಲ. ಕೇವಲ ವಾದ್ಯಗಳ ಬಡಿತ; ಬಡಿತಕ್ಕೆ ತಕ್ಕ ಕುಣಿತ ಮಾತ್ರ.

ಆಫ್ರಿಕದ ಲೋಕೆಲೆ ಎನ್ನುವ ಬುಡಕಟ್ಟಿನ ಜನರು ತಮ್ಮ ಅಭಿಪ್ರಾಯ ಆಲೋಚನೆಗಳನ್ನು ಡೋಲು ವಾದ್ಯದ ಮೂಲಕ ಸಂಕೇತ ರೂಪದಲ್ಲಿ ತಿಳಿಸುತ್ತಾರೆ. ಅವರ ಆಡುಮಾತಿನಲ್ಲಿ ಚಂದ್ರ ಮತ್ತು ಹುಂಜ ಎಂಬ ಪದಗಳು ಸಮನಾದ ತಾನಕ್ರಮಗಳನ್ನು ಹೊಂದಿವೆ. ಈ ಪದಗಳನ್ನು ವಾದ್ಯದ ಮೂಲಕ ಸಂಕೇತಿಸುವಾಗ, 'ಚಂದ್ರ ಭೂಮಿಯ ಕಡೆಗೆ ನೋಡುತ್ತಿದ್ದಾನೆ' ಮತ್ತು 'ಹುಂಜ ಚಿಕ್ಕದು ಕಿಯೊ ಕಿಯೊ ಎನ್ನುತ್ತದೆ' ಎಂಬುದಾಗಿ ಸುಲಭವಾಗಿ ಗುರುತಿಸಬಹುದಾದ ವಾಕ್ಸರಣಿಯಲ್ಲಿ ಹೇಳುತ್ತಾರೆ. (ಕ್ಯಾರಿಂಗ್‌ಟನ್ ೧೯೪೯) ಸ್ವಾಭಾವಿಕವಾಗಿ ಈ ಸಂಕೇತ ಆಡುಮಾತಿನ ಮೂಲಕ ಹೇಳುವುದಕ್ಕಿಂತಲೂ ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತದೆ. ಕಾಮೆರೂನ ಪ್ರದೇಶದ ದುಆಲ

ಜನರಲ್ಲಿ, ವ್ಯಕ್ತಿ ತನ್ನ ಹೆಂಡತಿಗೆ 'ನನಗೆ ಹಸಿವಾಗಿದೆ' ಎಂಬ ವಿಷಯವನ್ನು ತಿಳಿಸಲು ಆಡುಮಾತಿನಲ್ಲಿ ಮೂರು ಅಕ್ಷರಗಳನ್ನು ಬಳಸಿದರೆ, ಹೊಲದ ಕಡೆಯಿಂದ ನಗಾರಿ ಹೊಡೆದು ತಿಳಿಸಲು ಹದಿನೇಳು ಅಕ್ಷರಗಳನ್ನು ಬಳಸಬೇಕಾಗುತ್ತದೆ. (ನೇಕ್ಸ್).

ವಾದ್ಯಗಳ ಮೂಲಕ ಸಂಕೇತ ಮತ್ತು ಸಂಭಾಷಣೆಗಳನ್ನು ನಡೆಸುವ ಜನರ ಆಡುಭಾಷೆಗಳು ಹೆಚ್ಚಾಗಿ ತಾನಾತ್ಮಕ ಭಾಷೆಗಳು. ತಾನಪ್ರಧಾನ ಭಾಷೆಗಳು ಒಂದೇ ವಿಧವಾದ ಅನನ್ಯ ಸಂಬಂಧವುಳ್ಳ ತಾನ ಸಂಬಂಧಿತ ನಮೂನೆಗಳನ್ನು ಹೊಂದಿರುವ ಅನೇಕ ಪದಗಳನ್ನು, ಅಕ್ಷರಗಳನ್ನು ಹೊಂದಿವೆ. ಆದುದರಿಂದ ಭಾಷಾವ್ಯವಹಾರದಲ್ಲಿ ಉಗವಿಸುವ ಸಮಸ್ಯೆಗಳನ್ನು, ಸಂದಿಗ್ಧತೆಗಳನ್ನು ಭಾಷೆಯನ್ನಾಡುವ ಸನ್ನಿವೇಶ, ಸಂದರ್ಭಗಳನ್ನು ನೋಡಿ ಪರಿಹರಿಸಿಕೊಳ್ಳಬೇಕಾಗುತ್ತದೆ. ಮತ್ತೊಂದು ಪರಿಹಾರವೆಂದರೆ ಪದಗಳ ಬದಲು ಪದಸರಣಿಗಳನ್ನು ಜೋಡಿಸಿ ಹೇಳಬೇಕಾಗುತ್ತದೆ.

ವಾದ್ಯಗಳ ಮೂಲಕ ಭಾಷಾವ್ಯವಹಾರವನ್ನು ನಿರ್ವಹಿಸುವ ಜನರಲ್ಲಿ, ಈ ವಾದ್ಯವು ಒಂದು ವ್ಯವಸ್ಥೆಯಾಗಿ ಪರಿಣಮಿಸಿದೆ. ಸಾಮಾಜಿಕ ಪರ್ಯಾಲೋಚನೆಯಿಂದ ಉಗಮಗೊಂಡಿರುವ ಈ ವ್ಯವಸ್ಥೆಗಳು ತಾಂತ್ರಿಕವಾಗಿವೆ ಹಾಗೂ ಕಲಾತ್ಮಕವಾಗಿವೆ. ಬುಡಕಟ್ಟಿನ ಜನರು ತಮ್ಮ ಅಭಿಪ್ರಾಯಗಳನ್ನು ವಾದ್ಯಗಳ ಮೂಲಕ ಸಂಕೇತಿಸುವ ರೀತಿ ಮತ್ತು ಸಂಭಾಷಿಸುವ ಕ್ರಮಗಳ ಒಂದು ಅಧ್ಯಯನ ಬಹಳ ಸ್ವಾರಸ್ಯಕರವಾದುದು. ಪಾಶ್ಚಾತ್ಯ ನಾಗರಿಕತೆಯ ಪ್ರಭಾವದಿಂದ ನಗರೀಕರಣದಿಂದ ಈ ಜನರ ಸಂಕೇತ ಮತ್ತು ಸಂಭಾಷಣಾ ವ್ಯವಸ್ಥೆ ನಿಧಾನವಾಗಿ ಕಣ್ಮರೆಯಾಗುತ್ತಿದೆ. ಅವು ನಶಿಸುವ ಮುನ್ನ ಅವುಗಳ ಸಂಗ್ರಹಣೆ, ಅಧ್ಯಯನ ಕಾರ್ಯಗಳು ತ್ವರಿತವಾಗಿ ನಡೆಯದಿದ್ದಲ್ಲಿ, ಅದೊಂದು ಐತಿಹಾಸಿಕ ಕುತೂಹಲವಾಗಿ ಉಳಿಯಬಹುದು ಅಷ್ಟೆ.

ಆರ್. ರಾಮಕೃಷ್ಣ

ಮೊದಲು ನಾವು ಸದ್ಗುಣಗಳಿಂದ ದೇವರಾಗೋಣ. ನಂತರ ಇತರರನ್ನು ದೇವರನ್ನಾಗಿ ಮಾಡಲು ಪ್ರಯತ್ನಿಸೋಣ.

—ವಿವೇಕಾನಂದ

ಮಂದಬುದ್ಧಿ

ಸಾಮಾನ್ಯವಾಗಿ ಜನರು 'ಮಂದಬುದ್ಧಿ'ಯನ್ನು ಒಂದು ರೋಗವೆಂದೇ ಪರಿಗಣಿಸಿ ಅದರ ಚಿಕಿತ್ಸೆಗಾಗಿ ಊರೂರು ತಿರುಗುತ್ತಿರುತ್ತಾರೆ. ಮಂದಬುದ್ಧಿಯು ಶರೀರದ ಒಂದು ಅಸಾಮಾನ್ಯ ಪರಿಸ್ಥಿತಿ ಎಂದು ತಿಳಿಯಬೇಕು.

ನಮ್ಮ ಕೈಯ ಐದು ಬೆರಳುಗಳೂ ಹೇಗೆ ಒಂದೇ ಸಮನಿರುವುದಿಲ್ಲವೋ ಅದೇ ರೀತಿ ಎಲ್ಲ ಜನರೂ ಒಂದೇ ರೀತಿಯಿರುವುದಿಲ್ಲ. ಕೆಲವರು ಹೆಚ್ಚು ಚುರುಕಾಗಿದ್ದರು ಮತ್ತೆ ಕೆಲವರು ಕಡಿಮೆ ಚುರುಕಾಗಿರುತ್ತಾರೆ. ಸಾಮಾನ್ಯ ಜನರಿಗಿಂತ, ಕಲಿತುಕೊಳ್ಳುವಲ್ಲಿ ಅರ್ಥಮಾಡಿಕೊಳ್ಳುವಲ್ಲಿ ಯಾರ ಶಕ್ತಿ ಕಡಿಮೆ ಇರುತ್ತದೋ ಅವರನ್ನು 'ಮಂದಬುದ್ಧಿ'ಯವರು ಎಂದು ಹೇಳಲಾಗುತ್ತದೆ. ಜನ ಸಾಮಾನ್ಯವಾಗಿ ಇವರನ್ನು 'ಮಬ್ಬುಗಳು' 'ದಡ್ಡರು' ಇತ್ಯಾದಿ ಹೆಸರುಗಳಿಂದ ಕೂಗುತ್ತಿರುತ್ತಾರೆ.

ಸುಮಾರು ಶೇಕಡಾ ೨ ರಿಂದ ೩ರಷ್ಟು ಮಂದಬುದ್ಧಿಯವರಿರುತ್ತಾರೆ. ಆದರೆ ಈ ೨–೩ರಲ್ಲಿ ಒಬ್ಬಾತನ ಬುದ್ಧಿ ತುಂಬಾ ಕಡಿಮೆ ಇರುವ ಸಂಭವವೂ ಹೆಚ್ಚು.

ಮಂದಬುದ್ಧಿಯವರನ್ನು ಗುರುತಿಸುವುದು

ಮಂದಬುದ್ಧಿಯ ಮಕ್ಕಳು ಶಾರೀರಕ ದೃಷ್ಟಿಯಿಂದಲೂ ಉಳಿದ ಮಕ್ಕಳಿಗಿಂತ ಭಿನ್ನವಾಗಿಯೇ ಕಾಣುತ್ತಾರೆ. ಮಾತನಾಡುವುದರಲ್ಲಿ ತೊಂದರೆ, ಊಟ ಮಾಡುವುದು, ಕುಡಿಯುವುದು ಇತ್ಯಾದಿ ಸಾಮಾನ್ಯ ಕೆಲಸಗಳಲ್ಲದೆ ಇತರೆ ಕೆಲಸಕಾರ್ಯಗಳಲ್ಲಿ ಅವರ ಮಂದಬುದ್ಧಿ ಗೋಚರಕ್ಕೆ ಬರುತ್ತದೆ. ಆಟಪಾಠಗಳಲ್ಲಿ, ಓದು ಬರೆಯುವುದರಲ್ಲಿ ಇಂಥಾ ಮಕ್ಕಳು ಉಳಿದ ಮಕ್ಕಳ ಹಿಂದೆ ಬೀಳುತ್ತವೆ.

ಮಂದಬುದ್ಧಿಗೆ ಅನೇಕ ಕಾರಣಗಳಿವೆ.

ಮಗು ಹುಟ್ಟುವುದಕ್ಕೆ ಮೊದಲಿನ ಕಾರಣಗಳು

೧೯೮೦ರ ಡಿಸೆಂಬರ್ ತಿಂಗಳ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದಿಂದ, ಪ್ರಕಟಿಸಲ್ಪಡುವ 'ಆರೋಗ್ಯ ಸಂದೇಶ' ಎಂಬ ಹಿಂದಿ ಮಾಸಿಕದಲ್ಲಿ ಪ್ರಕಟಗೊಂಡ 'ಮಂದಬುದ್ಧಿ ಕೇ ಬಾರೇ ಮೇ ಜಾನ್‌ಕಾರಿ' ಎಂಬ ಲೇಖನದ ಕನ್ನಡ ಅನುವಾದ.

ಮಗು ಹುಟ್ಟುವ ಕಾಲದಲ್ಲಿನ ಕಾರಣಗಳು
ಮಗು ಹುಟ್ಟಿದ ನಂತರದ ಕಾರಣಗಳು.

ಮಗು ಹೊಟ್ಟೆಯಲ್ಲಿದ್ದಾಗ ಗರ್ಭವತಿ ತಾಯಿಗೆ ಏಟು ಬೀಳುವುದರಿಂದಲೋ ಅಥವಾ ಸರಿಯಾದ ಸಮತೂಕದ ಆಹಾರ (ಮುಖ್ಯವಾಗಿ ಮೊದಲ ಮೂರು ತಿಂಗಳು) ದೊರೆಯದೇ ಹೋಗುವುದರ ಪ್ರಭಾವದಿಂದಾಗಿ ಗರ್ಭದಲ್ಲಿರುವ ಶಿಶುವಿನ ಮಿದುಳು ದುರ್ಬಲವಾಗುತ್ತದೆ. ಒಮ್ಮೊಮ್ಮೆ ಯಾವ ಕಾರಣವೂ ಇಲ್ಲದೆ ಮಕ್ಕಳ ಮಿದುಳು ಪೂರ್ಣವಾಗಿ ವಿಕಾಸಗೊಳ್ಳದೆ ಹೋಗಬಹುದು.

ಮಗು ಹುಟ್ಟುವ ಕಾಲದಲ್ಲಿ ಹೆಚ್ಚು ಕಷ್ಟವಾಗುವುದರಿಂದಲೋ ಅಥವಾ ಹೆರಿಗೆ ಹೆಚ್ಚು ಕಾಲ ತೆಗೆದುಕೊಳ್ಳುವುದರಿಂದಲೋ ನವಜಾತ ಶಿಶುವಿನ ಮಿದುಳಿನ ಮೇಲೆ ಪ್ರಭಾವ ಬೀಳಬಹುದು. ವಿಶೇಷವಾಗಿ 'ಫೋರ್‌ಸೆಪ್ಸ್ ಡೆಲಿವರಿ'ಯಿಂದ (ಜನನದ್ವಾರದ ಮೂಲಕ ಇಕ್ಕುಳವನ್ನು ಹೊಗಿಸಿ ಮಗುವಿನ ತಲೆಯನ್ನು ಅದರಿಂದ ಹಿಡಿದು ಹೊರಕ್ಕೆಳೆದು ಪ್ರಸವ ಮಾಡುವುದು) ಹುಟ್ಟುವ ಮಗುವಿನ ಮಿದುಳಿನ ಮೇಲೆ ಕೆಟ್ಟ ಪ್ರಭಾವ ಬೀಳುವ ಸಂಭವ ಹೆಚ್ಚು.

ಚಿಕ್ಕವಯಸ್ಸಿನಲ್ಲಿ ತಲೆಗೆ ಏಟು ಬೀಳುವುದು; ಬಹುಹೆಚ್ಚಿನ ಜ್ವರ ಬರುವುದು; ಬಾಲ್ಯದಲ್ಲಿ ಸಮತೂಕದ ಆಹಾರ ದೊರೆಯದೇ ಹೋಗುವುದು ಇತ್ಯಾದಿಕಾರಣಗಳು ಮಕ್ಕಳು ಹುಟ್ಟಿದ ಮೇಲೆ ಮಂದಬುದ್ಧಿಗಳಾಗುವುದಕ್ಕೆ ಕಾರಣಗಳು.

ನಮ್ಮ ದೇಶದಲ್ಲಂತೂ ಬಹುಮುಖ್ಯವಾಗಿ ಮಂದಬುದ್ಧಿಗೆ ಮೇಲ್ಕಾಣಿಸಿದ ಕಾರಣಗಳೇ ಹೆಚ್ಚು.

ಇದಲ್ಲದೆ ಬಾಲ್ಯದಲ್ಲಿ ಮಗುವಿಗೆ ಅಪಸ್ಮಾರ ರೋಗ ಬಂದು ಅದಕ್ಕೆ ಸೂಕ್ತ ಚಿಕಿತ್ಸೆ ನೀಡದಿದ್ದರೆ ಮಂದಬುದ್ಧಿಯಾಗುವ ಸಾಧ್ಯತೆಯೂ ಇದೆ.

ಚಿಕಿತ್ಸೆ

ಮಂದಬುದ್ಧಿಯ ಸ್ಥಿತಿಯನ್ನು ಸರಿಮಾಡಲು ಯಾವ ಔಷಧಿಯೂ ಇಲ್ಲ. ಈ ಸ್ಥಿತಿಯ ಜೊತೆಗೆ ಅಪಸ್ಮಾರ ರೋಗ ಬಂದರಂತೂ ಡಾಕ್ಟರನ್ನು ಕಂಡು ಚಿಕಿತ್ಸೆ ಮಾಡಿಸಬೇಕಾಗುತ್ತದೆ.


ಈ ಸ್ಥಿತಿ ಉಂಟಾದ ಮೇಲೆ ಹೆಚ್ಚು ಪ್ರಯತ್ನಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲ; ಆದರೆ ಇದನ್ನು ತಡೆಗಟ್ಟಲು ಅನೇಕ ಸರಳವಾದ

ಉಪಾಯಗಳಿವೆ. ಹಾಗಾಗಿ ಇವುಗಳನ್ನು ನೆನಪಿನಲ್ಲಿಟ್ಟುಕೊಳ್ಳುವ ಅವಶ್ಯಕತೆ ಹೆಚ್ಚಿದೆ.

* ಗರ್ಭವತಿ ತಾಯಿಗೆ ಸಮತೂಕದ ಪೌಷ್ಟಿಕ ಆಹಾರವನ್ನು ಕೊಡುತ್ತಿರಬೇಕು. ಆಗಾಗ್ಗೆ ಆಕೆಯನ್ನು ಡಾಕ್ಟರಿಗೆ ತೋರಿಸುತ್ತಿರಬೇಕು.
* ಪ್ರಸವಕಾಲದಲ್ಲಿ ಯಾವುದಾದರೂ ಆಸ್ಪತ್ರೆಯ ಅಥವಾ ಶಿಕ್ಷಣಪಡೆದ ದಾದಿಯ ಸಹಾಯ ಪಡೆಯಬೇಕು.
* ಬಾಲ್ಯದಲ್ಲಿ ಮಗುವಿನ ಆರೋಗ್ಯ ಮತ್ತು ಅವರ ಊಟ ಉಪಚಾರಗಳ ಬಗೆಗೆ ಹೆಚ್ಚಿನ ಗಮನ ನೀಡಬೇಕು.

ತಂತಾನೆ ನೋಡಿಕೊಳ್ಳಲಾರದಷ್ಟು ಮಗುವಿನ ಬುದ್ಧಿಶಕ್ತಿ ಮಂದವಾಗಿದ್ದರೆ, ಕುಂಠಿತವಾಗಿದ್ದರೆ ಆ ಮಗುವನ್ನು ಮನೆಯಲ್ಲೇ ಇರಿಸಿಕೊಂಡೋ ಅಥವಾ ವಿಶೇಷ ಶಾಲೆಗೆ ಅವನ್ನು ಕಳುಹಿಸಿಯೋ ಅವರ ಜೀವಮಾನ ಪರ್ಯಂತ ಅವನ್ನು ನೋಡಿಕೊಳ್ಳಬೇಕಾಗುತ್ತದೆ. ಮಕ್ಕಳಲ್ಲಿ ಈ ಮಂದಬುದ್ಧಿಯನ್ನು ಕಂಡ ತಕ್ಷಣ ಯಾರಾದರೂ ಒಳ್ಳೆಯ ಮನೋಚಿಕಿತ್ಸಕರ ಬಳಿಗೆ ಹೋಗಿ ಮಗುವನ್ನು ತೋರಿಸುವುದು ಕ್ಷೇಮ. ಮಂದಬುದ್ಧಿಯ ಇನ್ನುಳಿದ ಮಕ್ಕಳಿಗೆ ಹೆಚ್ಚೆಚ್ಚು ಕಲಿಸದೆ ಗತ್ಯಂತರವಿಲ್ಲ. ಇಂಥ ಮಕ್ಕಳಿಗಾಗಿ ಸರಕಾರ ಮತ್ತು ಸ್ವಯಂ ಸೇವಕ ಸಂಘಗಳಿಂದ ವಿಶೇಷ ಶಾಲೆಗಳು ತೆರೆಯಲ್ಪಟ್ಟಿವೆ. ಇಲ್ಲಿ ಈ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾ, ಅವಕ್ಕೆ ಅಲ್ಲಿ ಶಿಕ್ಷಣ ನೀಡಲಾಗುತ್ತದೆ.

ಎಸ್. ವಿಶ್ವನಾಥ



ತನ್ನ ಸುಖಕ್ಕಾಗಿ ಕಾಲವನ್ನೇ ನಂಬಿ ಕೂರುವವರು ಸದಾಕಾಲಕ್ಕೂ ಅಸುಖಿಗಳಾಗಿಯೇ ಜೀವಿಸಬೇಕಾದೀತು.

—ವಾಲ್ಟೇರ್

ರೋಗಿ ರಾಮಣ್ಣ

ನಮ್ಮ ರಾಮಣ್ಣ ಸಾಧಾರಣವಾಗಿ ಒಂದು ನೆಗಡಿ ಬಂದ್ರೆ ಮೂರು ದಿವಸ ಕಂಬಳಿ ಹೊದ್ಕೊಂಡು ಮಲಗೋವನು. ಷಾಪ್‌ನಲ್ಲಿ ಸಿಕ್ಕೋ ಮಾತ್ರೆಗಳನ್ನೆಲ್ಲಾ ನುಂಗಿ ಮುಲಾಮುಗಳನ್ನೆಲ್ಲಾ ಹಚ್ಚಿ ಬಿಸಿ ನೀರನ್ನು ಕುಡಿದು ಮೆಣಸು ಸಾರನ್ನೇ ಆಸ್ವಾದಿಸಿ ತನ್ನ ಬಾಯಿಲಿ ವಾಸಿ ಮಾಡಿಕೊಳ್ಳೋದು.

ಬಚ್ಚಲು ಮನೇಲಿ ಜಾರಿ ಬಿದ್ರು ಅಂದರೆ ಒಂದು ವಾರ ಆಫೀಸಿಗೆ ರಜಾ. ಉಳುಕಿದ ಕೈಗೆ ಕಟ್ಟು ಹಾಕೋದೇನು! ಮಂತ್ರ ಹಾಕೋದೇನು! ಮನೇಲಿ ಇದ್ದವರ ಮೇಲಲ್ಲ ಬಚ್ಚಲು ಮನೆ ಜೋಕ್ಕಟ ಇಟ್ಟಿಲ್ಲಾ ಅಂತ ಒದರಾಡೋದೇನು....! ವಿರಾಮ ಇಲ್ಲದೆ ನಡಸೋದೇನು.

ಆವತ್ತು ಮನೇಲಿ ಒಡೆದಿಟ್ಟಿದ್ದ ಸೌದೆ ಮುಗಿದು ಹೋಗಿತ್ತು, ಸೌದೆ ಎಲ್ಲ ಆಗಿ ಹೋಗಿದೆ ಇವತ್ತು, ಸೌದೆ ಒಡೆಯದಿದ್ದರೆ ಮಧ್ಯಾಹ್ನಕ್ಕೆ ಊಟ ಇಲ್ಲ ಅಂತ ಅಂದಳು, ಮನೆಯೊಡತಿ ಅಂತ ಅನ್ನಿಸಿಕೊಂಡ ರಾಮಣ್ಣನ ಹೆಂಡತಿ.

ಬಹಳ ದಿವಸಗಳಿಂದ ಒಡೆಸಬೇಕು ಒಡೆಸಬೇಕು ಅಂತ ಇಟ್ಟುಕೊಂಡಿದ್ದ ದೊಡ್ಡ ದೊಡ್ಡ ಮರದ ತುಂಡುಗಳನ್ನು ಇವತ್ತು ಹೊಡೆಸಲೇಬೇಕು ಅಂತ ದೃಢ ನಿರ್ಧಾರ ತೊಗೊಂಡ ನಮ್ಮ ರಾಮಣ್ಣ. ಇದ್ದಬದ್ದ ಕಟ್ಟಿಗೆ ಅಂಗಡೀನೆಲ್ಲಾ ಸುತ್ತಿ ಕೊನೆಗೂ ಕೊಡಲಿ ಸಿದ್ದನ್ನ ಕರೆದುಕೊಂಡು ಬಂದ. ಸಿದ್ದ ಬಂದು ತುಂಡುಗಳನ್ನು ನೋಡಿದ.

"ಎಷ್ಟು ಕೊಡಬೇಕೋ ಕೂಲಿ?" ಅಂತ ಅಂದ ರಾಮಣ್ಣ. "ಕೊಡಿ ನಿಮಗೆ ತಿಳಿದಷ್ಟು".

"ಅಯ್ಯೋ ಅದೆಲ್ಲಾ ಆಮೇಲೆ ಪಂಚಾಯಿತಿ ಬೇಡ ಎಷ್ಟು ಕೊಡಬೇಕು ಅಂತ ಹೇಳಿಬಿಡು...."

"ಅಯ್ಯೋ ಕೊಡಿ ಬುದ್ಧಿ ನಿಮ್ಮ ಹತ್ರ ಏನು ಒಂದು ಹತ್ತು ರೂಪಾಯಿ ಕೊಟ್ಬಿಡಿ ಇಲ್ಲಿ ಇರೋವಷ್ಟು ಒಡೆದು ಹಾಕಿ ಬಿಡ್ತೀನಿ...."

"ಏನು ಹತ್ತು ರೂಪಾಯಿ ಒಂದು ಹತ್ತು ತುಂಡೂ ಇಲ್ಲ ಅವನ್ನ ಒಡೆದು ಹಾಕೋಕೆ ಹತ್ತು ರೂಪಾಯಿ ಕೊಡಬೇಕಾ ಐದು ರೂಪಾಯಿ ಕೊಡ್ತೀನಿ. ಮಾಡೋದಾದ್ರೆ ಮಾಡು...."

"ಹೀಗೆಂದ್ರೆ ಹ್ಯಾಗೆ ಬುದ್ಧಿ ಇವನ್ನ ಮಾಡಿದ್ರೆ ಒಂದಿನ್ನದ ಕೆಲಸ ಇದೆ. ಐದು ರೂಪಾಯಿ ಅಂತೀರಲ್ಲ. ಈ ಬಿಸಿಲಿನಾಗೆ ನಾವು ಕೆಲಸ ಮಾಡಲ್ಲಾ

ಹೋಗಲಿ ಒಂಬತ್ತು ರೂಪಾಯಿ ಮಾಡ್ಕೊಳ್ಳಿ ಅಯ್ಯಾ...."

"ಸಾಧ್ಯ ಇಲ್ಲ ಒಪ್ಪತ್ತಿನ ಕೆಲಸ ಇಲ್ಲಿ ಅದಕ್ಕೆ ಅಷ್ಟು ಕೊಡೋಕೆ ಸಾಧ್ಯ ಇಲ್ಲ, ಇನ್ನೆರಡು ರೂಪಾಯಿ ಕೊಡ್ತೀನಿ. ಇದೇ ಕಡೆ ಮಾತು, ಮಾಡೋದಿದ್ರೆ ಹೇಳು...."

"ನೋಡಿ ಎಂಟು ರೂಪಾಯಿ ಕೊಟ್ರೆ ಮಾಡ್ತೀನಿ ಇಲ್ಲದಿದ್ರೆ ಇಲ್ಲ," ಅಂತ ಅಂದ ಅಷ್ಟೇ ಖಂಡಿತವಾಗಿ.

"ರಾಮಣ್ಣಂಗೂ ರೇಗಿತು, ಹೋಗೋ ಸೀ ಮಾಡೋದು ಬೇಡ ನಾನೇ ಒಡೆದುಹಾಕ್ತೀನಿ ಇಷ್ಟಕ್ಕೆ ಎಂಟು ರೂಪಾಯಿ ಕೊಡಬೇಕಂತೆ" ಅಂತ ಗೊಣಗ್ತಾ ಒಳಗೆ ನಡೆದ, ಅಟ್ಟದ ಮೇಲಿದ್ದ ಹಳೇ ಕೊಡಲಿ ಹುಡುಕಿ ತರೋಕೆ.

'ಸರಿ ನಮ್ಮ ರಾಮಣ್ಣ ಪರಶುರಾಮನಾದ! ಮರದ ತುಂಡನ್ನು ಅಡ್ಡ ಹಾಕ್ಕೊಂಡು ಸೀಳೋಕೆ ಶುರು ಮಾಡಿದ.'

ಕೊಡಲಿ ಎತ್ತೋದು: ಹಲ್ಲು ಮುಡಿ ಕಚ್ಚೋದು, ಸೌದೆ ಸೀಳೋದು. ಬಹಳ ಜೋರಾಗಿ ಕೆಲಸ ಸಾಗ್ತಾ ಇತ್ತು. ಬೆವರು ಒರೆಸಿಕೊಳ್ಳುತ್ತಿದ್ದಾಗ, ಪಾಪ, ಕೈಯಿಂದ ಕೊಡಲಿ ಜಾರಿ, ಕಾಲ ಮೇಲೆ ಬಿತ್ತು.

"ಅಮ್ಮಾ", ಅಂತ ಕಾಲು ಹಿಡಿದುಕೊಂಡು ಕೂಗ್ತೇ ಬಿಟ್ಟ, ಐದು ನಿಮಿಷ ಕಳೀತು, ಒಳಗಡೆಯಿಂದ ಯಾರೊಬ್ರು ಏನಾಯ್ತು ಅಂತ ವಿಚಾರಿಸಲೇ ಇಲ್ಲ! ನೋವಿನ ಜೊತೆ ಕೋಪಾನು ಸೇರ್ತು; ಕುಂಟ್ತಾಕುಂಟ್ತಾ ಕೊಡಲಿ ಎತ್ತಿಕೊಂಡು ಒಳಗಡೆ ಬಂದ.

"ಯಾರು ಮಾಡಿದ ಕೆಲಸ ಇದು? ಅಂತ ಗರ್ಜಿಸಿದ ಒಂದು ಸಾರಿ! ಇವನ ಆವೇಶ ನೋಡಿ ಹೆಂಡತಿ ಬಾಯಿ ಬಿಡೋ ಸಾಹಸ ಮಾಡಲಿಲ್ಲ.

ಇವನು ಹುಟ್ಟಿದಾಗಿನಿಂದ ಇವನ ಆವೇಶದ ಪರಿಚಯ ಇದ್ದ ಇವನ ಅಮ್ಮ ಹೊರಗೆ ಬಂದು "ಏನೋ ಆಯ್ತು ಈಗ"? ಅಂದಳು.

ಕೊಡಲಿ ಎತ್ತಿ ಇನ್ನೊಂದು ಸಲ ತೋರಿಸಿದ ರಾಮಣ್ಣ. "ಇದೇ ಯಾರು ಮಾಡಿದ್ದು? ಅಂತ ಕೇಳಿದೆ."

"ಅವಳಿಗೇನೂ ಅರ್ಥವಾಗಲಿಲ್ಲ, "ಬಾಯ್ ಬಿಟ್ಟು ಹೇಳೋ ಅದು ಏನೂ ಅಂತ ಸುಮ್ಮಸುಮ್ಮನೆ ಕೂಗಾಡ್ತಾ ಇದಾನೆ."

"ಇದೇ ಈ ಕೊಡಲಿ ಇದಕ್ಕೆ ಯಾರೋ ಎಣ್ಣೆ ಹಚ್ಚಿ ಪಾಲಿಷ್ ಹಾಕಿದ್ದಾರೆ. ಕೈಯಿಂದ ಜಾರಿ ಕಾಲ ಮೇಲೆ ಬಿತ್ತು. ಎಷ್ಟು ದೊಡ್ಡ ಗಾಯ ಆಗಿದೆ ನೋಡು" ಅಂತ ಕಾಲನ್ನು ತೋರಿಸಿದ ರಾಮಣ್ಣ.

"ಅಲ್ಲವೋ ಕೊಡಲಿ ಕಾವಿಗೆ ಎಣ್ಣೆ ಹಾಕ್ತಾರೇನೋ" ಅಂತ ಅಂದಳು ಅಮ್ಮ "ಅದಿರಲಿ, ಇಲ್ಲಿ ಬಾ ಗಾಯ ಏನಾಗಿದೆ ಅಂತ ನೋಡು."

"ಗಾಯ ಏನೂ ದೊಡ್ಡದಲ್ಲ, ಸ್ವಲ್ಪ ಬೆರಳಲ್ಲಿ ರಕ್ತ ಬರ್ತಿದೆ ಅಷ್ಟೆ, ಹೋಗಿ ಬಟ್ಟೆ ಒದ್ದೆ ಮಾಡಿ ಬೆರಳಿಗೆ ಸುತ್ತು ಸರಿ ಆಗುತ್ತೆ."

ರಾಮಣ್ಣನಿಗೆ ಇನ್ನೂ ರೇಗಿತು!

"ನೀನು ಸುಮ್ಮನಿರು, ನಿನಗೇನು ಗೊತ್ತು? ಹೀಗೇನೆ ಬಿಟ್ರೆ ಕೊನೆಗೆ ಸೆಪ್ಟಿಕ್ ಆಗಿ ಕಾಲನ್ನೇ ಕತ್ತರಿಸಬೇಕಾಗುತ್ತೆ! ನಾನು ಡಾಕ್ಟರ್ ಹತ್ರನೇ ಹೋಗ್ತೀನಿ...."

"ಅಯ್ಯೋ ನಡೆಯೋಕೆ ಆಗಲ್ವಲ್ಲ! ಏ ಹೋಗಿ ಒಂದು ಆಟೋ ರಿಕ್ಷಾ ತೊಗೊಂ ಬಾರೋ," ಅಂತ ಅಂದ ಮಗನಿಗೆ. ಡಾಕ್ಟರ್ ಮನೆಗೆ ಹೋಗಿ ಸೇರಿದ.

ಭಾನುವಾರ ಡಿಸ್ಪೆನ್ಸರಿಗೆ ರಜಾ. ಫ್ಯಾಮಿಲಿ ಡಾಕ್ಟರ್ ಮಾರ್ನಿಂಗ್ ಶೋಗೆ ಹೊರಟು ಹೋಗಿದ್ರು. ಆಟೋರಿಕ್ಷಾನ ಕಳಿಸಿಬಿಟ್ಟಿದ್ದ ಕಾರಣ, ಪಾಪ ಮೆಲ್ಲಗೆ ಹೆಜ್ಜೆ ಮೇಲೆ ಹೆಜ್ಜೆ ಹಾಕ್ತಾ ಪಕ್ಕದ ಬೀದಿಲಿ ಡಾಕ್ಟರನ್ನ ಹುಡುಕ್ಕೊಂಡು ಹೋದ. ಅದೃಷ್ಟ ಚೆನ್ನಾಗಿ ಇತ್ತು. ಡಾಕ್ಟರ್ ಮನೇಲೆ ಇದ್ದರು. ರಾಮಣ್ಣನ ಕಾಲನ್ನ ಕೂಲಂಕುಷವಾಗಿ ಪರಿಶೀಲಿಸಿದರು.

"ರಾಮಣ್ಣೋರೆ ತಮಗೇನಾದ್ರು ಡಯಾಬಿಟೀಸ್ ಇದೆಯೇನು?....ಅಂತ ವಿಚಾರಿಸಿದ." "ಗೊತ್ತಿಲ್ಲ ಇದೆಯೇನು ನನಗೆ?" ಅಂತ ಗಾಬರಿಯಿಂದ ಕೇಳಿದ, ರಾಮಣ್ಣ.

"ಅದರೂ ವಯಸ್ಸು ಆಗಿದೆ. ನಿಮ್ಮ ವಯಸ್ಸೇನು ಐವತ್ತು ಆಗಿರಬೇಕಲ್ಲ? ಒಂದು ಕೆಲಸ ಮಾಡಿ. ತಾವು ತಮ್ಮ ಬ್ಲಡ್, ಯೂರಿನ್ ಟೆಸ್ಟ್ ಮಾಡಿಸ್ಕೊಂಡು ಬನ್ನಿ ಪಕ್ಕದಲ್ಲೇ—ಲ್ಯಾಬೋರೇಟರಿ ಇದೆ. ನಮ್ಮ ಕಿಟ್ಟೂನೆ ಇದ್ದಾನೆ ಅಲ್ಲಿ. ಚೀಟಿ ಬರೆದುಕೊಡ್ತೀನಿ. ನಾ ಹೇಳಿದೆ ಅಂತ ಹೇಳಿ, ಭಾನುವಾರ ಆದ್ರೂ ಟೆಸ್ಟ್ ಮಾಡಿಕೊಡ್ತಾನೆ" ಅಂದರು.

"ಅಷ್ಟುಮಟ್ಟಿಗೆ ಈ ರಕ್ತ?" ಅಂತ ಬಾಯೆಳೆದ, ರಾಮಣ್ಣ ಬೆರಳಿನಿಂದ ಸೋರುತ್ತಿದ್ದ ರಕ್ತ ತೋರಿಸ್ತಾ.

"ಓ ವಟ್ ಇಸ್ ನಥಿಂಗ್. ಟೆಸ್ಟ್ ಮಾಡದೆ ಯಾವ ಯಾವುದೇ ಔಷಧಿ ಕೊಟ್ಟರೆ ಏನಾದ್ರು ಹೆಚ್ಚು ಕಮ್ಮಿ ಆದ್ರೆ ಕಷ್ಟ ಅಲ್ಲವೆ? ಆಮೇಲೆ ಅದಕ್ಯಾರು ಜವಾಬ್ದಾರಿ!"

ಚೀಟಿ ಬರೆದು ಜೇಬಲ್ಲಿ ತುರುಕಿದ, ಡಾಕ್ಟರು–ಅರ್ಧ ತೆಗೆದಿದ್ದ ಬಾಗಿಲನ್ನು ಪೂರ್ತಿ ತೆಗೆದರು.

ರಾಮಣ್ಣ ಬುದ್ಧಿವಂತ, ಅವರು ಮಾಡಿದ ಸನ್ನೆ ಅವನಿಗೆ ಅರ್ಥವಾಯಿತು ಡಾಕ್ಟರ ಮನೆಯಿಂದ ಹೊರಗೆ ಹೋದ.

"ರಾಮಣ್ಣೋರೆ ಇನ್ನು ಅರ್ಧ ಗಂಟೆಯೊಳಗೆ ಬಂದ್ಬಿಡಿ ಯಾಕೆ ಅಂದ್ರೆ ನಾನು ಹೊರಗಡೆ ಹೋಗಬೇಕಾಗಿದೆ ಅಷ್ಟರೊಳಗೆ ನಿಮ್ಮನ್ನು ಟ್ರೀಟ್‌ಮಾಡಿ ಹೋಗ್ತೀನಿ" ಅಂದರು ಡಾಕ್ಟರು.

ರಾಮಣ್ಣನಿಗೆ ಈಗ ಮತ್ತೂ ಭಯ ಆಯ್ತು. ತನಗೆ ಡಯಾಬಿಟೀಸ್ ಇದ್ದೆ ಇದೆಯೇನೋ ಅಂತ ಸಂದೇಹ ಹೆಚ್ಚಾಯ್ತು.

ಕಿಟ್ಟು ಲ್ಯಾಬೋರೇಟರಿಗೆ ಹಾಜರಾದ. ಟೆಸ್ಟ್ ಮಾಡಿ ಏನೇನೋ ಚೀಟಿ ಬರೆದು, ರಾಮಣ್ಣನ ಕೈಲಿ ಕೊಟ್ಟನು.

ರಾಮಣ್ಣ ಕೇಳಿದ, "ಏನು ಡಯಾಬಿಟೀಸ್ ಇದೆಯಾ ನನಗೆ?" ಅಂತ "ಅದು ಹೇಳಬೇಕಾದವರು ಡಾಕ್ಟರು. ನಾನು ಹೇಗೆ ಹೇಳಲಿ? ಆದ್ರೆ ಒಂದು ಹೇಳ್ತೀನಿ ಯಾವುದಕ್ಕೂ ತಾವು ಹುಷಾರಾಗಿರೋದು ಒಳ್ಳೇದು."

"ಮಿಸ್ಟರ್, ರಾಮಣ್ಣ ಸಾಮಾನ್ಯವಾಗಿ ಟೆಸ್ಟ್‌ಗೆ ನಾನು ಹದಿನೈದು ರೂಪಾಯಿ ಚಾರ್ಜು ಮಾಡ್ತೀನಿ. ಇವತ್ತು ಭಾನುವಾರ ಲ್ಯಾಬೊರೇಟರಿಗೆ ರಜಾ. ಡಬಲ್ ಛಾರ್ಜ್ ಮಾಡಬೇಕು. ಆದರೆ ಡಾಕ್ಟರು ನನ್ನ ಸ್ನೇಹಿತರಾದ್ದರಿಂದ ಇಪ್ಪತ್ತೈದು ಕೊಡಿ ಐದು ನಿಮಗಾಗಿ ರಿಯಾಯಿತಿ" ಅಂದ ಪ್ಯಾಥಾಲಜಿಸ್ಟ್ ಕಿಟ್ಟು.

ವಿಧಿಯೇ! ಅಂತ ಇಪ್ಪತ್ತೈದು ರೂಪಾಯಿ, ಪಾಕೆಟ್‌ನಿಂದ ತೆಗೆದು ಕೊಟ್ಟು, ಡಾಕ್ಟರ ಹತ್ತಿರ ಬಂದು ಸೇರಿದ ನಮ್ಮ ರಾಮಣ್ಣ.

ಕೈಯಲ್ಲಿದ್ದ ಚೀಟಿ ನೋಡಿದ ಡಾಕ್ಟರ್, ಕಣ್ಣು ಹುಬ್ಬು ಗಂಟು ಹಾಕಿದರು! ಏನೂ ಸ್ವಾರಸ್ಯವಿಲ್ಲವಲ್ಲ....ಯೋಚನೆ ಮಾಡೋಣ. "ನಾಳೆ ಬೆಳಿಗ್ಗೆ ಬಂದ್ಬಿಡಿ ಎಲ್ಲಾ ಗೊತ್ತು ಮಾಡೋಣ" ಅಂದರು.

"ನನ್ನ ಕಾಲು?" ಅಂದ ರಾಮಣ್ಣ.

"ಓ ಡೋಂಟ್ ವರಿ ಮಿಸ್ಟರ್ ರಾಮಣ್ಣ, ಇದಕ್ಕೆ ಡ್ರೆಸ್ ಮಾಡಿ ಕಳಿಸ್ತೇನೆ. ಸ್ವಲ್ಪ ಮೊದಲು ಉರೀಬಹುದು, ಆಮೇಲೆ ಸರಿಹೋಗುತ್ತೆ."

ಏನೋ ಬಿಳಿ ಪುಡೀನ ಗಾಯದ ಮೇಲೆ ಸುರಿದು, ಒಂದು ಕಟ್ಟು ಹಾಕಿದರು. ರಾಮಣ್ಣ, "ಎಷ್ಟು ಗಂಟೆಗೆ ಬರಲಿ ಡಾಕ್ಟರ್?" ಅಂತ ಕೇಳಿದ.

"ಹತ್ತು ಗಂಟೆಗೆ ಬನ್ನಿ."

"ಆಫೀಸು?"

"ಆಫೀಸು ಮುಖ್ಯಾನೋ? ಆರೋಗ್ಯ ಮುಖ್ಯಾನೋ? ರಾಮಣ್ಣ!"

"ಸರಿ ಬಿಡಿ, ನಾಳೆ ರಜಾ ಹಾಕ್ತೀನಿ. ಹತ್ತು ಗಂಟೆಗೆ ಬರ್ತೀನಿ" ಅಂತ ಅಂದ ರಾಮಣ್ಣ.

"ವೆರಿಗುಡ್."

"ತಮ್ಮ ಫೀಸ್ ಡಾಕ್ಟರ್?"

"ಫೀಸ್ ಏನು ಮಹ? ಒಂದು ಹದಿನೈದು ರೂಪಾಯಿ ಕೊಡಿ" ಅಂದ್ರು ಡಾಕ್ಟರು!" "ಏನಾದ್ರು ಸ್ಪೆಷಲ್ ಡಯಟ್, ಡಾಕ್ಟರ್"?

"ಪಥ್ಯ ಏನೂ ಇಲ್ಲ. ಯಾವುದಕ್ಕೂ ಇವತ್ತು ಒಂದು ದಿನ ಬ್ರೆಡ್ ಮಾತ ತಿನ್ನಿ" ಅಂದರು ಡಾಕ್ಟರು.

ಹದಿನೈದು ರೂಪಾಯಿ ಡಾಕ್ಟರ್ ಕೈಯಲ್ಲಿಟ್ಟು ಹೊರಗೆ ಬಂದ, ರಾಮಣ್ಣ. ಬ್ರೆಡ್ ಅಂಗಡೀನ ದಾರಿಯಲ್ಲಿ ನೋಡಿದ; ಕೈಯಲ್ಲಿದ್ದ ಹಣ ಎಲ್ಲ ಲ್ಯಾಬೊರೇಟರಿಗೆ, ಡಾಕ್ಟರಿಗೆ, ಆಟೋರಿಕ್ಷಾಗೆ, ಸರಿಹೋಗಿತ್ತು! ಮನೆಗೆ ಹೋಗಿ ಬ್ರೆಡ್ ತರಿಸಿಕೊಂಡರಾಯ್ತು—ಅಂತ ನಡೀಲಾರದೆ ನಡೆದು ಮನೆಗೆ ಸೇರಿದ.

ಮಾರನೆ ದಿವಸ ಹತ್ತು ಗಂಟೆಗೆ ಡಾಕ್ಟರ್ ಮನೇಲಿದ್ದ, ರಾಮಣ್ಣ : ಏನು ರಾಮಣ್ಣ ಹೇಗಿದ್ದೀರಿ?" ಅಂತ ಕೇಳ್ತಾ ಇರೋವಾಗಲೆ ತನ್ನ ಕಾಲೆತ್ತಿ ಡಾಕ್ಟರ್ ಮುಂದೆ ಇಟ್ಟ.

ಡಾಕ್ಟರ್ ಕಟ್ಟು ಬಿಚ್ಚಿ ನೋಡಿದರು.

"ರಾತ್ರಿ ನಿದ್ದೆ ಬರಲಿಲ್ಲವೆ, ನಿಮಗೆ? ಬೆಡ್ ರೂಮಿನಲ್ಲಿ ಕವಾಯತು ಮಾಡ್ತಾ ಇದ್ರಿ ಅಂತ ಕಾಣುತ್ತೆ! ಕಾಲು ಬೆರಳು ಊದಿಕೊಂಡಿದೆಯಲ್ಲ...."

ರಾಮಣ್ಣನಿಗೆ, ತಾನು ಪಟ್ಟ ವೇದನೇನ ಹೇಳದೇನೆ—ಪತ್ತೆ ಹಚ್ಚಿದ್ರಲ್ಲ, ಡಾಕ್ಟರು, ಅಂತ ಅಭಿಮಾನ—ಸಂತೋಷ ಎರಡೂ ಆಯ್ತು!

"ಹೇಗೆ ಗೊತ್ತಾಯ್ತು ಡಾಕ್ಟರ್" ಅಂತ ಕುತೂಹಲದಿಂದ ಕೇಳಿದ. "ಓ ದಟ್ ಇಸ್ ನಥಿಂಗ್! ಕಾಲು ನೋಡಿದ್ರೆ ಗೊತ್ತಾಗೋದಿಲ್ಲವೆ? ನೋಡಿ ರಾಮಣ್ಣ ಏನೂ ಭಯಪಡಬೇಡಿ. ವಿಷಯ ಸ್ವಲ್ಪ ಸೀರಿಯಸ್ ಆಗೇ ಇದೆ. ಯಾವುದಕ್ಕೂ ತಾವು ಒಂದು ಎಕ್ಸ್‌ರೇ ತೆಗೆಸಿಬಿಟ್ಟರೆ ಒಳ್ಳೇದು ಅಂತ ಕಾಣುತ್ತೆ ತಮ್ಮ ಲಂಗ್ಸ್ ಕಂಡಿಷನ್ ಸ್ವಲ್ಪ ನೋಡಿಬಿಟ್ರೆ ಒಳ್ಳೇದು."

"ಯಾಕೆ ಡಾಕ್ಟರ್! ಏನು ಸಮಾಚಾರ? ಅಷ್ಟು ಸೀರಿಯಸ್ ಕಂಡಿಷನ್ನಾ? ಪ್ರಾಣಾಪಾಯ ಇಲ್ಲ ತಾನೆ!" ಗಾಬರಿಯಿಂದ ಕೇಳಿದ ರಾಮಣ್ಣ.

"ಇಲ್ಲ, ಹಾಗೇನಿಲ್ಲ, ಆದರೆ ಯಾವುದಕ್ಕೂ ಎಲ್ಲಾ ನೋಡಿಬಿಟ್ರೆ ಒಳ್ಳೆದಲ್ಲವೆ?"

"ಯಾಕೆ ಡಾಕ್ಟರ್! ಶ್ವಾಸಕೋಶಕ್ಕೂ ಕಾಲು ಬೆರಳಿಗೂ ಏನು ಸಂಬಂಧ?" "ಅಲ್ಲ ರಾಮಣ್ಣ, ನೀವು ಪೇಪರ್ ಓದ್ತೀರೋ ಇಲ್ವೋ?"

"ಆಕ್ಯುಪಂಕ್ಚರ್ ಅಂತ ಕೇಳಿದೀರಾ?"

"ಹಾಂ, ಅದೇನೋ ಸೂಜಿ ಇರೋದು ಅಂತ...."

"ಎಕ್ಸಾಕ್ಟ್ಲಿ! ಮೊಣಕಾಲಲ್ಲಿ ಸೂಜಿ ಚುಚ್ಚಿದರೆ ಇನ್ನೊಂದು ಕಡೆ ರಕ್ತ ಹೆಚ್ಚು ಹರಿಯುತ್ತೆ; ಕಿವಿಯಲ್ಲಿ ಚುಚ್ಚಿದರೆ, ಕಣ್ಣಿನ ತೀಕ್ಷ್ಣತೆ ಹೆಚ್ಚಾಗುತ್ತೆ; ಯಾಕೆ ಹೇಳ್ತೀನಿ ಅಂದ್ರೆ ಮನುಷ್ಯನ ದೇಹಾನ ಬೇರೆ ಬೇರೆ ಭಾಗವಾಗಿ ನೋಡಬಾರದು ಶರೀರ ಪೂರ್ತಿ ಒಟ್ಟಿಗೆ ಟ್ರೀಟ್ ಮಾಡಬೇಕು. ನಾನು ಇದರ ಬಗ್ಗೆ ಸ್ವಲ್ಪ ಕೆಲಸ ಮಾಡಿದೀನಿ...."

"ಯಾವುದಕ್ಕೂ ಎಕ್ಸ್‌ರೇ ತೆಗೆಸಿಕೊಂಡು ಬನ್ನಿ. ಇಲ್ಲದಿದ್ರೆ ಬರೀ ಸ್ಕ್ರೀನಿಂಗ್ ರಿಪೋರ್ಟ್ ತಗೊಂಡು ಬನ್ನಿ ಆಮೇಲೆ ನೋಡೋಣ."

ರಾಮಣ್ಣ ಎಕ್ಸ್‌ರೇ ಕ್ಲಿನಿಕ್ ಹುಡುಕಿಕೊಂಡು ಹೋಗಿ ಅಲ್ಲಿ ಮತ್ತೆ ಹದಿನೈದು ರೂಪಾಯಿ ತೆತ್ತು ಅಂತೂ ರಿಪೋರ್ಟಿನ ಒಂದು ಚೀಟಿ ಹಿಡಿಕೊಂಡು ಡಾಕ್ಟರ್ ಹತ್ರ ಬಂದ.

"ಓ ಇಷ್ಟು ಬೇಗ ಆಗೋಯ್ತಾ? ಕೊಡಿ ರಿಪೋರ್ಟ್‌ನ ಓ ನೆಗೆಟಿವ್ ಅಂತ ಕೊಟ್ಟಿದಾರಲ್ಲ ಲಂಗ್ಸ್ ಆಲ್ ಓಕೆ ಅಂತಾಯ್ತು...."

"ಆದ್ರೆ ಇದನ್ನ ಹಾಗೇ ವಾಸಿ ಮಾಡೋದು ಕಷ್ಟ ಅನಿಸುತ್ತೆ. ಈಗ ಒಂದು ಕೆಲಸ ಮಾಡೋಣ. ನಾನು ಬೆಳಿಗ್ಗೆ ಹೇಳಿದ್ನಲ್ಲ ಆಕ್ಯುಪಂಕ್ಚರ್ ಅಂತ ನಿನ್ನೆ ತಾನೆ ಓದಿದೇನೆ ಅದನ್ನ ಪ್ರಯೋಗಿಸಿ ಬಿಟ್ರೆ ಆಯ್ತು...."

"ಸರಿ" ರಾಮಣ್ಣ ಅಂದ. ಟೇಬಲ್ ಮೇಲೆ ಅಂಗಾತ ಮಲಗಿದ. ನೂರಾರು ಸಣ್ಣಸಣ್ಣ ಸೂಜಿಗಳಿದ್ದ ಪ್ಯಾಕೆಟ್ಟನ್ನೇ ತಂದಿಟ್ಟುಕೊಂಡರು – ವೈದ್ಯ ಮಹಾಶಯರು!

ಕೀಲು ಕೀಲಿಗೂ ಬೆರಳಿನ ಉಗುರು ಕಣ್ಣುಗಳಿಗೂ ಚುಚ್ಚಿಚುಚ್ಚಿ ಶಿಕ್ಷೆ ಕೊಡ್ತಾರೆ. ನರಕದಲ್ಲಿ ಅಂತ ಹಿಂದೆಲ್ಲೋ ಗರುಡ ಪುರಾಣದಲ್ಲಿ ಕೇಳಿದ್ದ ರಾಮಣ್ಣ

ನಿಗೆ ಜಂಘಾಬಲವೇ ಬಿಟ್ಟಂತಾಗಿ, ಹೃದಯಾನೇ ಬಾಯಿಗೆ ಬಂದು ತಾನು ಈಗಾಗಲೇ ಪ್ರೇತ ಆಗಿಬಿಟ್ಟೆನೇನೋ ಅನ್ನೋ ಅನುಭವ ಆಯಿತು !

ಗಂಟಲಲ್ಲಿ ಎಪೆ ಹೊಡೆದುಕೊಳ್ತಿದ್ದಾಗಲೇ ಮಂಡಿಯ ಕೆಳಭಾಗದಲ್ಲೊಂದು ಸೂಜಿ ಬಲವಾಗಿ ಇಳಿದಿತ್ತು.

"ಅಯ್ಯಯ್ಯೋ....ಅವ್ವಾ...." ಕೊಡಲಿ ಗಾಯಾನೇ ಇದಕ್ಕಿಂತ ಎಷ್ಟೋ ಹಿತವಾಗಿತ್ತು ಡಾಕ್ಟ್ರೆ ಅಯ್ಯೋ....ಎಂದು ಬಲವಾಗೇ ಚೀರಿದ.

"ಏನು ರಾಮಣ್ಣ ಒಳ್ಳೇ ಮಕ್ಕಳ ಥರ ಆಡ್ತೀರಿ? ನಾನು ಮೊನ್ನೇ ತಾನೇ ಮ್ಯಾಗಜೀನ್‌ನಲ್ಲಿ ಅಕ್ಯುಪಂಕ್ಚರ್ ಬಗ್ಗೆ ಲೇಖನ ಓದಿ, ಇದನ್ನು ಹೇಗೆ ಪ್ರಯೋಗಿಸಿ ನೋಡೋದು ಅಂತ ಚಿಂತಿಸ್ತಿದ್ದೆ. ಅನಾಯಾಸವಾಗಿ ನೀವು ಸಿಕ್ಕಿದಿರಿ, ಟ್ರಯಲ್ ಎಷ್ಟು ಸಕ್ಸಸ್ ಆಗುತ್ತೆ ಅನ್ನೋ ಕ್ಯೂರಿಯಾಸಿಟಿ ನಂಗೆ ನೀವು ಸುಮ್ಮನೆ ಹೀಗೆಲ್ಲಾ ಕೂಗಿ ಕಿರಿಚಿ ನನಗೆ ತೊಂದರೆ ಮಾಡ್ಬೇಡಿ. ಸೀರಿಯಸ್‌ನೆಸ್ಸೇ ಇಲ್ಲವೇನ್ರಿ? ಮಲಕ್ಕೊಳ್ಳಿ ಸುಮ್ನೆ" ಅಂತ ಮೊಳಗಿತು ವೈದ್ಯವಾಣಿ!

ಮೊದಲನೆ ತಿವಿತ, ರಾಮಣ್ಣನ ಗಲಾಟೆಯಿಂದಾಗಿ ಅಷ್ಟು ಸಮರ್ಪಕ ಆಗಲಿಲ್ಲ ಅನಿಸಿತೋ ಏನೋ ಈ ಶಲಾಕ ವೈದ್ಯ ಮಹಾಶಯರಿಗೆ....!

ಒತ್ತಿದಷ್ಟೇ ಬಲ ಪ್ರಯೋಗದಿಂದ ಅದನ್ನ ಕಿತ್ತಿದರೆ ಚುಳ್ ಅಂತ ರಕ್ತ ಜಿನುಗತೊಡಗಿತು....!

"ಬ್ಲಡ್ ಪ್ರೆಷರ್ ಟೆಸ್ಟ್ ಮಾಡಿಸಿದಿರೇನ್ರಿ ರಾಮಣ್ಣ?? "ಸ್ವಲ್ಪ ಕಾಳಜಿ ಧ್ವನಿಯಲ್ಲೇ ಕೇಳಿದ ವೈದ್ಯ.

ರಾಮಣ್ಣನ ಕಂಠ ಬಿಗಿದು ಬಂದಿತ್ತು "ಇಲ್ಲ ಡಾಕ್ಟ್ರೇ" ಅಂದ ಕ್ಷೀಣ ಧ್ವನಿಯಲ್ಲಿ. ಕಣ್ಣುಗಳಿಂದ ನೀರು ಬಳಬಳನೆ ಹರೀತಿತ್ತು.

ವೈದ್ಯ ಮಹಾಶಯನ ಗಮನವೆಲ್ಲ ಈವರೆಗೆ ರಾಮಣ್ಣನ ಮಂಡಿಯ ಬಳಿಯೇ ಕೇಂದ್ರೀಕೃತವಾಗಿದ್ದು ಇದ್ದಕ್ಕಿದ್ದಂತೆ ಅವನ ಮುಖದ ಕಡೆ ಹೊರಳಿತು.

ವೈದ್ಯ ಮುಖದಿಂದ ಒಂದು ಬಗ್ಗೆ ಎಚ್ಚೆತ್ತ ಓಜ ಹೊರ ಹೊಮ್ಮಿತು! "ಸಕ್ಸಸ್ ಸಕ್ಸಸ್ ಫಸ್ಟ್ ಟ್ರಯಲ್ಲೇ ಸಕ್ಸಸ್!" ಅಂತ ಆನಂದೋನ್ಮತ್ತನಾಗಿ ನರ್ತಿಸತೊಡಗಿದ.

ರೋಗಿ ರಾಮಣ್ಣ ಕಣ್ಣುಕಣ್ಣು ಬಿಡ್ತಾ ನೋಡ ಹತ್ತಿದ....!?

ಎಷ್ಟೋ ಹೊತ್ತು ಕುಣಿದ ಮೇಲೆ ರಾಮಣ್ಣನ ಇರುವಿನ ಅರಿವಾಗಿ ವೈದ್ಯ "ಗೊತ್ತಾಯ್ತೇನ್ರಿ ರಾಮಣ್ಣ?" ಅಂದ.

"ಇಲ್ಲಾ ಸಾರ್!" ಅಂದ ಗಾಬರಿಯಿಂದ...

"ಸಾಲಿಸಿಟರ್...ಅಸಿಸ್ಟೆಂಟ್ ಬರೆತ್ತೆ ಅಂದರೇನು?" ದೇಹದ ಯಾವುದೋ ಭಾಗದ ಒಂದು ಹೆಸರಿಗೆ ಬರುತ್ತಲಿದೆ–ಅದರ ಪರಿಣಾಮ ಇನ್ನೊಂದು ಭಾಗದಲ್ಲಿ ಸ್ಪಷ್ಟವಾಗುತ್ತೆ ಅನ್ನೋದೇ ತಾನೆ? ನಾನೀಗ ಆ ಹೊಸ ಜಾಸ್ತಿಪ್ಪಿಲ್ಲ?

ನಾನಿ ಈ ಜಾಗಕ್ಕೆ ಕಣ್ಣಿಟ್ಟಿ ನೋಡಿ ಅನ್ನೋದ್ಯಾಕೆ ನೀವು? ಅದಕ್ಕೇ ಹೇಳಿದ್ದು ಸಕ್ಸಸ್ ಸಕ್ಸಸ್ ಅಂತ..."

ಅಷ್ಟು ಹೊತ್ತಿಗೆ ಮನಸ್ಸನ್ನ ಸ್ವಲ್ಪ ಸ್ಥಿಮಿತಕ್ಕೆ ತಂದುಕೊಂಡಿದ್ದ ರೋಗಿ ಗಾಮಣ್ಣ ಕೇಳಿದ. "ಸರಿ ಸಾರ್ ನನ್ನ ಗಾಯ...?"

"ಗಾಯ ಯಾವ ಗಾಯರೀ?"

ನಿಜ ಕೊಡಲಿ ಪೆಟ್ಟಿನಿಂದಾದ ಹಳೇ ಗಾಯವೋ ಅಥವಾ ನನ್ನಕ್ಕೆ ಅದಕ್ಕಿಂತಲೂ ಹೆಚ್ಚು ಬಾಧೆ ಕೊಟ್ಟಿದ್ದ ತೊಡೆಯ ಹೊಸ ಗಾಯವೋ!?....

ರೋಗಿಯ ಕಿವಿ ಸ್ವಲ್ಪ ಗಾಬರಿಗೊಂಡಿತು. ಹೊಸದಾಗಿ ಮಾಡಿಸಿಕೊಂಡ ಹಳೇ ಗಾಯ. "ಕೊಡಲಿ ಪೆಟ್ಟಿನದು" ಅಂದ.

"ಓ ಅದಾ? ಮರೆತಿದ್ದೆ ಅದು ಹೋಯಿತು. ಮಯೂರದಲ್ಲಿದ್ದಾಗ ಬರೆದಿದ್ದು. ಅಂತ ಸಂಗತಿನ್ನ ಅನುಮಾನವೇ. ರೋಗಾವಸ್ಥೆಯಲ್ಲಿ ಯಾವುದಕ್ಕೂ ನಿನ್ನ ಹೃದಯ ಮತ್ತು ನಾಡಿಬಡಿತಗಳ ಪರೀಕ್ಷೆಗೆ ಇ.ಸಿ.ಜಿ. ಮಾಡಿಸಿಕೊಂಡು ಬನ್ನಿರಿ" ಅಂದರು.

"ಸರಿ ಸಾರ್, ಇದುವರೆಗೆ ಏನು ಮಾಡಿದ್ರಿ?"

"ಅದು ಎಕ್ಸ್‌ಪೆರಿಮೆಂಟ್ ಕಣ್ರೀ. ಅದರಿಂದ ಎಷ್ಟು ದೊಡ್ಡ ಉಪಕಾರ ಆಗಿದೆ ನಿಮಗೆ ಮತ್ತು ಇಡೀ ವೈದ್ಯಕೀಯ ಪ್ರಪಂಚಕ್ಕೇ ನಿಮಗೇನು ಗೊತ್ತು?!" ಹೂಂ. ತೊಗೊಳ್ಳಿ, ಈ ಚೀಟಿ. ಕಾರ್ಡಿಯಾಲಜಿಸ್ಟ್ ಹತ್ರ ಹೋಗಿ ಇ.ಸಿ.ಜಿ. ಮಾಡಿಸಿಕೊಂಡು ಬನ್ನಿ."

ಈ ಮಹದುಪಕಾರ ತನ್ನ ಭಾಗಕ್ಕೆ ನೂರು ರೂಪಾಯಿ ಆಗುತ್ತಿತ್ತು ಸಾಧ್ಯವಾಗುತ್ತಿತ್ತು ಅನ್ನೋ ವೈದ್ಯನಮಸ್ಕಾರದಿಂದಲೇ ಚೀಟಿ ತೆಗೆದುಕೊಂಡು ಹೇಗೋ ನಷ್ಟ ಖರ್ಚಂತೂ ಆಗಿದೆ ಇದೂ ಒಂದು ನೋಡಿಬಿಡೋಣ ಅಂತ ಎದುರಿಗೇ ಬಂದ್ರು ಇದ್ದ ಆಟೋ ಹತ್ತಿದ ನಿನ್ನಿನ ಎರಡು ವೈದ್ಯರ ಮಾರಿದ ಆ ಕಾರ್ಡಿಯಾಕ್ ಕ್ಲಿನಿಕ್‌ನತ್ತ ಧಾವಿಸಿದ....

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible] ರಾಮಣ್ಣನ [illegible]!

"[illegible] [illegible] ಓಡಿ ಹೋಗುತ್ತೆ"

ಅಂದಳು.

ಹೌದು, ತಾಯಿಯ ಈ [illegible] [illegible], [illegible]

[illegible] ರಾಮಣ್ಣನಿಗೆ!....

ಬಿ. ಎಸ್. ರಂಗಾಚಾರ್

ಪ್ರಾಣಿ ಕೌತುಕ

ಸದ್ದಿಲ್ಲದ ಕೊಲೆಗಾರ

ಗೂಬೆಯ ಕೂಗನ್ನು ಇರುಳಲ್ಲಿ ಕೇಳಿದವರು ಬೆಚ್ಚಿಬೀಳುತ್ತಾರೆ. ಅನಿಷ್ಟ ಅನ್ನುತ್ತಾರೆ. ನಿಜ, ಗೂಬೆಯ ಆ ಕೂಗ ಕೊಲೆಗಾರನ ಕೇಕೆಯಲ್ಲದೆ ಬೇರೆಯಲ್ಲ. ನಿಶಾಚರ ಚಟುವಟಿಕೆಗೆ ಅನುಕೂಲವಾಗಬಲ್ಲ ಸಕಲ ಸಲಕರಣೆಗಳೂ ಗೂಬೆಗೆ ಸ್ವಸ್ವತ್ತು. ಕಣ್ಣು, ರೆಕ್ಕೆ, ಕೊಕ್ಕು ಎಲ್ಲವೂ ಅವಕ್ಕೆ ಇರುಳ ಬೇಟೆಗೆ ಸಹಾಯ ಸಾಧನ. ದೊಡ್ಡದಾದ ಗೂಬೆ ಕಣ್ಣುಗಳು ಕತ್ತಲಲ್ಲಿ ಎಲ್ಲವನ್ನು ಸ್ಪಷ್ಟವಾಗಿ ಗುರ್ತಿಸಬಲ್ಲವು. ಅದರ ಹಾರುರೆಕ್ಕೆಗಳ ರಚನೆಯೂ ವಿಶಿಷ್ಟವಾದ ರೆಕ್ಕೆಯ ಅಂಚು ಹಣಿಗೆಯಂತೆ ಮೃದು ಕೋಮಲವಾಗಿರುವುದರಿಂದ ಅದು ಹಾರುವಾಗ ಒಂದು ಚೂರು ಸದ್ದೇ ಆಗುವುದಿಲ್ಲ. ಸೈಲೆನ್ಸರ್ ಇದ್ದಂತೆ ಆಯಕಟ್ಟು ಜಾಗದಲ್ಲಿ ಕುಳಿತು ಕತ್ತಲಲ್ಲೆ ತನ್ನ ಬಲಿಪ್ರಾಣಿಯನ್ನೆ ದಿಟ್ಟಿಸುತ್ತಾ ಕುಳಿತಿದ್ದು ಸಮಯ ಸಿಕ್ಕೊಡನೆ ನಿಶ್ಶಬ್ದವಾಗಿ ಹಾರಿ ಆರಾಮವಾಗಿ ಹೆದರಿಕೆಯಿಲ್ಲದೆ ಕುಳಿತಿರುವ ಬಲಿಪ್ರಾಣಿಯನ್ನು ತನ್ನ ಬಲವಾದ ಕೊಕ್ಕಿನಿಂದ ಹಿಡಿದು ಕಥೆ ಮುಗಿಸುತ್ತದೆ.

ಶಬ್ದವೇಧಿ ಬಾವಲಿ

ನೌಕಾಯಾನದಲ್ಲಿ 'ಸೋನಾರ್' ತಂತ್ರ ಅತ್ಯಂತ ಆಧುನಿಕ ತಾಂತ್ರಿಕಜ್ಞಾನ. ಶಬ್ದವನ್ನು ಬಳಸಿಕೊಂಡು ಸುತ್ತಣ ಪರಿಸರವನ್ನು ಅರಿಯುವ ಕಲೆ ಇದು. ಹಡಗು ಹೋಗುತ್ತಿರುವಾಗ ಈ ಸೋನಾರ್ ತರಂಗಗಳು ಹೊರಟು ಮುಂದೆ ಏನಾದರೂ ಬಂಡೆ, ಮುಳುಗಿದ ಹಡಗು ಇತ್ಯಾದಿ ಅಡ್ಡಗಟ್ಟಿಗಳಿದ್ದರೆ ಅವಕ್ಕೆ ಬಡಿದು ಮರಳಿ ಹಡಗಿಗೆ ಸುದ್ದಿ ಮುಟ್ಟಿಸುತ್ತವೆ. ಆಗ ಹಡಗನ್ನು ಅಪಾಯದಿಂದ ಪಾರುಮಾಡಲು ಸಾಧ್ಯವಾಗುತ್ತದೆ. ಮಾನವ ಇತ್ತೀಚೆಗೆ ಕಂಡುಹಿಡಿದ ತಂತ್ರ ಬಾವಲಿಗಳಿಗೆ ಮಾನವ ವಿಕಾಸಗೊಳ್ಳುವುದಕ್ಕೆ ಮೊದಲಿನಿಂದಲೂ ಗೊತ್ತಿತ್ತು. ಪ್ರತಿಧ್ವನಿಯ ಮೂಲಕ ಇಂದ್ರಿಯ ಗ್ರಹಣ ಬಾವಲಿಗಳಿಗೆ ಕರತಲಾಮಲಕ. ಬಾವಲಿಗಳ ಕಂಠದಿಂದ ಅತ್ಯಂತ ಉಚ್ಚಸ್ಥಾಯಿಯಲ್ಲಿ ಧ್ವನಿಗಳು ಚಿಮ್ಮುತ್ತವೆ. ಅವು ಎಷ್ಟು ತೀವ್ರವಾದವೆಂದರೆ ಮಾನವನ ಕಿವಿಗೆ ಕೇಳುವುದೇ ಇಲ್ಲ. ಈ ಶಬ್ದ ತರಂಗಳು ಸುತ್ತಲಿನ ವಸ್ತುಗಳಿಗೆ ಹೊಡೆದು ಮರಳಿ ಬಾವಲಿಯ ತೀಕ್ಷ್ಣ ಕಿವಿಗಳಿಗೆ ತಲುಪುತ್ತವೆ. ಸದ್ದೆ ಪ್ರತಿಧ್ವನಿಸಿದ್ದೆ ಕುರುಡು ಬಾವಲಿಗಳ ಮಾರ್ಗದರ್ಶಿ. ಸಸ್ತನಿಗಳಾದ ಬಾವಲಿಗಳು ಎಷ್ಟೇ ವೇಗದಲ್ಲಿ ಹಾರಾಟ ನಡೆಸುತ್ತಿದ್ದರೂ

ಯಾವುದೇ ವಸ್ತುವಿಗೆ ಅವು ಢಿಕ್ಕಿ ಹೊಡೆಯದೆ ಇರಲು ಈ ಸೋನಾರ್ ತಂತ್ರವೇ ಕಾರಣ. ಕತ್ತಲಲ್ಲಿ ಎಷ್ಟೇ ಕಿಷ್ಕಿಂಧ ಜಾಗದಲ್ಲೂ ಇವು ವೇಗವಾಗಿ ಚಲಿಸಬಲ್ಲವು ಸುಲಭವಾಗಿ ಬೇಟೆಯಾಡಬಲ್ಲವು.

ವಿಮಾನ ಮೀನು

ಹಾರುವ ಮೀನುಗಳು ವಿಶಿಷ್ಟ ಬಗೆಯ ಮೀನುಗಳು. ಇವುಗಳಿಗೆ ಹಕ್ಕಿಗಳಾಗುವ ಬಯಕೆ. ನೀರನ್ನು ಬಿಟ್ಟು ಆಕಾಶಕ್ಕೇರಲು ಇವು ಸಜ್ಜಾಗುತ್ತವೆ. ನೀರಿನ ಮೇಲ್ಮೈಯ ಅಂಚಿನುದ್ದಕ್ಕೂ ತನ್ನ ಬಲವಾದ ಬಾಲವನ್ನು ಬಳಸಿಕೊಂಡು ವೇಗವಾಗಿ ಈಜತೊಡಗುತ್ತವೆ. ಮೇಲೇರಲು ಅಗತ್ಯವಾದ ನಿರ್ದಿಷ್ಟ ವೇಗ ಎಂದರೆ ಗಂಟೆಗೆ ೬೦ ಕಿ.ಮೀ. ಈ ವೇಗವನ್ನು ಮುಟ್ಟಿದೊಡನೆ ನೀರನ್ನು ಬಿಟ್ಟು ಮೇಲೇರುತ್ತವೆ. ನೀರಿನಿಂದ ಆಚೆ ಬಂದೊಡನೆ ತನ್ನ ಎದೆಯ ಈಜುರೆಕ್ಕೆಗಳನ್ನು ಹರಡಿ ವಾಯುಪಡೆಗಳಂತೆ ಬಳಸಿಕೊಂಡ ಆಕಾಶದಲ್ಲಿ ಉಳಿಯಲೆತ್ನಿಸುತ್ತವೆ. ಗಾಳಿಯ ಪ್ರತಿರೋಧದಿಂದ ಅವುಗಳ ವೇಗ ಕುಂಠಿತಗೊಂಡಾಗ ಅವು ತಮ್ಮ ಬಾಲವನ್ನು ಮಾತ್ರ ನೀರಿನಲ್ಲಿ ಬಿಟ್ಟುಕೊಂಡು ಹಾಗೆ ಸಾಗುತ್ತ ಸೆಕೆಂಡಿಗೆ ೫೦ ಸಾರಿಯಂತೆ ವೇಗವಾಗಿ ಬಾಲವನ್ನು ಬಡಿಯುತ್ತ ಮತ್ತೆ ಆಕಾಶಗಾಮಿಗಳಾಗುತ್ತವೆ. ಕೆಲವು ಹಾರುಮೀನುಗಳು ಈ ತರದಲ್ಲಿ ಒಂದು ಸಾರಿ ೩೦೦ ಮೀಟರ್‌ಗಳಿಗೂ ಹೆಚ್ಚು ದೂರ ಹಾರುತ್ತವಂತೆ.

ಇರುವೆ ಖೆಡ್ಡಾ

ಶತಶತಮಾನಗಳಿಂದ ಮಾನವ ಆನೆಗಳಂತಹ ಪ್ರಾಣಿಗಳನ್ನು ಹಿಡಿದು ಹಾಕಲು, ಶತ್ರುಗಳನ್ನು ಸೆರೆಹಿಡಿಯಲು ದೊಡ್ಡ ಗುಣಿಗಳನ್ನು ತೋಡಿ ಖೆಡ್ಡಾ ಮಾಡಿ ಯಶಗಳಿಸುತ್ತಿದ್ದಾನೆ. ಮನುಷ್ಯನಿಗಿಂತ ಬಹಳ ಮೊದಲೇ ಸಣ್ಣ ಕೀಟವೊಂದು ಈ ತಂತ್ರದಲ್ಲಿ ಪ್ರಾವೀಣ್ಯಗಳಿಸಿಕೊಂಡು ಅದರಿಂದಲೇ ಇಲ್ಲಿಯವರೆಗೆ ಉಳಿದುಕೊಂಡು ಬಂದಿದೆ. 'ಇರುವೆ ಸಿಂಹ' ಎಂದು ಕರೆಯಲಾಗಿರುವ ಈ ಸಣ್ಣ ಕೀಟ ಆಲಿಕೆ ಆಕಾರದ ಗುಂಡಿಯನ್ನು ತೋಡಿ ಗುಂಡಿಯ ತಳದ ಮೃದು ಮಣ್ಣಿನಡಿ ಅವಿತು ಕುಳಿತು ಕಾಯುತ್ತದೆ. ದಾರಿಹೋಕ ಇರುವೆ ಅಕಸ್ಮಾತ್ ಜಾರಿ ಈ ಗುಂಡಿಗೆ ಬಿದ್ದರೆ ಇರುವೆ ಸಿಂಹದ ದವಡೆಗಳು ಅದಕ್ಕೆ ಸ್ವಾಗತ ಬಯಸುತ್ತವೆ. ಬಲಿಬಿದ್ದ ಇರುವೆ ಗಾಬರಿಯಿಂದ ಮತ್ತೆ ಮೇಲೇರಲು ಯತ್ನಿಸುತ್ತದೆ. ಆದರೆ ಕುಸಿವ ಮಣ್ಣು ಗೋಡೆ ಅದಕ್ಕೆ ಅವಕಾಶ ನೀಡುವುದಿಲ್ಲ. ಜೊತೆಗೆ

ಇರುವೆ ಸಿಂಹವೂ ಮಣ್ಣನ್ನು ಊಗಿದು ಇರುವೆಯನ್ನು ಮತ್ತೆ ಬೀಳಿಸುತ್ತದೆ. ಸಿಕ್ಕ ಇರುವೆಗೆ ಕಚ್ಚಿ ವಿಷದ ಇಂಜಕ್ಷನ್ ನೀಡಿ ನಿಷ್ಕ್ರಿಯಗೊಳಿಸುತ್ತದೆ. ಈ ವಿಷ ಇರುವೆಯ ಒಳ ಕೋಶಾಂಶಗಳನ್ನು ಕರಗಿಸುತ್ತದೆ. ಇರುವೆಸಿಂಹದ ಹೀರು ನಾಲಗೆ ದ್ರವೀಕೃತ ಇರುವೆ ರಸವನ್ನು ಹೀರಿ ತೆಗೆಯುತ್ತದೆ. ನಂತರ ನೀರಸ ಇರುವೆಯ ಹೆಣವನ್ನು ಗುಂಡಿಯಿಂದಾಚೆಗೆ ಒಗೆಯುತ್ತದೆ. ಮುಂದಿನ ಬೇಟೆಗೆ ಮತ್ತೆ ಮರಸು ಕೂರುತ್ತದೆ.

ವಿಚಿತ್ರ ಕುಡುಕ

ದಕ್ಷಿಣ ಅಮೇರಿಕದ ದಟ್ಟಕಾಡುಗಳಲ್ಲಿ ಒಂದು ಜಾತಿಯ ಕೋತಿ ಇದೆ. ಅದನ್ನು 'ಸಾಕಿ' ಎನ್ನುತ್ತಾರೆ. ಅದಕ್ಕೆ ಬಾಯಾರಿಕೆಯಾದಾಗ ಕಾಡಿನ ಕೊಳ ಹಾಗೂ ನದಿಯ ಬಳಿ ಹೋಗುತ್ತದೆ. ಆದರೆ ಎಷ್ಟೇ ದಾಹವಾದರೂ ನೇರವಾಗಿ ನೀರನ್ನು ಕುಡಿಯುವುದಿಲ್ಲ, ತನ್ನ ಕೂದಲು ತುಂಬಿದ ಕೈಯನ್ನು ನೀರಿನೊಳಕ್ಕೆ ಅದ್ದುತ್ತದೆ. ಆಮೇಲೆ ರೋಮಗಳಿಗೆ ಅಂಟಿದ ಹನಿಗಳನ್ನು ನೆಕ್ಕುತ್ತದೆ. ತನ್ನ ದಾಹ ತೀರುವವರೆಗೆ ಇದೇ ರೀತಿ ಮಾಡುತ್ತದೆ.

ಸೋಮಾರಿ ಕೋತಿ

ದಕ್ಷಿಣ ಅಮೇರಿಕ ಖಂಡದ ಅಮೆಜಾನ್ ದಟ್ಟಕಾಡುಗಳಲ್ಲಿ ಒಂದು ಬಗೆಯ ಕಾಡುಪಾಪ ಇದೆ. ಇದನ್ನು 'ಸ್ಲಾತ್' ಎಂದರೆ ಸೋಮಾರಿ ಎಂದೇ ಕರೆಯುತ್ತಾರೆ. ಪೂರ್ತಿ ಮರದ ಮೇಲೆಯೇ ವಾಸಿಸುವ, ನೆಲದ ಮೇಲೆ ಬಹಳ ನಿಧಾನವಾಗಿ ಮಾತ್ರ ಚಲಿಸಬಲ್ಲ, ನೀಳ ಬಾಗುಗುರಿನ ಕಾಲುಗಳುಳ್ಳ ಸಸ್ತನಿಪ್ರಾಣಿ ಇದು. ಇದಕ್ಕೆ ಆತುರ ಎನ್ನುವ ಪದದ ಅರ್ಥವೇ ಗೊತ್ತಿಲ್ಲ. ಮಳೆಕಾಡುಗಳ ದಟ್ಟಕಾಡಿನ ಮರದ ಮೇಲೆ ಇದಕ್ಕೆ ಜೀವನಾಗತ್ಯವಾದುದೆಲ್ಲ ಕುಳಿತಲ್ಲಿಯೇ ದೊರೆಯುತ್ತದೆ. ತನ್ನ ಬಾಗುಗುರುಗಳ ನೆರವಿನಿಂದ ಮರದ ಮೇಲೆ ತಲೆಕೆಳಕಾಗಿ ನೇತಾಡಿಕೊಂಡು ಜೀವನ ಕಳೆಯುತ್ತದೆ. ಸಿಕ್ರೋಪಿಯ ಎಂಬ ಮರದ ಮೇಲೆ ಇದ್ದು ಅದರ ಎಲೆಗಳನ್ನೇ ತಿನ್ನುತ್ತಾ ಬದುಕುತ್ತದೆ. ಹೆಣ್ಣು ಕೋತಿ ಮರದ ಮೇಲೆಯೇ ಮುಂದಿನ ಸಂತತಿಗೆ ಜನ್ಮ ನೀಡುತ್ತದೆ. ಈ ಶಿಶು ತಾಯಿ ತೊಗಲು ಕೂದಲನ್ನು ಹಿಡಿದುಕೊಂಡು ಮೊದಲ ಎರಡು ತಿಂಗಳು ತಳ್ಳುತ್ತದೆ.

ಅದ್ಭುತ ಕುಟುಕು

ಮರಕುಟಿಗನ ಹಕ್ಕಿ ಮರವನ್ನು ತನ್ನ ಬಲಿಷ್ಠ ಕೊಕ್ಕಿನಿಂದ ಕುಟುಕುವು

ವನ್ನು ನೋಡಿರಬಹುದು. ಪಟಪಟ ಎಂದು ಕುಟುಕುತ್ತಲೇ ಇರುವ ಈ ಹಕ್ಕಿಗೆ ಹುಚ್ಚು ಹಿಡಿದಿರಬಹುದು ಎನಿಸಿದರೆ ಆಶ್ಚರ್ಯವಿಲ್ಲ. ಆದರೆ ಈ ಹಕ್ಕಿಯ ಆಹಾರ ಅನ್ವೇಷಣೆಯ ಮಾರ್ಗವೇ ಇದು. ಮರದ ತೊಗಟೆಯ ಮೇಲೆ ಒಳಗೆ ಇರುವ ಸತ್ತ ಕ್ರಿಮಿಕೀಟಗಳನ್ನು ಹೆಕ್ಕಿ ನುಂಗುವ ರೀತಿ ಇದು. ನಿಜವಾದ ವಿಸ್ಮಯವಿಚಾರ ಎಂದರೆ ಈ ಬಲವಾದ ಕೊಕ್ಕುಗಳು ಕುಟುಕುವ ವೇಗ ಗಂಟೆಗೆ ೧೩೦೦ ಮೈಲಿಗಳ ವೇಗದಲ್ಲಿ ಈ ಕುಟುಕುಗಳು ಬೀಳುತ್ತವೆ. ಇಂತಹ ವೇಗದಲ್ಲಿ ಕೊಕ್ಕು ಚಲಿಸಿ ಕುಟುಕಿದರೆ, ಆ ವೇಗದ ಪ್ರತಿಕ್ರಿಯೆಯಿಂದ ಈ ಹಕ್ಕಿಯ ಮಿದುಳು ಚೂರುಚೂರಾಗಿ ಚೆಲ್ಲಾಪಿಲ್ಲಿಯಾಗಬೇಕಿತ್ತು. ಆದರೆ ಹಾಗಾಗುವುದಿಲ್ಲ. ಇದಕ್ಕೆ ಕಾರಣವೇನು ಎಂದು ವಿಜ್ಞಾನಿಗಳು ಹುಡುಕಿದರು. ಮರಕುಟಿಗನ ಹಕ್ಕಿಯ ಕುತ್ತಿಗೆಯಲ್ಲಿನ ಸ್ನಾಯುಗಳು ಈ ವೇಗದ ಕರ್ಷವನ್ನು ಪಡೆಯುತ್ತವೆ. ತಲೆಯನ್ನು ನೆಟ್ಟಗೆ ಹಿಡಿದಿಡುವ ಈ ಕುತ್ತಿಗೆ ಸ್ನಾಯುಗಳ ರಚನೆ ವಿಜ್ಞಾನಿಗಳಿಗೆ ಮಾರ್ಗದರ್ಶಕವಾಗಿದೆ. ವೇಗಗಾಮಿ ದ್ವಿಚಕ್ರವಾಹನ ಸವಾರರ ಹೆಲ್ಮೆಟ್‌ಗಳಿಗೆ ಕುತ್ತಿಗೆ ಪಟ್ಟಿಯನ್ನು ಈ ಹೊಸತರದಲ್ಲಿ ರಚಿಸುತ್ತಿದ್ದಾರೆ.

ಕುತೂಹಲಿ



ಮರವಿದ್ದು ಫಲವೇನು? ನೆಳಲಿಲ್ಲದನ್ನಕ್ಕ. ಧನವಿದ್ದು ಫಲವೇನು? ದಯವಿಲ್ಲದನ್ನಕ್ಕ. ಹಸುವಿದ್ದು ಫಲವೇನು? ಹಯನಿಲ್ಲದನ್ನಕ್ಕ. ರೂಪಿದ್ದು ಫಲವೇನು? ಗುಣವಿಲ್ಲದನ್ನಕ್ಕ. ಶೀಗಲಿದ್ದು ಫಲವೇನು? ಮನವಿಲ್ಲದನ್ನಕ್ಕ. ನಾನಿದ್ದು ಫಲವೇನು? ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನಾ.

—ಮಹಾದೇವಿಯಕ್ಕ

ಮರುಭೂಮಿಯ ಮುನ್ನಡೆ

ಎಚ್ಚರಿಕೆ, ಪ್ರಪಂಚದ ಮರುಭೂಮಿಗಳೆಲ್ಲಾ ತಮ್ಮ ವಿಸ್ತಾರ ಹೆಚ್ಚಿಸಿಕೊಳ್ಳುತ್ತಿವೆ. ಜಗತ್ತಿನ ಅತಿ ದೊಡ್ಡ ಮರುಭೂಮಿಯಾದ 'ಸಹಾರಾ' ಕೆಲಕಡೆ ವರ್ಷಕ್ಕೆ ೫೫ ಕಿ.ಮೀ. ದೂರದಷ್ಟು ಭೂಮಿಯನ್ನು ಕಬಂಧಬಾಹುವಿನಿಂದ ಬಳಸಿ ತನ್ನ ವಿಸ್ತೀರ್ಣ ಹೆಚ್ಚಿಸಿಕೊಳ್ಳುತ್ತಿದೆ. ಕಳೆದ ೫೦ ವರ್ಷಗಳಲ್ಲಿ ಈ ರೀತಿ ಮರಳುಗಾಡು ಆದ ಬೇಸಾಯ ಯೋಗ್ಯವಾದ ಭೂಮಿಯ ವಿಸ್ತಾರ ೬ ಲಕ್ಷ ೫೦ ಸಾವಿರ ಚದರ ಕಿ.ಮೀಟರ್‌ಗಳು. ಭಾರತದ ಒಟ್ಟು ವಿಸ್ತೀರ್ಣದಲ್ಲಿ ಸುಮಾರು ೧/೫ ಭಾಗ, ರಾಜಾಸ್ತಾನ್ ರಾಜ್ಯದಲ್ಲಿರುವ 'ಥಾರ್' ಮರುಭೂಮಿಯ ಪಾಲಾಗಿದೆ. ಅಂತೆಯೇ ಚಿಲಿದೇಶದ 'ಅಟಕಾಮ' ಮರುಭೂಮಿ ೧೯೬೦ ರಿಂದ ಈಚೆಗೆ ನೂರಾರು ಚದರ ಕಿ.ಮೀ. ಭೂಮಿಯನ್ನು ಬೆಂಗಾಡಾಗಿಸಿದೆ. ಪಶ್ಚಿಮ ಏಷ್ಯಾ, ಇರಾನ್, ಅರ್ಜೆಂಟೈನಾ, ದಕ್ಷಿಣ ಆಫ್ರಿಕ, ಚೈನಾ, ಸೈಬೀರಿಯಾದ ಕೆಲಭಾಗಗಳು. ಇವುಗಳ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಪ್ರಪಂಚದ ಯಾವ ಮರುಭೂಮಿಯೂ ತನ್ನ ಪ್ರದೇಶವನ್ನು ಬಿಟ್ಟುಕೊಟ್ಟು ಹಿಂಜರಿಯುವ ಸೂಚನೆ ತೋರಿಸುತ್ತಿಲ್ಲ. ಆದ್ದರಿಂದಲೇ ಮಾನವನ ಭವಿಷ್ಯದ ಬಗ್ಗೆ ಚಿಂತೆಮಾಡುವಂತಾಗುತ್ತದೆ. ಭೂಭಾಗದ ಶೇಕಡ ೪೩ರಷ್ಟು ವಿಸ್ತೀರ್ಣ ಮಳೆಯೇ ಇಲ್ಲದ ಬೆಂಗಾಡು, ಅತ್ಯಂತ ಕಡಿಮೆ ಮಳೆಯಾಗುವ, ಅರೆಕೊರೆ ಮಳೆ ಬೀಳುವ ಪ್ರದೇಶ ಮುಂತಾದವುಗಳಿಂದ ಕೂಡಿದೆ. ಈಗ ಬರಡಾಗಿರುವ ಅನೇಕ ಪ್ರದೇಶಗಳು ಹಿಂದೊಮ್ಮೆ ಹಚ್ಚಹಸಿರಿನ ಸಮೃದ್ಧಿಯಿಂದ, ಫಲವತ್ತಾಗಿ ಕಂಗೊಳಿಸುತ್ತಿದ್ದವು. ಆಫ್ರಿಕಖಂಡದ ಉತ್ತರಭಾಗ ೬ ಶತಮಾನಗಳಕಾಲ ರೋಮನ್ ಸಾಮ್ರಾಜ್ಯದ ಧಾನ್ಯದ ಕಣಜಗಳಲ್ಲಿ ಒಂದು ಎಂದು ಪರಿಗಣಿಸಲ್ಪಟ್ಟಿತ್ತು. ಸಹಾರಾಮರುಭೂಮಿಯ ಮರಳಿನ ದಿನ್ನೆಗಳ ಕೆಳಗೆ ಅನೇಕ ವೈಭವದ ಚಕ್ರಾಧಿಪತ್ಯಗಳ ಅವಶೇಷಗಳು ಕಂಡುಬರುತ್ತವೆ. ಹಾಗೆಯೇ ಮೆಸಪೊಟೇಮಿಯದ ಮರಳುಗಾಡಿನಲ್ಲಿ ನಾಲ್ಕು ಸಾವಿರ ವರ್ಷಗಳ ಹಿಂದೆ ಬೆಳೆದು ಬಾಳಿದ ನಾಗರಿಕತೆಯ ಗುರುತುಗಳಿವೆ. ಇಂದು ಮರುಭೂಮಿಯಾಗಿ ಬಿಸಿಲಿನಲ್ಲಿ ಬೇಯುತ್ತಿರುವ ಮಾಲಿ ಮರುಭೂಮಿ

೧೯೭೬ರ ಮೇ ತಿಂಗಳ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿ ಪ್ರಕಟವಾದ ಶ್ರೀ ರೊನಾಲ್ಡ್ ಫಿಲ್ಲರ್ ಮತ್ತು ಶ್ರೀ ಅಶೋಕ್ ಮಹದೇವನ್‌ರ ಲೇಖನ 'ಡೆಸರ್ಟ್ಸ್ ಆನ್ ದಿ ಮಾರ್ಚ್' ಭಾವಾನುವಾದ.

ಯಲ್ಲಿ ಏಷ್ಯಾದ ಸಮರಕಂದ್ ಮತ್ತು ಸಹೇಲ್ ಪ್ರದೇಶದ ನಾಗರಿಕತೆಗಳು ಬಾಳಿದವು. ಒಂದು ಕಾಲಕ್ಕೆ ಹಸಿರಿನಿಂದ ಮೆರೆಯುತ್ತಿದ್ದ ಈ ಪ್ರದೇಶಗಳೆಲ್ಲ ಬಂಜರಾಗಲು ಕಾರಣವೇನು? ಬಹುಶಃ ಹವಾಮಾನದ ಬದಲಾವಣೆಯೇ ಇವಕ್ಕೆ ಕಾರಣ ಎಂದು ನಮಗೆ ಅನ್ನಿಸಬಹುದು. ಆದರೆ ಇದು ನಿಜವಾದ ಕಾರಣವಲ್ಲ ಎನ್ನುತ್ತಾರೆ ತಜ್ಞರು. ಈ ಪ್ರದೇಶದಲ್ಲಿ ಮನುಷ್ಯ ಜೀವಿಸಲು ಪ್ರಾರಂಭಿಸಿದಾಗಿನಿಂದ ಹಲವಾರು ಶತಮಾನಗಳ ತನಕವೂ ಇಲ್ಲಿಯ ಹವಾಗುಣ, ಮಳೆ ಇವುಗಳಲ್ಲಿ ವಿಪರೀತ ಏರುಪೇರುಗಳೇನೂ ಇರಲಿಲ್ಲ. ಈಗ ನಾವು ಕಾಣುವ ೯೦ ಲಕ್ಷ ಚದರ ಕಿ.ಮೀ. ವಿಸ್ತಾರದ ಅಂದರೆ ಒಟ್ಟು ಭೂಭಾಗದಲ್ಲಿ ಶೇ. ೬ರಷ್ಟು ಮರಳುಗಾಡು ನಿರ್ಮಾಣವಾಗಲು ಮುಖ್ಯ ಕಾರಣ ಮನುಷ್ಯ.

ಫಲವತ್ತಾದ ಭೂಮಿ ಕ್ರಮೇಣ ಮರಳುಗಾಡಾಗಿ ಪರಿವರ್ತನೆಯಾಗುವ ವಿಧಾನ ಹೀಗೆ. ಮನುಷ್ಯ ಆಹಾರದ ಉತ್ಪಾದನೆಯ ವಿಧಾನ ಕಂಡುಹಿಡಿದು ಬೇಸಾಯ ಮಾಡಲು ಹೊರಟ. ಅವಕ್ಕೆಬೇಕಾಗುವ ಭೂಮಿ ಪಡೆಯಲು ಕಾಡಿನಲ್ಲಿ ಒಂದಷ್ಟು ಜಾಗ ಆಕ್ರಮಿಸಿದ. ಅಲ್ಲಿದ್ದ ಗಿಡ, ಪೊದೆ, ಮರಗಳನ್ನು ಬೆಂಕಿ ಹಚ್ಚಿ ನಾಶಮಾಡಿ ತನಗೆ ಅವಶ್ಯಕವಿದ್ದ ಭೂಮಿಯನ್ನು ಮಾಡಿದ. ಈ ಭೂಮಿಯಲ್ಲಿ ಹಲವಾರು ಸಲ ಬೆಳೆ ತೆಗೆದನಂತರ ತನ್ನ ಸತ್ವ ಕಳೆದುಕೊಂಡ ಅದು ಕ್ರಮೇಣ ನಿಸ್ಸಾರವಾಯ್ತು. ಇದರಿಂದ ಹೆಚ್ಚು ಫಸಲು ತೆಗೆಯಲು ಸಾಧ್ಯವಿಲ್ಲ ಎಂದು ತಿಳಿದ ನಂತರ ಅದನ್ನು ಬಿಟ್ಟು, ಹೊಸ ಜಾಗಕ್ಕೆ ಹೋಗಿ ಮತ್ತೆ ಕಾಡಿಗೆ ಕಿಚ್ಚನ್ನು ಹಾಕಿ ಭೂಮಿ ತೆರವು ಮಾಡಿಕೊಂಡು ವ್ಯವಸಾಯ ಮಾಡುವ ಪದ್ಧತಿ ಇಂದಿಗೂ ಇದೆ. ಆಫ್ರಿಕ ಖಂಡದ ದಕ್ಷಿಣ ಭಾಗ, ಲ್ಯಾಟಿನ್ ಅಮೇರಿಕ, ಆಗ್ನೇಯ ಏಷ್ಯಾದ ಹಲವಾರು ಭಾಗಗಳಲ್ಲಿ ಈ ಕ್ರಮ ಇನ್ನೂ ರೂಢಿಯಲ್ಲಿದೆ. ಇಂಥ ಭೂಮಿ ದನ, ಆಡು, ಕುರಿಗಳಿಗೆ ಆಹಾರ ಒದಗಿಸುವ ಹುಲ್ಲುಗಾವಲಾಗಿ ಪರಿವರ್ತನೆಯಾಯ್ತು. ದೊಡ್ಡ ಮರಗಳು, ಪೊದೆಗಳು ಇಲ್ಲಿ ಇರಲಿಲ್ಲ. ಹುಲ್ಲುಗಾವಲಿನಲ್ಲಿ ಮೇಯುವ ಪ್ರಾಣಿಗಳ ಸಂಖ್ಯೆ ಕ್ರಮೇಣ ಹೆಚ್ಚತೊಡಗಿದಂತೆಲ್ಲಾ ಮತ್ತೊಂದು ಅನಾಹುತಕ್ಕೆ ದಾರಿಯಾಯ್ತು. ಭೂಮಿಯ ಮೇಲ್ಪದರದ ಮಣ್ಣನ್ನು ಗಾಳಿ ಮಳೆಯ ಹೊಡೆತದಿಂದ ರಕ್ಷಿಸಿ ಅದು ಸವೆಯದಂತೆ ಕಾಪಾಡುತ್ತಿದ್ದುದು ಹುಲ್ಲಿನ ಬೇರು. ಹುಲ್ಲುಗಾವಲಿನಲ್ಲಿ ಮೇಯುವ ಪ್ರಾಣಿಗಳು ಹುಲ್ಲನ್ನು ಪೂರ್ತಿ ಧ್ವಂಸ ಮಾಡತೊಡಗಿದವು. ಹುಲ್ಲಿನ ಬೀಜಗಳು ಉದುರಿ ಬೇರೆ ಹೊಸ ಮೊಳಕೆಗಳು ಬರುವುದಕ್ಕೆ ಆಸ್ಪದವೇ ಇರಲಿಲ್ಲ. ಈ ಪಶುಗಳು

ತಿನ್ನದೆ ಉಳಿಸಿದ್ದು ಕಂಟಿ, ಮುಳ್ಳುಗಿಡದ ಪೊದೆ, ಒರಟು ಕಳ್ಳಿ ಇಂಥವು ಮಾತ್ರ. ಆಡುಗಳೂ ಇವುಗಳನ್ನು ಮುಟ್ಟುತ್ತಿರಲಿಲ್ಲ. ಹೀಗಾಗಿ ಭೂಮಿಯ ಮೇಲ್ಪದರ ಗಾಳಿ ಮಳೆಯ ಹೊಡೆತಕ್ಕೆ ಕೊಚ್ಚಿ ಹೋಗದಂತೆ ತಡೆಯುವ ಯಾವ ರಕ್ಷಣೆಯೂ ಇಲ್ಲದೆ ಭೂಮಿ ಬೋಳಾಯಿತು. ಕ್ರಮೇಣ ಭೂಮಿಯ ಮೇಲ್ಪದರದ ಮಣ್ಣು ಗಾಳಿ ಮಳೆಯ ಹೊಡೆತಕ್ಕೆ ಸಿಕ್ಕಿ ಸವೆದು, ಸೀದು ಹೋಗಲು ಆರಂಭವಾಯಿತು. ಪಶ್ಚಿಮ ಏಷ್ಯ ಮತ್ತು ಆಫ್ರಿಕಖಂಡಗಳಲ್ಲಿ ಇಂಥ ಪ್ರದೇಶ ಹೆಚ್ಚು.

ಇದರ ಮೇಲ್ಕೆ, ಮರ ಮುಟ್ಟುಗಳಿಗಾಗಿ, ಸೌದೆಗಾಗಿ, ಮನುಷ್ಯ ಕಾಡನ್ನು ಕಡಿಯುತ್ತೊಡಗಿದ. ಅಡಿಗೆಯ ಇಂಧನವಾಗಿ ಇಂದಿಗೂ ಏಷ್ಯಾ, ಆಫ್ರಿಕ, ಲ್ಯಾಟಿನ್ ಅಮೇರಿಕಾದ ದೇಶಗಳಲ್ಲಿ ಬಳಸುವುದು ಸೌದೆಯನ್ನೇ. ಕಾಡು ಬೋಳಾದ ನಂತರ ಮಳೆಸುರಿದಾಗ ಗುಡ್ಡಗಳ ಮಣ್ಣಿನ ಮೇಲ್ಪದರ ಕೊಚ್ಚಿ ಹೋಗಿ ಭೂಮಿಯ ಮೇಲೆ ಆಳವಾದ ಕಂದರಗಳು ಉಂಟಾದವು. ಅಂತೆಯೇ ಆಗಾಗ್ಗೆ ಬರುವ ಅನಾವೃಷ್ಟಿಯ ಬರಗಾಲದಲ್ಲಿ ಮೇಲ್ಪದರದ ಮಣ್ಣನ್ನು ಭೂಮಿಯಲ್ಲೇ ಹಿಡಿದಿಟ್ಟುಕೊಳ್ಳುವ ಯಾವ ಸಾಧನವೂ ಇಲ್ಲವಾಯಿತು. ಗಾಳಿ ಜೋರಾಗಿ ಬೀಸಿದಾಗ ಮಣ್ಣಿನ ಮೇಲ್ಪದರ ಕಿತ್ತುಹೋಗಿ ಬೇರೆಕಡೆಗೆ ಒಯ್ಯಲ್ಪಡುತ್ತಿತ್ತು. ಕೇವಲ ಒಂದು ಅಂಗುಲದಷ್ಟು ದಪ್ಪ ಇಂತಹ ಮೇಲ್ಪದರದ ಮಣ್ಣು ತಯಾರಾಗಲು ನೂರಾರು ವರ್ಷಗಳು ಬೇಕಾಗುತ್ತವೆ ಎಂದಾಗ ನಮಗೆ ಈ ಅನಾಹುತದ ಆಳ ಎಷ್ಟು ಎಂಬುದು ತಿಳಿದೀತು. ಕಾಲಕ್ರಮದಲ್ಲಿ ದಿಣ್ಣೆಗಳ ಮಣ್ಣೆಲ್ಲಾ ಕೊಚ್ಚಿಹೋದ ನಂತರ ಉಳಿದ ಸಣ್ಣಪುಟ್ಟ ಕಲ್ಲುಗಳೂ ಕೆಳಕ್ಕೆ ಬಂದು ಸಮತಟ್ಟಾಗಿ ಭೂಮಿಯನ್ನು ಆವರಿಸಿತು. ಭದ್ರವಾಗಿ ಬೆಸೆದುಕೊಂಡ ಈ ಕಲ್ಲುಮಣ್ಣಿನ ಭೂಮಿಯಲ್ಲಿ ಯಾವ ಗಿಡಮರವೂ ಬೆಳೆಯುವಂತಿಲ್ಲ. ಅದು ಕೇವಲ ಬಂಜರು ಭೂಮಿಯಾಗಿ ಉಳಿಯಿತು. ಇಂತಹ ಭೂಮಿ ಕ್ರಮೇಣ ಹೆಚ್ಚಿದ್ದರಿಂದ ಗ್ರೀಸ್‌ದೇಶದ ಬಹುಭಾಗ ಬೆಂಗಾಡಾಯಿತು. ಒಮ್ಮೆ ಫಲವತ್ತಾಗಿದ್ದ ಹೊಲಗಳು ಬಂಜರಾದವು. "ರೋಗ ಪೀಡಿತವಾದ ಶರೀರದಲ್ಲಿ ಮೂಳೆಗಳು ಮಾತ್ರ ಎದ್ದು ಕಾಣುವಂತೆ ನನ್ನ ನಾಡಿನ ಹೊಲಗಳು ಕಾಣುತ್ತಿವೆ. ಮಾಂಸಖಂಡಗಳೆಲ್ಲಾ ಕರಗಿ ಹೋಗಿವೆ ಉಳಿದಿರುವುದೆಲ್ಲ ಅಸ್ಥಿಪಂಜರ ಮಾತ್ರ" ಎಂದು ಗ್ರೀಸ್‌ನ ಪ್ರಸಿದ್ಧ ತತ್ವಜ್ಞಾನಿ ಪ್ಲೇಟೋ ಪ್ರಲಾಪಿಸಿದ್ದಾನೆ. ಮನುಷ್ಯ ಹೇಗೆ ಮರುಭೂಮಿಯ ಕಾರಣಕರ್ತನಾದನೆಂಬುದನ್ನು ಇದು ತೋರಿಸುತ್ತದೆ. ಉತ್ತರ ಚೈನಾ, ಲ್ಯಾಟಿನ್ ಅಮೇರಿಕಾ, ಪಶ್ಚಿಮ ಏಷ್ಯಾದ

ಈ ಪ್ರದೇಶದ ಕೆಲಭಾಗಗಳು ಈಗ ಮರುಭೂಮಿಗಳಾಗಿರುವುದರ ಕಾರಣ ಇದೇ.

ಆರು ಸಾವಿರ ವರ್ಷಗಳ ಹಿಂದೆಯೇ ವ್ಯವಸಾಯ ನಡೆಯುತ್ತಿದ್ದ ಮೆಸಪೊಟೇಮಿಯದ ಪ್ರದೇಶದಲ್ಲಿ ಮರುಭೂಮಿ ಆದುದರ ಕಾರಣ ಬೇರೆ ರೀತಿಯದು. ಈ ಪ್ರದೇಶದಲ್ಲಿ ಮಳೆ ಸಾಕಷ್ಟು ಬಾರದುದರಿಂದ ಕಾಲುವೆಗಳ ಮೂಲಕ ನದಿ ನೀರು ಹಾಯಿಸಿ ವ್ಯವಸಾಯ ಮಾಡುವುದನ್ನು ಈ ಭಾಗಗಳಲ್ಲಿ ಆರಂಭಿಸಿದರು. ಆದರೆ ಬೆಳೆಗೆ ಉಪಯೋಗಿಸಿ ಹೆಚ್ಚಾದ ನೀರು ಹರಿದುಹೋಗಲು ತಕ್ಕ ಬಸಿಗಾಲುವೆಗಳ ವ್ಯವಸ್ಥೆ ಇರಲಿಲ್ಲ. ಈ ಹೆಚ್ಚಿನ ನೀರು ತಾನಾಗಿ ಬಿಸಿಲಿಗೆ ಆವಿಯಾಗಿ ಹೋಗಬೇಕಿತ್ತು ಅಷ್ಟೆ. ಹೀಗೆ ಪ್ರತಿ ವರ್ಷ ಹೊಸ ನೀರು ಹರಿದು ಬಂದು, ಹೆಚ್ಚಿನ ನೀರು ಆವಿಯಾಗಿ ಹೋದಾಗ ಆ ಭೂಮಿಯಲ್ಲಿ ಸಾಕಷ್ಟು ಪ್ರಮಾಣದ ಲವಣಗಳು, ಕ್ಷಾರಗಳು ಮತ್ತು ಇತರ ವಸ್ತುಗಳು ಉಳಿಯುತ್ತಿದ್ದವು. ಕ್ರಮೇಣ ಕ್ಷಾರ ಹೆಚ್ಚಿ ಭೂಮಿ ಚವುಳಾಗಿ ಫಸಲಿನ ಪ್ರಮಾಣ ಕುಗ್ಗಿತು. ಪರ್ವತ ಪ್ರದೇಶದ ಕಾಡನ್ನೆಲ್ಲಾ ಕಡಿದುದರಿಂದ ರೈತನ ಕಷ್ಟ ಮತ್ತಷ್ಟು ಹೆಚ್ಚಿತು. ಮಳೆ ಬಂದಾಗ ಮೇಲಿಂದ ಹರಿವ ನೀರು ಜೊತೆಯಲ್ಲಿ ಮಣ್ಣನ್ನೂ ತರುತ್ತಿತ್ತು. ನೀರು ಹರಿವ ಕಾಲುವೆಗಳು ಈ ಮಣ್ಣಿನಿಂದ ಮುಚ್ಚಿಹೋಗಿ ನೀರು ಎಲ್ಲಾ ಕಡೆ ಹರಡಿಕೊಳ್ಳುತ್ತಿತ್ತು. ನೀರೆಲ್ಲ ಆವಿಯಾಗಿ ಹೋದ ಮೇಲೆ ಅದರಲ್ಲಿ ಕರಗಿದ್ದ ಮಣ್ಣಿನಕ್ಷಾರ, ಲವಣಗಳು ಅಲ್ಲೇ ಶೇಖರವಾಗುತ್ತಿದ್ದವು. ಆ ಭೂಮಿಯು ಚವುಳಾಗಿ ಯಾವ ಬೆಳೆಯೂ ಬೆಳೆಯದಂತಾಗುತ್ತಿತ್ತು. ಈ ಕ್ಷಾರ ಮತ್ತು ಲವಣಗಳ ರಾಶಿ ಎಷ್ಟು ಬೆಳೆಯಿತೆಂದರೆ, ಇಂದು ಇರಾಕ್ ದೇಶದ ಹಲವಾರು ಪ್ರದೇಶಗಳಲ್ಲಿ ಬೆಳ್ಳನೆಯ ಹಿಮದರಾಶಿ ಹರಡಿದಂತೆ ಈ ಲವಣಗಳು ಕಾಣಬರುತ್ತವೆ. ಪರಿಸರ ತಜ್ಞ ಶ್ರೀ ಎರಿಕ್ ಎಕೋಮ್ ಅವರ ಅಭಿಪ್ರಾಯದಂತೆ, ಎರಡು ಸಾವಿರ ವರ್ಷ ಯದ್ವಾತದ್ವಾ ನೀರು ಹರಿದಿದ್ದರ ಪರಿಣಾಮ ಇದು. ಸೋವಿಯೆತ್ ರಷ್ಯಾದ ಮಣ್ಣಿನ ವಿಜ್ಞಾನಿ ವಿಕ್ಟರ್ ಕೋವ್ಡ ಅವರ ಅಂದಾಜಿನಂತೆ, ಮಾನವ ವ್ಯವಸಾಯ ಪ್ರಾರಂಭಮಾಡಿದಾಗಿನಿಂದ ಇಲ್ಲಿಯವರೆಗೆ ಸುಮಾರು ೬ ಕೋಟಿ ಎಕರೆಯಷ್ಟು ಭೂಮಿ, ನೀರಿನ ತಪ್ಪು ಬಳಕೆಯಿಂದ, ಕ್ಷಾರಮಯವಾಗಿದೆ. ದುರ್ದೈವದ ಸಂಗತಿಯೆಂದರೆ, ಈ ರೀತಿಯ ತಪ್ಪು ಬಳಕೆ ಈಗಲೂ ಹಾಗೆಯೇ ಮುಂದುವರಿಯುತ್ತಿದೆ. ಈಜಿಪ್ಟ್, ಸಿರಿಯ, ಇರಾನ್ ಮತ್ತು ಪಾಕಿಸ್ತಾನ ದೇಶಗಳಲ್ಲಿ ನೀರಾವರಿಗೆ ಒಳಪಟ್ಟಿರುವ ಭೂಮಿಯ ಶೇ. ೫೦ರಷ್ಟು ಭಾಗದಲ್ಲಿ ಈ 'ಕ್ಷಾರೀಕರಣ' ಆರಂಭವಾಗಿದೆ. ಉತ್ತರ ಮತ್ತು ಮಧ್ಯ ಆಫ್ರಿಕ, ದಕ್ಷಿಣ ಅಮೆರಿಕದ ಹಲವಾರು ದೇಶಗಳಲ್ಲಿ

ಮತ್ತು ಭತ್ತ ಬೆಳೆಯುವ ಪೂರ್ವ ಏಷ್ಯಾದ ದೇಶಗಳಲ್ಲಿ ಈ ತೊಂದರೆ ತೀವ್ರ ರೀತಿಯಲ್ಲೇ ಕಾಣಿಸಿಕೊಂಡಿದೆ. ಆಫ್ರಿಕದ 'ಸೆನೆಗಾಲ್' ದೇಶದಲ್ಲಿ ಕೇವಲ ಹತ್ತು ವರ್ಷಗಳ ಹಿಂದೆ ಸಮೃದ್ಧವಾಗಿ ಕಬ್ಬು ಬೆಳೆಯುತ್ತಿದ್ದ ಭೂಮಿ ಇಂದು ಪಾಳು ಬಿದ್ದಿದೆ.

ಪ್ರತಿ ವರ್ಷ ಪ್ರಪಂಚದ ನೀರಾವರಿ ಭೂಮಿಯಲ್ಲಿ ಸುಮಾರು ೨೦ ಲಕ್ಷ ಎಕರೆಗಳಷ್ಟು ಪ್ರದೇಶ ಈ ರೀತಿಯ ಕ್ಷಾರೀಕರಣದ ತೊಂದರೆಗೆ ಈಡಾಗುತ್ತಲಿದೆ ಎಂದು ಒಂದು ಅಂದಾಜಿದೆ. ಪ್ರಪಂಚದ ಒಟ್ಟು ನೀರಾವರಿ ಪ್ರದೇಶದ ವಿಸ್ತೀರ್ಣ ಸುಮಾರು ೪೦ ಕೋಟಿ ಎಕರೆ. ಇದು ಇಡೀ ಪ್ರಪಂಚದ ವ್ಯವಸಾಯ ಯೋಗ್ಯ ಭೂಮಿಯಲ್ಲಿ ಕೇವಲ ಶೇಕಡ ೧೫ ಭಾಗ ಮಾತ್ರ. ಆದರೆ ಭೂಮಿಯ ಮೇಲೆ ಬೆಳೆಯುವ ಆಹಾರ ಪದಾರ್ಥಗಳಲ್ಲಿ ಸುಮಾರು ಅರ್ಧಭಾಗ ಈ ನೀರಾವರಿ ಪ್ರದೇಶದಲ್ಲೇ ಬೆಳೆಯುತ್ತಿದೆ. ಅಂದರೆ ನಾವು ಎಷ್ಟು ಅಮೂಲ್ಯವಾದ ಭೂಮಿಯನ್ನು ಕಳೆದುಕೊಳ್ಳುತ್ತಿದ್ದೇವೆ ಎಂಬುದು ಅರಿವಾಗುತ್ತದೆ.

ಬಹು ದೊಡ್ಡ ಅಣೆಕಟ್ಟುಗಳಿಂದಲೂ ಕೆಲಸಲ ಹಾನಿಯೇ ಸಂಭವಿಸುತ್ತದೆ. ಸುಮಾರು ೫ ಸಾವಿರ ವರ್ಷಗಳಿಂದಲೂ ಆಫ್ರಿಕದ ಈಜಿಪ್ಟ್ ದೇಶದಲ್ಲಿ ನೈಲ್ ನದಿ ಪ್ರತಿ ಮಳೆಗಾಲದಲ್ಲಿ ಪ್ರವಾಹದಿಂದ ತನ್ನ ಎರಡೂ ದಂಡೆಯ ಲಕ್ಷಾಂತರ ಎಕರೆ ಭೂಮಿಯನ್ನು ಆವರಿಸುತ್ತಿತ್ತು. ಈ ಪ್ರವಾಹದ ನೀರು ಮಣ್ಣಿನ ಮೇಲ್ಪದರದಲ್ಲಿದ್ದ ಕ್ಷಾರವನ್ನು ಕರಗಿಸಿ ತನ್ನೊಂದಿಗೆ ಒಯ್ಯುತ್ತಿತ್ತು. ಅಲ್ಲದೆ ತೆಳುವಾದ ಕೆಸರನ್ನು ಭೂಮಿಯ ಮೇಲೆ ಬಿಡುತ್ತಿತ್ತು. ಈ ಕೆಸರು ಒಳ್ಳೆ ಫಲವತ್ತಾದ ಮೆಕ್ಕಲು ಮಣ್ಣು. ಪ್ರವಾಹ ಇಳಿದ ನಂತರ ಭೂಮಿಗೆ ಸಾರವತ್ತಾದ ಗೊಬ್ಬರವಾಗುತ್ತಿತ್ತು ಇದು. ಈಜಿಪ್ಟಿನ ರೈತ ಬೇರೆ ಯಾವ ಗೊಬ್ಬರವನ್ನೂ ಹೊಲಕ್ಕೆ ಹಾಕುತ್ತಿರಲಿಲ್ಲ. ನೈಲ್ ನದಿಗೆ ಅಡ್ಡಲಾಗಿ ಬೃಹತ್ತಾದ ಆಸ್ವಾನ್ ಅಣೆಕಟ್ಟನ್ನು ಕಟ್ಟಿದನಂತರ ನೀರನ್ನು ಕಾಲುವೆಗಳ ಮೂಲಕವೇ ವ್ಯವಸಾಯಕ್ಕೆ ಬಳಸಲಾಗುತ್ತಿದೆ. ಸಾರವತ್ತಾದ ಮೆಕ್ಕಲುಮಣ್ಣು ಅಣೆಕಟ್ಟಿನ ಹಿಂದೆ ಶೇಖರವಾಗುತ್ತಿದೆ. ಈಜಿಪ್ಟಿನಲ್ಲಿ ಮೊದಲಬಾರಿಗೆ ರೈತ ಕೃತಕ ಗೊಬ್ಬರಗಳನ್ನು ಉಪಯೋಗಿಸುತ್ತಿದ್ದಾನೆ. ಆದರೂ ಫಸಲಿನ ಪ್ರಮಾಣ ಕ್ರಮೇಣ ಕಡಿಮೆಯಾಗುತ್ತಿದೆ. ವ್ಯವಸಾಯ ತಜ್ಞರ ಅಭಿಪ್ರಾಯದಂತೆ ೧೯೮೦ರ ದಶಕದಲ್ಲಿ ಅಣೆಕಟ್ಟು ಕಟ್ಟುವ ಮೊದಲಿಗೆ ಇದ್ದ ಫಸಲಿನ ಪ್ರಮಾಣಕ್ಕಿಂತ ಕಡಿಮೆಯಾಗುವುದು ಖಚಿತ.

ಬಹುಶಃ ಬೆಂಗಾಡು ಪ್ರದೇಶ ಹೆಚ್ಚಾಗಲು ಬಹುಮುಖ್ಯ ಕಾರಣವೆಂದರೆ

ಎಗ್ಗಿಲ್ಲದೆ ಏರುತ್ತಿರುವ ಇಂದಿನ ಜನಸಂಖ್ಯೆ. ಕಡಿಮೆ ಮಳೆ ಬೀಳುವ, ಉಷ್ಣ ದೇಶಗಳಲ್ಲಿ ಜನಸಂಖ್ಯೆ ಸುಮಾರು ೨೫ ವರ್ಷಗಳ ಅವಧಿಯಲ್ಲಿ ಇಮ್ಮಡಿಯಾಗುತ್ತಿದೆ. ಒಮ್ಮೆ ಒಂದು ಕಡೆ ನೆಲೆಸಿ ಒಂದು ಭೂಮಿಯನ್ನು ವ್ಯವಸಾಯಕ್ಕೆ ಒಳಪಡಿಸಿದ ನಂತರ ಅದನ್ನು ಬಿಟ್ಟು ಬೇರೆಡೆಗೆ ಹೋಗಲು ಸಾಧ್ಯವಾಗುವುದಿಲ್ಲ. ಒಂದು ಭೂಮಿಯಲ್ಲಿ ಬೆಳೆ ತೆಗೆಯಬೇಕಿದ್ದರೆ ವರ್ಷಕ್ಕೆ ಸರಾಸರಿ ೩೫೦ ಮಿ. ಮೀ. ಮಳೆಯಾದರೂ ಬೇಕು. ಭೂಮಿಯ ಕೊರತೆಯ ಕಾರಣ ವರ್ಷಕ್ಕೆ ೧೫೦ ಮಿ. ಮೀ. ಮಳೆ ಬರುವಂಥ ಪ್ರದೇಶದಲ್ಲೂ ರೈತ ಉತ್ತು ಬಿತ್ತಿ ಮಾಡುತ್ತಾನೆ. ಮಳೆ ಕಡಿಮೆಯಾದ ಬರಗಾಲದಲ್ಲಿ ಈ ಭೂಮಿಯ ಅಮೂಲ್ಯ ಮೇಲ್ಪದರ ಗಾಳಿಗೆ ಕೊಚ್ಚಿಕೊಂಡು ಹೋಗುತ್ತದೆ. ಇನ್ನು ಹಲವೆಡೆ ವ್ಯವಸಾಯಕ್ಕಾಗಿ ಇಳಿಜಾರಾದ ಭೂಮಿಯನ್ನು ಆಳವಾಗಿ ಉಳುವುದರಿಂದ ಮಳೆ ಬಂದೊಡನೆ ಭೂಸವೆತ ಆರಂಭವಾಗುತ್ತದೆ. ಈ ಭೂಮಿಯೆಲ್ಲ ಕ್ರಮೇಣ ಬೆಂಗಾಡಾಗುತ್ತದೆ.

ಮಾನವ ನಿರ್ಮಿತ ಮರುಭೂಮಿಯ ವಾತಾವರಣದ ಕೆಲ ಸಂಗತಿಗಳೂ ಸ್ವಾರಸ್ಯವಾಗಿರುತ್ತವೆ. ಒಮ್ಮೆ ಮರುಭೂಮಿ ಸೃಷ್ಟಿಯಾಯಿತೆಂದರೆ ಅದು ಹಾಗೆಯೇ ಮುಂದುವರಿಯಲು ಸಹಾಯಕವಾಗುವಂಥ ಅಂಶಗಳೇ ಹೆಚ್ಚು. ಉದಾಹರಣೆಗೆ ಭಾರತದ ದೊಡ್ಡ ಮರುಭೂಮಿ 'ಥಾರ್'ನ ಹವಾಗುಣ. ದಟ್ಟ ಕಾಡಿನ ಮೇಲೆ ಬೀಸುವ ಗಾಳಿಯಲ್ಲಿರುವಷ್ಟೇ ತೇವಾಂಶ ಈ ಮರುಭೂಮಿಯಲ್ಲಿ ಬೀಸುವ ಗಾಳಿಯಲ್ಲೂ ಇದೆ. ಆದರೂ ಕಾಡಿನ ಮೇಲೆ ಮಳೆ ಸುರಿದಂತೆ ಮರುಭೂಮಿಯಲ್ಲಿ ಸುರಿಯುವುದಿಲ್ಲ. ವಿಜ್ಞಾನಿಗಳು ಊಹಿಸಿರುವಂತೆ ಇದರ ಕಾರಣ ಹೀಗಿದೆ. ಮರಳಿನ ಮೇಲ್ಮೈ ಇರುವ ಭೂಮಿ ಸೂರ್ಯನ ಶಾಖದ ಶಕ್ತಿಯನ್ನು ಹೀರಿಕೊಳ್ಳುವುದರ ಬದಲು ಅದನ್ನು ಪ್ರತಿಫಲಿಸುತ್ತದೆ. ಗಾಳಿಯಲ್ಲಿ ಧೂಳಿನ ಅಂಶ ಹೆಚ್ಚಾಗಿರುವುದರಿಂದ ಸಾಕಷ್ಟು ತೀಕ್ಷ್ಣ ಬಿಸಿಲು ಭೂಮಿಯ ಮೇಲೆ ಬೀಳುವುದಿಲ್ಲ. ಅಂತೆಯೇ ಮಳೆ ಸುರಿಯುವಂತೆ ಮಾಡಲು ಅವಶ್ಯಕವಾದ ಶಾಖ ಭೂಮಿಯಲ್ಲಿ ಉಳಿಯುವುದಿಲ್ಲ. ಹೀಗಾಗಿ ಮಳೆಯ ಅಂಶ ಕ್ರಮೇಣ ಕಡಿಮೆಯಾಗುತ್ತ ಹೋಗುತ್ತದೆ. ಪ್ರತಿವರ್ಷ ಮರುಭೂಮಿಯ ಅಂಚು ತನ್ನ ಪರಿಧಿಯನ್ನು ವಿಸ್ತರಿಸುತ್ತಾ ಹೋಗುತ್ತದೆ.

ಇತಿಮಿತಿ ಇಲ್ಲದೆ ಕಾಡನ್ನು ಕಡಿಯುವುದರ ಪರಿಣಾಮವೂ ಬಹಳ ಕೆಟ್ಟದ್ದು. ದಕ್ಷಿಣ ಅಮೇರಿಕದ ಬ್ರೆಜಿಲ್ ದೇಶದ ಎಸ್ಪಿರಿಟೋ ಸಾಂಟೋ ಎಂಬ ಪ್ರಾಂತದಲ್ಲಿ ಕಳೆದ ೩೦ ವರ್ಷಗಳಿಂದ ಕಾಡನ್ನು ಕಡಿದ ಪರಿಣಾಮವಾಗಿ ೨೦೪ ಜಾತಿಯ

ವಿವಿಧ ಪಕ್ಷಿಗಳು ಈಗ ಪೂರ್ತಿ ಕಾಣದಾಗಿವೆ. ಅವುಗಳ ಆಹಾರವಾಗಬೇಕಿದ್ದ ಹಲವಾರು ಬಗೆಯ ಕೀಟಗಳು ವಿಪರೀತ ಹೆಚ್ಚಿಕೊಂಡು ಬೆಳೆಗಳ ಮೇಲೆ ಧಾಳಿ ಮಾಡತೊಡಗಿವೆ. ಮರಗಳ ನೆರಳಿನ ಅಭಾವದಿಂದಾಗಿ ಅಲ್ಲಿ ಬಂದು ನೆಲೆಸಿದ ಜರ್ಮನ್ ನಿರಾಶ್ರಿತರಿಗೆ ಚರ್ಮದ ಕ್ಯಾನ್ಸರ್‌ನ ಕುತ್ತು ಒದಗಿದೆ. ಚರ್ಮ ರೋಗ ತಜ್ಞರೊಬ್ಬರ ಪ್ರಕಾರ "ತಿಳಿಚರ್ಮದ ಈ ಜರ್ಮನರಲ್ಲಿ ಶೇ. ೯೦ ರಷ್ಟು ಜನ ಚರ್ಮದ ಕ್ಯಾನ್ಸರಿನಿಂದ ಪೀಡಿತರಾಗಿರುವುದು ಕಂಡುಬಂತು."

ಲೇಖಕ ಅಶೋಕ್‌ಮಹದೇವನ್ನರು ತಿಳಿಸುವಂತೆ ಭಾರತದ ಬೆಂಗಾಡು ಮತ್ತು ಅರೆಬೆಂಗಾಡು ಪ್ರದೇಶದ ವಿಸ್ತಾರ ಒಟ್ಟು ದೇಶದ ವಿಸ್ತಾರದಲ್ಲಿ ಸುಮಾರು ಕಾಲು ಭಾಗಕ್ಕಿಂತ ಹೆಚ್ಚು. ಈ ಪ್ರದೇಶದಲ್ಲಿ ಸುಮಾರು ೨೦ ಕೋಟಿ ಜನ ವಾಸಿಸುತ್ತಾರೆ. ದೇಶದ ಶೇ. ೪೦ ರಷ್ಟು ಆಹಾರ ಧಾನ್ಯ ಈ ಪ್ರದೇಶದಲ್ಲಿ ಬೆಳೆಯುತ್ತವೆ. ಅತಿ ಕಡಿಮೆ ಫಸಲು ಬೆಳೆಯುವ ಪ್ರದೇಶಗಳೆಂದರೆ ಬಿಸಿಲಿನಿಂದ ಉರಿಯುವ ರಾಜಸ್ಥಾನದ ಥಾರ್ ಮರುಭೂಮಿ ಮತ್ತು ಹಿಮಾಚಲ ಪ್ರದೇಶದ ಕೊರೆಯುವ ಛಳಿಯ ಲಡಾಖ್. ಥಾರ್ ಮರುಭೂಮಿ ಈಗಿರುವ ಸ್ಥಿತಿಗೆ ಬಂದದ್ದು ಕೇವಲ ಕೆಲ ಶತಮಾನಗಳೀಚೆಗೆ. ಕ್ರಿ. ಪೂರ್ವ ೨೫೦೦ ವರ್ಷಗಳ ಹಿಂದೆ ಹರಪ್ಪ ಸಂಸ್ಕೃತಿ ಇಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ, ಇಲ್ಲಿಯ ಸರಸ್ವತಿ ನದಿದಂಡೆಯ ಎರಡೂ ಕಡೆ ಫಲವತ್ತಾಗಿದ್ದ ಪ್ರದೇಶಗಳಿದ್ದವು. ಸರಸ್ವತಿ ನದಿ ಭಾರತದ ಏಳು ಪವಿತ್ರ ನದಿಗಳಲ್ಲಿ ಒಂದಾಗಿ ವೇದ ಮಂತ್ರಗಳಲ್ಲಿ ಸೇರಿಸಲ್ಪಟ್ಟಿತ್ತು. ದೊಡ್ಡ ನಗರಗಳು ಈ ಪ್ರದೇಶದಲ್ಲಿದ್ದವು. ಆನೆಗಳು, ಖಡ್ಗ ಮೃಗಗಳು ಇಲ್ಲಿನ ಕಾಡುಗಳಲ್ಲಿ ಅಲೆದಾಡುತ್ತಿದ್ದವು. ಆದರೆ ಕ್ರಮೇಣ ಹವಾಗುಣದ ಬದಲಾವಣೆ ಆರಂಭವಾಯ್ತು. ಇದಕ್ಕೆ ಪೂರಕವಾಗಿ ಮನುಷ್ಯನೂ ಮರಗಳನ್ನು ಕಡಿಯುವ ಮೂಲಕ ಮರುಭೂಮಿ ಆರಂಭವಾಗಲು ತನ್ನ ಕಾಣಿಕೆ ನೀಡಿದ! ಸುಮಾರು ಕ್ರಿ. ಶ. ೧೦೦೦ ಇಸವಿಯ ವೇಳೆಗೆ ಈ ದಟ್ಟ ಕಾಡಿನ ಪ್ರದೇಶ ಮರುಭೂಮಿಯಾಗಿ ಪರಿವರ್ತನೆಯಾಗಿತ್ತು. ಸರಸ್ವತಿ ನದಿ ಬತ್ತಿ ಹೋಗಿ ಮರೆಯಾಯ್ತು. ಇಲ್ಲಿ ವಾಸಿಸುತ್ತಿದ್ದ ಬಹುಜನ ಅಲೆಮಾರಿಗಳಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ಜಾಗ ಬದಲಾಯಿಸುತ್ತಿದ್ದರು. ಜನಸಂಖ್ಯೆ ಕಡಿಮೆಯಾಗತೊಡಗಿತ್ತು. ಆದರೂ ಈಗಲೂ ಚ. ಕಿ. ಮೀಟರ್‌ಗೆ ೪೮ ಜನವಾಸಿಸುವ ಥಾರ್ ಮರುಭೂಮಿ ಜಗತ್ತಿನ ಅತಿ ನಿಬಿಡ ಜನಸಂಖ್ಯೆಯ ಮರುಭೂಮಿ ಎನಿಸಿದೆ. ಈಚಿನ ಸಂಶೋಧನೆಗಳಿಂದ ಥಾರ್ ಮರುಭೂಮಿ ತಾನಾಗಿ ವಿಸ್ತಾರಗೊಳ್ಳುತ್ತಿಲ್ಲ ಎಂದು ಕಂಡುಬಂದರೂ ಮನುಷ್ಯ ಮತ್ತು ಜಾನುವಾರುಗಳ

ಸಂಖ್ಯಾಭಿವೃದ್ಧಿ ಬೆಂಗಾಡು ಪ್ರದೇಶದ ಹೆಚ್ಚಳವಾಗುವುದಕ್ಕೆ ಸಹಾಯಕವಾಗಿದೆ ಎನಿಸುತ್ತದೆ. ಕಾರಣ ದಿನ ಕಳೆದಂತೆ ಜನ ಹುಲ್ಲುಗಾವಲುಗಳನ್ನೆಲ್ಲ ಹೊಲಗಳನ್ನಾಗಿ ಮಾಡಲು ಉಳುತ್ತಿದ್ದಾರೆ. ೧೯೫೧ ರಿಂದ ೧೯೭೧ರವರೆಗೆ ರಾಜಾಸ್ಥಾನ ರಾಜ್ಯದ ವ್ಯವಸಾಯದ ಭೂಮಿಯ ವಿಸ್ತೀರ್ಣ ಶೇ. ೫೦ರಷ್ಟು ಹೆಚ್ಚಾಗಿದೆ. ಅಂತೆಯೇ ಅಳಿದುಳಿದ ಹುಲ್ಲುಗಾವಲಿನಲ್ಲಿ ಮೇಯುವ ಜಾನುವಾರುಗಳ ಸಂಖ್ಯೆಯೂ ಹೆಚ್ಚಾಗಿದೆ. ಹುಲ್ಲೆಲ್ಲ ನಾಶವಾದಾಗ ಬರಗಾಲವೂ ಬಂದರೆ ಭೂಮಿಯ ಮೇಲ್ಪದರ ಕೊಚ್ಚಿಹೋಗಿ ಭೂಸವೆತ ಉಂಟಾಗುತ್ತದೆ. ಮರುಭೂಮಿಯ ಹುಟ್ಟಿಗೆ ದಾರಿಯಾಯಿತಲ್ಲ.

ಹೊಲಗಳಿಗೆ ನೀರುಣಿಸಲು ಮಾಡಿದ ಕಾಲುವೆಗಳೂ ನಿರ್ದಿಷ್ಟರೀತಿಯಲ್ಲಿ ಹಾನಿ ಎಸಗುತ್ತಿವೆ. ಪಂಜಾಬ್, ಹರಿಯಾನ, ರಾಜಾಸ್ಥಾನ್, ಗುಜರಾತ್, ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಒಟ್ಟು ಸುಮಾರು ೬೦ ಲಕ್ಷ ಎಕರೆಯಷ್ಟು ಭೂಮಿ ಕ್ಷಾರ ಪೂರಿತವಾಗತೊಡಗಿದೆ ಎಂದು ಒಂದು ಅಂದಾಜು. ನೀರಾವರಿ ಕಾಲುವೆಗಳು ಅಸಮರ್ಪಕವಾಗಿದ್ದುದೇ ಇದಕ್ಕೆ ಕಾರಣ. ವ್ಯವಸಾಯ ಇಲಾಖೆಯ ವರಿಷ್ಠ ಅಧಿಕಾರಿ ಡಾ|| ಡಿ. ಆರ್. ಬೊಂಬ್ಲ ಅವರು ಹೇಳುವಂತೆ "ಕಾಲುವೆಗಳಲ್ಲಿ ನೀರು ಹರಿಯಲು ಆರಂಭವಾದ ಕೆಲವರ್ಷಗಳ ನಂತರ ರೈತರು ತಮ್ಮ ಜಮೀನು ಕ್ಷಾರವಾಗುತ್ತಿದೆಯೆಂದು ದೂರಲು ತೊಡಗುತ್ತಾರೆ. ಶೋಚನೀಯವೆಂದರೆ ಹಲವಾರು ನೀರಾವರಿ ಎಂಜಿನಿಯರುಗಳೂ ನೀರಾವರಿ ಪ್ರದೇಶದಲ್ಲಿ ಬಸಿಗಾಲುವೆಗಳ ಅಗತ್ಯ ಎಷ್ಟೆಂಬುದಕ್ಕೆ ಮಹತ್ವ ಕೊಡುವುದೇ ಇಲ್ಲ."

ಬೆಂಗಾಡು ಪ್ರದೇಶಗಳು ಹೆಚ್ಚಳವಾಗದಂತೆ ತಡೆಯಲು ಕೇಂದ್ರ ಸರ್ಕಾರ 'ರಾಜಾಸ್ಥಾನ್ ಕಾಲುವೆ'ಯಂಥ ಬೃಹತ್ ನೀರಾವರಿ ಯೋಜನೆಯಲ್ಲದೆ 'ಬರಗಾಲ ಪೀಡಿತ ಪ್ರದೇಶಾಭಿವೃದ್ಧಿ ಯೋಜನೆ' ಅನ್ವಯ ಕೆಲಕಾರ್ಯಕ್ರಮಗಳನ್ನು ಕೈಗೊಂಡಿದೆ. ಜೋಧ್‌ಪುರದಲ್ಲಿರುವ ಕೇಂದ್ರ ಬರಗಾಲ ಪ್ರದೇಶ ಸಂಶೋಧನಾ ಸಂಸ್ಥೆ ಈ ದಿಸೆಯಲ್ಲಿ ಮಾರ್ಗದರ್ಶನ ನೀಡುತ್ತಿದೆ. ಕೇಂದ್ರ ವ್ಯವಸಾಯ ಸಂಶೋಧನಾ ಸಂಸ್ಥೆಯ ನಿರ್ದೇಶಕರಾಗಿದ್ದ ಡಾ|| ಎಂ. ಎಸ್. ಸ್ವಾಮಿನಾಥನ್ನರು ಹೇಳುವಂತೆ "ಈ ಸವಾಲನ್ನು ಎದುರಿಸಲು ಏನುಮಾಡಬೇಕು–ಹೇಗೆ ಮಾಡಬೇಕು ಎಂಬುದು ನಮಗೆ ಚೆನ್ನಾಗಿ ಗೊತ್ತು. ಆದರೆ ಸಂಪನ್ಮೂಲಪ್ಪೇ ನಮಗೆ ಕೊರತೆ." ಕಳೆದ ೮ ವರ್ಷಗಳಲ್ಲಿ ಡಿ. ಪಿ. ಎ. ಪಿ. ಕಾರ್ಯಕ್ರಮಕ್ಕಾಗಿ ಸರ್ಕಾರ ೩೦೦ ಕೋಟಿ ರೂ.ಗಳನ್ನು ಖರ್ಚುಮಾಡಿದೆ.

೧೩ ರಾಜ್ಯಗಳ ೭೪ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ಜಾರಿಯಲ್ಲಿದೆ. ೧೯೭೭ರ ಡಿಸೆಂಬರ್‌ನಿಂದ 'ಮರುಭೂಮಿ ಪ್ರದೇಶ ಅಭಿವೃದ್ಧಿ ಯೋಜನೆ' ಎಂಬ ೫ ವರ್ಷಗಳ ಅವಧಿಯ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗಿದೆ. ಇದಕ್ಕಾಗಿ ಅತಿಕಡಿಮೆ ಮಳೆಯಾಗುವ ೨೦ ಜಿಲ್ಲೆಗಳನ್ನು ಆರಿಸಿಕೊಳ್ಳಲಾಗಿದೆ. ಈ ಹೊಸ ಯೋಜನೆಯಲ್ಲಿ ಕಾಡುಗಳ ನಿರ್ಮಾಣ, ಒಳ್ಳೆ ಹುಲ್ಲುಗಾವಲುಗಳು, ಜಾನುವಾರುಗಳ ಕ್ರಮಬದ್ಧ ಸಾಕಣೆ, ಆಳ ನೀರಿನ ಕೊಳವೆ ಬಾವಿಗಳ ನಿರ್ಮಾಣ ಇವುಗಳಿಗೆ ಆದ್ಯತೆ ನೀಡಲಾಗಿದೆ.

ಮರುಭೂಮಿಯಾಗುವುದನ್ನು ತಡೆಗಟ್ಟಲು ಸಾಧ್ಯವೆ? ಎಂಬ ಪ್ರಶ್ನೆಗೆ ಉತ್ತರ 'ಹೌದು.' ಭೂಮಿಯ ಮೇಲ್ಪದರ ತುಂಬಾ ಆಳವಾಗಿ ಕೊರೆದು ಹೋಗಿದ್ದರೆ ಅಥವಾ ಕ್ಷಾರ ಮತ್ತು ಲವಣಗಳ ರಾಶಿ ಶೇಖರವಾಗಿದ್ದು ಅವನ್ನು ಕರಗಿಸಿ ತೆಗೆಯಲು ಬೇಕಾಗುವ ನೀರನ್ನು ಹರಿಸಲು ಸಾಧ್ಯವಿಲ್ಲದಿದ್ದರೆ, ಈ ಎರಡು ಸಂದರ್ಭಗಳನ್ನು ಬಿಟ್ಟು ಉಳಿದಂತೆ ಮರುಭೂಮಿಯಾಗುವುದನ್ನು ಯಶಸ್ವಿಯಾಗಿ ತಡೆಯಬಹುದು. ಯಾವುದಾದರೂ ಸಸ್ಯ ತನ್ನ ಬೇರು ಬಿಡಲು ಸಾಧ್ಯವಾಗುವಂಥ ಭೂಮಿ ಇದ್ದರೆ ಸಾಕು ಮರುಭೂಮಿಯಾಗುವುದನ್ನು ತಡೆಗಟ್ಟುವುದಷ್ಟೇ ಅಲ್ಲ, ಮರುಭೂಮಿಯಲ್ಲೂ ಹಸಿರಿನ ಸಿರಿ ಹರಿವಂತೆ ಮಾಡಬಹುದು.

ಪರಿಸರತಜ್ಞರು ಈ ಕೆಳಕಂಡ ಸರಳ ಉಪಾಯಗಳನ್ನು ಸೂಚಿಸಿದ್ದಾರೆ. ಇವುಗಳನ್ನನುಸರಿಸಿದರೆ ಮರುಭೂಮಿಯಾಗುವುದನ್ನು, ಅದು ಹಬ್ಬುವುದನ್ನು ತಡೆಯಬಹುದು.

೧. ಬೆಂಗಾಡು ಪ್ರದೇಶದ ಪೂರ್ಣನಕಾಶೆ ತಯಾರಿಸಿ ಎಲ್ಲಿ ಹುಲ್ಲುಗಾವಲಿರಬೇಕು, ಎಲ್ಲಿ ವ್ಯವಸಾಯ ಮಾಡಬೇಕು ಮತ್ತು ಯಾವ ಪ್ರದೇಶವನ್ನು ಹಾಗೆಯೇ ಬಿಡಬೇಕು ಎಂದು ನಿರ್ಧರಿಸುವುದು.

೨. ಜಾನುವಾರುಗಳ ಸಂಖ್ಯೆಯನ್ನು ಸೀಮಿತವಾಗಿ ಇಟ್ಟುಕೊಳ್ಳತಕ್ಕದ್ದು. ಅದರಲ್ಲೂ ಮೇಕೆಗಳನ್ನು ಎಲ್ಲೆಂದರಲ್ಲಿ ಮೇಯಲು ಬಿಡಬಾರದು. (ಥಾರ್ ಮರುಭೂಮಿ ಸೃಷ್ಟಿಯಾಗಲು ಸರ್ವಭಕ್ಷಕ ಮೇಕೆಗಳೇ ಕಾರಣ ಎಂದು ಒಬ್ಬ ಸಂಶೋಧಕರ ವಿವರಣೆ ಇದೆ.)

೩. ಬೆಳೆಗಳ ಆವರ್ತನಕ್ರಮ ಕಟ್ಟುನಿಟ್ಟಾಗಿ ಜಾರಿಗೆ ತರತಕ್ಕದ್ದು. ಅಂದರೆ ಒಂದು ಆಹಾರದ ಬೆಳೆ ನಂತರ ದ್ವಿದಳಧಾನ್ಯ ಬೆಳೆಯುವುದು ಮತ್ತೆ ಇನ್ನೊಂದು ಬಾರಿ ಬೇರೆ ಧಾನ್ಯದ ಬೆಳೆ. ಈ ರೀತಿ ಬೆಳೆ ತೆಗೆಯುವುದು. ಸ್ವಲ್ಪ ಭೂಮಿಯಲ್ಲಿ

ಯಾವ ಬೆಳೆಯನ್ನೂ ತೆಗೆಯದೆ ಬೀಳು ಬಿಡುವುದು ಉತ್ತಮ.

೪. ಗುಡ್ಡ ಪ್ರದೇಶವಲ್ಲಿ, ದಿಣ್ಣೆಗಳಲ್ಲಿ, ಮರಳಿನ ದಿಬ್ಬಗಳ ಮೇಲೆ ಗಿಡಗಳನ್ನು ನೆಡುವುದು, ಹುಲ್ಲನ್ನು ಬೆಳೆಸುವುದು.

೫. ಅಡಿಗೆಗೆ ಸೌದೆಯ ಬದಲು ಸೌರಶಕ್ತಿ, ಸಗಣಿ ಅನಿಲ ಇವುಗಳ ಬಳಕೆಗೆ ಉತ್ತೇಜನ ಕೊಡುವುದು.

೬. ನಿರುಪಯೋಗಿ ಗಿಡ, ಪೊದೆಗಳನ್ನು ನಾಶಮಾಡಿ ಅಲ್ಲಿ ಹುಲ್ಲು ಬೆಳೆಯುವಂತೆ ಮಾಡುವುದು.

೭. ನೀರಾವರಿ ಪದ್ಧತಿಯಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿಕೊಂಡು ಬೆಳೆಗೆ ಅವಶ್ಯಕವಿರುವಷ್ಟೇ ನೀರನ್ನು ಮಾತ್ರ ಉಪಯೋಗಮಾಡಿಕೊಳ್ಳುವ ವ್ಯವಸ್ಥೆ ಮತ್ತು ಸೋರುವ ಕಾಲುವೆಗಳಿಗೆ ರಿಪೇರಿ, ಬಸಿಗಾಲುವೆಗಳ ನಿರ್ಮಾಣ ಇವುಗಳನ್ನು ಕೈಗೊಳ್ಳುವುದು.

೮. ಈಗಿನ ನೀರಾವರಿ ಪದ್ಧತಿಯಲ್ಲಿನ ಒಳಿತು ಕೆಡಕುಗಳ ಪೂರ್ಣ ಪರಿಚಯವಾಗುವ ತನಕ, ಹೊಸ ಅಣೆಕಟ್ಟುಗಳ ನಿರ್ಮಾಣಕ್ಕೆ ತಡೆ.

ಈ ಮೇಲ್ಕಂಡ ಕ್ರಮಗಳನ್ನು ಕಾರ್ಯಗತಗೊಳಿಸಿದರೆ ಉತ್ತಮ ಫಲಿತಾಂಶ ಖಚಿತವೇ? ಹೌದು. ಇದಕ್ಕೆ ಉದಾಹರಣೆ ಆಫ್ರಿಕಾ ಖಂಡದಲ್ಲಿರುವ ಇಸ್ರೇಲ್ ದೇಶ. ನಿರುಪಯೋಗಿ ಎನಿಸಿದ್ದ ಭೂಮಿಯನ್ನು ಮತ್ತೆ ಫಲವತ್ತಾಗಿ ಮಾರ್ಪಡಿಸುವುದರಲ್ಲಿ ಇಸ್ರೇಲ್ ಒಂದು ವಿಕ್ರಮವನ್ನು ಸಾಧಿಸಿದೆ. ಹಳೆಯ ತಿರುವು ನಾಲೆಗಳನ್ನು ಉಪಯೋಗಿಸಿಕೊಂಡು ವರ್ಷಕ್ಕೆ ಕೇವಲ ೭೫ ಮಿ.ಮೀ. ಮಳೆ ಬೀಳುವ ಪ್ರದೇಶದಲ್ಲೂ ಇಸ್ರೇಲಿಗಳು ಉತ್ತಮ ಬೆಳೆ ತೆಗೆಯುತ್ತಿದ್ದಾರೆ. ಕಾಡನ್ನು ಬೆಳೆಸಲು ಅಲ್ಲಿ ಮೊದಲ ಪ್ರಾಶಸ್ತ್ಯ. "ನಾವು ಮರುಭೂಮಿಯ ವಿರುದ್ಧ ಕೆಲಸ ಮಾಡುವುದಿಲ್ಲ ಅದರೊಂದಿಗೆ ಸೇರಿ ಕೆಲಸ ಮಾಡುತ್ತೇವೆ ಇದೇ ನಮ್ಮ ಯಶಸ್ಸಿನ ಗುಟ್ಟು" ಎಂದು ಅಲ್ಲಿನ ಒಬ್ಬ ತಜ್ಞ ಹೇಳುತ್ತಾರೆ. ಭಾರತದ ಎಲ್ಲ ರಾಜ್ಯಗಳೂ ಕಾಡಿನ ನಿರ್ಮಾಣ, ನೀರಾವರಿ ವ್ಯವಸ್ಥೆಯ ಸರಿಯಾದ ರೀತಿಯ ಉಪಯೋಗ, ಇವುಗಳಿಗೆ ಆದ್ಯತೆ ನೀಡುವುದರಿಂದ ಅನೇಕ ಸಮಸ್ಯೆಗಳಿಗೆ ಪರಿಹಾರ ದೊರಕೀತು. ಇಂಥ ಕೆಲಸಗಳಲ್ಲಿ ಎಲ್ಲರ ಒಮ್ಮನಸ್ಸಿನ ಸಹಕಾರ ಅತ್ಯಂತ ಆವಶ್ಯಕ.

ವಿ. ಎಸ್. ಸೂರ್ಯನಾರಾಯಣ

ಕಾವ್ಯರ್ಷಿ ಡಾ|| ಡಿ. ಎಸ್. ಕರ್ಕಿ

ಆಧುನಿಕ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಪ್ರಖ್ಯಾತಿ ಪಡೆದ ಗಣ್ಯ ಕವಿಗಳ ಸಾಲಿನಲ್ಲಿ ಕಾವ್ಯರ್ಷಿ ಡಾ|| ಡಿ. ಎಸ್. ಕರ್ಕಿಯವರು ಒಬ್ಬರೆಂಬುದು ನಿರ್ವಿವಾದ. ಅವರ ಹೆಸರನ್ನು ಕೇಳದ, ಅವರ ಕವನಗಳನ್ನು ಸವಿಯದ ಕನ್ನಡಿಗನೇ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಕನ್ನಡನಾಡಿನ ಮನೆ ಮಾತಾಗಿದೆ ಅವರ ಹೆಸರು. ಅತ್ಯಂತ ಅಚ್ಚುಮೆಚ್ಚಿನ ಅಭಿಜಾತ ಜನಪ್ರಿಯ ವರಕವಿಗಳಾಗಿ ಕರ್ನಾಟಕದ ಸಾಂಸ್ಕೃತಿಕ ರಾಯಭಾರಿಗಳಾಗಿರುವುದು ಕನ್ನಡಿಗರ ಪುಣ್ಯ ವಿಶೇಷವೇ ಸರಿ. 'ಹಚ್ಚೇವು ಕನ್ನಡದ ದೀಪ, ಸಿರಿನುಡಿಯ ದೀಪ, ಒಲವೆತ್ತಿ ತೋರುವಾ ದೀಪ'ವೆಂಬ ಕವನ ರತ್ನವು ಕನ್ನಡದ ಡಿಂಡಿಮ ಬಾರಿಸಿದೆ. ಕನ್ನಡ ಹೃದಯ ಶಿವನನ್ನು ಜಾಗೃತಗೊಳಿಸಿದೆ ಈ ಕವನ. ಕನ್ನಡದ ಬಗೆಗಿರುವ ಅವರ ಉತ್ಕಟ ಅಭಿಮಾನಕ್ಕೆ ಸಾಕ್ಷಿ ನುಡಿಯುತ್ತದೆ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಗುಂಡಿನೇಟಿಗೆ ಬಲಿಯಾದಾಗ ಅವರ ಕೋಮಲ ಹೃದಯದಿಂದ ಹೊರಹೊಮ್ಮಿದ ಅರ್ಥಪೂರ್ಣ ಶೋಕಗೀತೆ ಓದುವವರ ಕಣ್ಣಲ್ಲಿ ಇಂದಿಗೂ ನೀರು ಬರುವಂತಿದೆ. ಅಷ್ಟೊಂದು ಮನೋಜ್ಞವಾಗಿದೆ, ಮಾರ್ಮಿಕವಾಗಿದೆ.

"ತಿಳಿನೀಲದಲ್ಲಿ ತಾ ನೀಲವಾಗಿ ಅವ ಹೋದ ದೂರ ದೂರ
ಬೆಳಗಿಹುದು ಇಲ್ಲಿ ಅವ ಬಿಟ್ಟ ಬೆಳಕು, ಇನ್ನೊಮ್ಮೆ ಏಕೆ ಬಾರ?
ಎಸೆದ ಗುಂಡಿಗಾ ಕುಸಿದ ದೇಹದಲಿ ವಿಮಲ ರಕ್ತ ಚೆಲ್ಲಿ
ಮೀಯಿಸಿತ್ತು ಈ ಜಗದ ಮನವನೇ ಶೋಕ ಜಲದಲ್ಲಿ
ಮುಗಿದ ಕೈಯು ಮುಗಿದಂತೆ ಇತ್ತು : ನೆಲಸಿತ್ತು ಕ್ಷಮೆಯು ಮೊಗದಿ
ಎದೆಯೊಳೆಂಥ ತಿಳಿ ಭಾವವಿತ್ತು, ಅದನಾವ ಬಲ್ಲ ಜಗದಿ?"

ಇದಕ್ಕಿಂತಲೂ ಪ್ರೇಮಭಾವ ತುಂಬಿ ಬರುವ ಶ್ರದ್ಧಾಂಜಲಿ ಅರ್ಪಿಸುವುದು ಅಸಾಧ್ಯ ಕೋಟಿಯ ಮಾತೆಂಬುವಷ್ಟರ ಮಟ್ಟಿಗೆ ಇದು ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಹಾಗೆಯೇ ಡಾ|| ಕರ್ಕಿಯವರು ಎಲೆಯ ಮರೆಯ ಹೂವಿನಂತೆ ಶಿಕ್ಷಣ ಕ್ಷೇತ್ರದಲ್ಲಿಯೂ ಅಮೋಘ ಅನುಪಮ ಸೇವೆ ಸಲ್ಲಿಸಿದರು. ವಿಶೇಷವಾಗಿ ಕಾಡಸಿದ್ಧೇಶ್ವರ ಮಹಾವಿದ್ಯಾಲಯ ರೂಪಿಸಿದ ರೂವಾರಿಯೆಂದೇ ಹೇಳಬೇಕು. ಪ್ರಾಚಾರ್ಯರಾಗಿ ಆ ವಿದ್ಯಾಲಯಕ್ಕೆ ಭದ್ರವಾದ ಬುನಾದಿ ಹಾಕಿದ ಕೀರ್ತಿ ಇವರದು. ಹಾಗೆಯೇ ಇವರ ಅಪಾರ ಅನುಭವದ ಸಮರ್ಥ ದಕ್ಷ ಆಡಳಿತ

ಲಾಭ ಪಡೆದ ಸಂಸ್ಥೆಗಳಲ್ಲಿ ಹುಬ್ಬಳ್ಳಿ ಮೂರು ಸಾವಿರ ಮಠದ ಮಹಿಳಾ ವಿದ್ಯಾಲಯ, ನರೇಗಲ್ಲಿನ ಅನ್ನದಾನೇಶ್ವರ ಮಹಾವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಈ ಮೂರು ಸಂಸ್ಥೆಗಳಲ್ಲಿ ಅವರು ಸಲ್ಲಿಸಿದ ಸೇವೆ ಸ್ಮರಣೀಯ ವಾಗಿದೆ. ಹುಬ್ಬಳ್ಳಿ ಮತ್ತು ನರೇಗಲ್ಲ ಮಹಾವಿದ್ಯಾಲಯಗಳು ಇಂದು ನಾಡಿನಲ್ಲಿ ಪ್ರಸಿದ್ಧಿಯಾಗಿವೆ, ಪ್ರಖ್ಯಾತಿ ಪಡೆದಿವೆ. ಪ್ರತಿವರುಷ ಬೆಳೆಯುತ್ತಲೇ ನಡೆದಿವೆ. ಡಾ॥ ಕರ್ಕಿಯವರ ಮಾರ್ಗದರ್ಶನ ಫಲಕೊಟ್ಟಿದೆ. ತಮ್ಮ ವ್ಯಕ್ತಿತ್ವದ ಘನತೆ ಗೌರವವನ್ನು ಕಾಯ್ದುಕೊಂಡು ತಮ್ಮ ಪಾಲಿನ ಸೇವೆಯನ್ನು ಅತ್ಯಂತ ವಿನೀತ ರಾಗಿ ಸವ್ಯಸಾಚಿಗಳಾಗಿ ಅಜಾತಶತ್ರುಗಳಾಗಿ ತಮ್ಮ ಕರ್ತವ್ಯವನ್ನು ದಕ್ಷತೆ ಯಿಂದ ನೆರವೇರಿಸಿದರು. ಕನ್ನಡಿಗರ ಪ್ರೀತಿಗೆ ಪಾತ್ರರಾದರು. ಅವರ ಸಾರ್ಥಕ ಬದುಕಿನ ಬಹುಮುಖ ವ್ಯಕ್ತಿತ್ವದ ಸ್ಥೂಲ ಪರಿಚಯವನ್ನು ಇಲ್ಲಿ ಮಾಡಿ ಕೊಡಲಾಗಿದೆ.

ಜನನ ಶಿಕ್ಷಣ:

ಕರ್ನಾಟಕದ ಅತ್ಯಂತ ಸಂಪದ್ಭರಿತ ಜಿಲ್ಲೆ ಬೆಳಗಾಂವಿ. ಮಹಾವೀರರಿಗೆ, ಮಹಾಮಹಿಮರಿಗೆ ಜನ್ಮಕೊಟ್ಟ ಪುಣ್ಯನಾಡಿದು. ಸದಾ ಹಚ್ಚುಹಸುರಿನಿಂದ ಕಂಗೊಳಿಸುತ್ತಿರುವ ಫಲವತ್ತಾದ ಭೂರಮಣಿಯ ಸಡಗರ, ಸಂಭ್ರಮಗಳನ್ನು ವರ್ಣಿಸಲಸದಳ. ಈ ಜಿಲ್ಲೆಯಲ್ಲಿ ಬೆಲ್ಲದ ಬಾಗೇವಾಡಿಯೂ ಒಂದು ತಾಲ್ಲೂಕು. ಅದೊಂದು ಪ್ರಶಾಂತ ಪರಿಸರದ ರಮ್ಯ ಮನೋಹರ ಶಾಂತಿನಿಕೇತನ, ಇಲ್ಲಿಯೇ ದಿನಾಂಕ ೧೫–೧೧–೧೯೦೭ರಲ್ಲಿ ಮುದ್ದಾದ ಮಗುವೊಂದು ಜನ್ಮವೆತ್ತಿತ್ತು. ತಾಯಿ ದುಂಡವ್ವ, ತಂದೆ ಸಿದ್ದಪ್ಪ ಅವರೇ ನಮ್ಮ ರಸಋಷಿ ವರಕವಿ ಡಾ|| ಡಿ. ಎಸ್. ಕರ್ಕಿಯವರ ತಾಯಿ ತಂದೆಯರು ಕರ್ಕಿಯವರ ಮನೆತನದ ಮೂಲ ಹೆಸರು ಅಂಗಡಿ. ಕಾಲಾಂತರದಿಂದ ಭಾಗೋಜಿಕೊಪ್ಪಕ್ಕೆ ವಲಸೆ ಬಂದರು. ಅಲ್ಲಿ ಹಾಳು ಬಿದ್ದ ಬೀಳು ಬಿದ್ದ ಕರ್ಕಿಹತ್ತಿದ ಭೂಮಿಯನ್ನೇ ತೆಗೆದುಕೊಂಡು ಕಾಯ ಕಷ್ಟದಿಂದ ದುಡಿದುಡಿದ ಕರ್ಕಿಯನ್ನು ಬೇರು ಸಹಿತ ಕಿತ್ತುಹಾಕಿ ಹಸನುಮಾಡಿ ದರು. ಸಾಗುವಳಿ ಮಾಡಿದರು. ಈ ಕಾರಣದಿಂದಲೇ ಅವರ ಮನೆತನದ ಹೆಸರು ಕರ್ಕಿಯವರೆಂದೇ ಪ್ರಚಲಿತವಾಯಿತು. ಡಾ|| ಕರ್ಕಿಯವರ ಬಾಲ್ಯದ ಜೀವನವು ಅವರ ತಾಯಿಯ ತವರುಮನೆಯಾದ ಬೆಲ್ಲದ ಬಾಗೇವಾಡಿಯಲ್ಲಿಯೇ ಕಳೆಯಿತು. ತಾಯಿಯ ತವರುಮನೆಯ ಹೆಸರು ಕಣಗಲಿ. ಈಶ್ವರಪ್ಪ ಅವರ ಸೋದರಭಾವ. ಎಲ್ಲರಿಗೂ ಬೇಕಾದ ವ್ಯಕ್ತಿ. ಶಿಕ್ಷಣ ಪ್ರೇಮಿ. ಅವರೇ

ಡಾ|| ಕರ್ಕಿಯವರ ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಂಡರು. ಇಂದಿಗೂ ಡಾ| ಕರ್ಕಿಯವರು ಸೋದರಮಾವ ಶ್ರೀ ಈಶ್ವರಪ್ಪ ಕಣಗಲಿಯವರನ್ನು ಅತ್ಯಂತ ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಅವರ ಸವಿನೆನಪನ್ನು ಮಧುರ ಬಾಂಧವ್ಯವನ್ನು 'ಕರ್ಕಿ-ಕಣಗಲಿ' ಕಾವ್ಯ ಸಂಕಲನದಲ್ಲಿ ಬಹು ಸೊಗಸಾಗಿ ವರ್ಣಿಸಿದ್ದಾರೆ. ಡಾ| ಕರ್ಕಿಯವರ ಪ್ರಾಥಮಿಕ ಶಿಕ್ಷಣವು ಜಿಲ್ಲೆಯ ಬಾಗೇವಾಡಿಯಲ್ಲಿಯೇ ನಡೆಯಿತು. ಅಲ್ಲಿಯ ನಿಸರ್ಗ ಸೌಂದರ್ಯ ಅವರ ಎಳೆಯ ಕೋಮಲ ಮನದ ಮೇಲೆ ಅಚ್ಚೊತ್ತಿ ನಿಂತಿತ್ತು. ಅಲ್ಲಿಂದ ಬೆಳಗಾಂವಿಯ ಜಿ. ಎ. ಹೈಸ್ಕೂಲ್‌ನಿಂದ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಹೊಂದಿದರು. ಬೆಳಗಾಂವಿಯ ಸಾಂಸ್ಕೃತಿಕ ವಾತಾವರಣ ಬೆಳೆಯುತ್ತಿರುವ ಕವಿ ಮನವನ್ನು ಒಗ್ಗಿಸಿತು. ತದನಂತರ ಧಾರವಾಡ ಕರ್ನಾಟಕ ಕಾಲೇಜಿನಿಂದ ೧೯೩೦ರಲ್ಲಿ ಬಿ.ಎ. ಪದವಿ ಪಡೆದರು. ಆಗಲೇ ಕನ್ನಡ ಭಾವಗೀತೆಗಳನ್ನು ರಚಿಸುವ ಪ್ರವೃತ್ತಿ ಬೆಳೆಯಿತು. ಧಾರವಾಡ ಮುರುಘಾಮಠದ ಧಾರ್ಮಿಕ ವಾತಾವರಣ ಕರ್ಕಿಯವರ ಜೀವನ ಪ್ರವಾಹವನ್ನೇ ಬದಲಿಸಿತು. ಶ್ರೀ ಮ. ನಿ. ಪ್ರ. ಮೃತ್ಯುಂಜಯಪ್ಪಗಳ ತೇಜೋಮಯ ವ್ಯಕ್ತಿತ್ವದ ಪ್ರಭಾವಕ್ಕೆ ಒಳಗಾದರು. ಈ ಮಾತಿಗೆ ಶ್ರೀ ಮೃತ್ಯುಂಜಯಪ್ಪಗಳನ್ನು ಶ್ರೀ ಮುರುಘಾಮಠವನ್ನು ಕುರಿತಾಗಿ ರಚಿಸಿದ ಅನೇಕ ಕವನಗಳೇ ನಿತಾಂತ ನಿದರ್ಶನ. ಅದೇ ಸಮಯದಲ್ಲಿ ಅರಭಾವಿಯ ಪುಣ್ಯಾರಣ್ಯವಾದ ದುರದುಂಡೀಶ್ವರ ಪ್ರಭಾವದಿಂದ, ಅಲ್ಲಿ ಉಂಡ ಅಂಬಲಿಯ ರುಚಿಯಿಂದ ಸ್ಫೂರ್ತಿ ಪಡೆದ ಲೇಖನವೊಂದು ಬರೆದರು. ಅದೇ ಅವರ ಪ್ರಪ್ರಥಮ ಗದ್ಯ ಲೇಖನ (೧೯೩೦-೩೧). ಹಾಗೆಯೇ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿ ಕನ್ನಡ ಮತ್ತು ಇಂಗ್ಲಿಷ್ ತೆಗೆದುಕೊಂಡು ಮುಂಬಯಿ ವಿಶ್ವವಿದ್ಯಾಲಯದ ಎಂ. ಎ. ಪದವಿ ಗಳಿಸಿದರು (೧೯೩೩). ಅನಂತರ ಕಾರವಾರದ ಕಡಲ ತೀರ ಕೈಮಾಡಿ ಕರೆಯಿತು. ಅಲ್ಲಿಯ ಸರಕಾರಿ ಮಾಧ್ಯಮಿಕ ಶಾಲೆಯ ಶಿಕ್ಷಕರಾಗಿ ಸೇವೆ ಸಲ್ಲಿಸುವ ಸದವಕಾಶ ಲಭಿಸಿತು (೧೯೩೩-೩೭). ಆ ಸಂದರ್ಭದಲ್ಲಿಯೇ ಕವಿ ರವೀಂದ್ರರು ಕಂಡ ಕಾರವಾರದ ಕಡಲ ತೀರವನ್ನು ಕುರಿತು ಗೀತ ರಚಿಸಿದರು. ಅವರ ಕೆಲವು ಸಾಲುಗಳಿವು:

"ಕಂಡೆ ನಾನು ಕವಿಯ
ಹೊಂಗನಸು
ಹರಡಿದಂಥ ರವಿಯ

ಕನ್ನಡ ನಾಡಿನ ಕಡಲ ತೀರದಲಿ
ಸಂಜೆ ಹೊಳೆಯುವ ಮುಳುಗುವಾಗಲಿ
ಚಿತ್ತದ ನಭದೊಳು ರಕ್ತದ ಪ್ರಭೆಯನು
ಚಿಮ್ಮಿದ ಬೆಳಗು ಅದು
ಏನು ಶಾಂತಿಯೊ!—ಏನು ಕಾಂತಿಯೊ!
ವಾತಾವರಣದೊಳು
ಕಾರವಾರದಾ ಕಡಲ ತೀರದೊಳು
ಕಡಲ ನೀಲ ತೆರೆ ನೆಲದ ಪಚ್ಚೆದೆಳೆ”

ಅನಂತರ ತಾವು ಕಲಿತ ವಿದ್ಯಾಸಂಸ್ಥೆ ಜಿ. ಎ. ಹೈಸ್ಕೂಲ್‌ನಲ್ಲಿಯೇ ಸೇವೆ ಸಲ್ಲಿಸುವ ಭಾಗ್ಯ ಸಹಜವಾಗಿ ಒದಗಿಬಂತು. ಅಲ್ಲಿ ೧೯೩೭ ರಿಂದ ೧೯೪೬ರ ವರೆಗೆ ಸೇವೆ ಸಲ್ಲಿಸಿದರು. ಲಿಂಗರಾಜ ಕಾಲೇಜಿನಲ್ಲಿ 'ಕನ್ನಡ' ಮತ್ತು 'ಶಿಕ್ಷಣ' ವಿಷಯಗಳ ಪ್ರಾಧ್ಯಾಪಕರಾಗಿ ನಿಯುಕ್ತರಾದರು. ಇದು ಅವರ ಜೀವನದಲ್ಲಿ ಸಾಹಿತ್ಯದ ವಿನೂತನ ಅಧ್ಯಾಯ, ಪರಿವರ್ತನ. ಕಾರಣ ಸುಪ್ರಸಿದ್ಧ ಕನ್ನಡ ಭಾಷಾತಜ್ಞರಾದ ಕೆ. ಜಿ. ಕುಂದಣಗಾರರ ಮಾರ್ಗದರ್ಶನದಲ್ಲಿ 'ಛಂದೋವಿಕಾಸ' ಮಹಾಪ್ರಬಂಧವನ್ನು ಬರೆದು ೧೯೪೯ರಲ್ಲಿ ಪಿ.ಎಚ್.ಡಿ. ಪದವಿ ಪಡೆದರು. ಇವರ ಪಾಂಡಿತ್ಯ ಪ್ರತಿಭೆಯ ಸದುಪಯೋಗವಾಗಲು ಅದೇ ಆಗ ಹುಬ್ಬಳ್ಳಿಯಲ್ಲಿ ಪ್ರಾರಂಭವಾದ ಶ್ರೀ ಕಾಡಸಿದ್ಧೇಶ್ವರ ಕಲಾ ಮಹಾವಿದ್ಯಾಲಯ ದಕ್ಷ ಕೆ.ಎಲ್.ಇ. ಸಂಸ್ಥೆಯವರು ಇವರನ್ನು ಕರೆಸಿದರು. ಕನ್ನಡ ಪ್ರಾಧ್ಯಾಪಕರಾಗಿ ಸ್ಮರಣೀಯ ಸೇವೆ ಸಲ್ಲಿಸಿದರು. ಅದೇ ಮಹಾವಿದ್ಯಾಲಯದ ಪ್ರಾಚಾರ್ಯರಾಗಿ ಸಂಸ್ಥೆಯ ಪ್ರಗತಿಪರ ಬೆಳವಣಿಗೆಗೆ ಕಾರಣರಾದರು. ಕನ್ನಡ ಕಲಿಯಲು ಬಂದ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಮಾಡಿದರು. ಅಂತೆಯೇ ಅವರ ಕೈಯಲ್ಲಿ ಕಲಿತ ಸಾವಿರಾರು ಕನ್ನಡ ವಿದ್ಯಾರ್ಥಿಗಳು ಇಂದಿಗೂ ಅವರನು ನೆನೆಸುತ್ತಾರೆ. ಉದಯೋನ್ಮುಖ ಕವಿಗಳನ್ನು ಆತ್ಮೀಯತೆಯಿಂದ ಕಂಡು ಅವರ ಕವನಗಳನ್ನು ತಿದ್ದಿ ತೀಡಿ ಪತ್ರಿಕೆಗಳಿಗೆ ಪ್ರಕಟನೆಗೆ ಪ್ರೋತ್ಸಾಹನೆ ನೀಡಿದರು. ಈಗಲೂ ನೀಡುತ್ತಲೇ ಇದ್ದಾರೆ. ನಾನು ಸಂಪಾದಿಸಿದ 'ಮೃತ್ಯುಂಜಯ' ಕವನ ಸಂಕಲನಕ್ಕೆ ಸುಂದರವಾದ ಮುನ್ನುಡಿಯ ಮುಕುಟವನ್ನಿಟ್ಟು ಅಲಂಕರಿಸಿದ್ದಾರೆ. ಇವರ ಉದಾತ್ತ ಮನೋಧರ್ಮವನ್ನು ಕಣ್ಣಾರೆ ಕಂಡುದುದು ಆಗಲೇ. ತಮ್ಮ ಬಳಿಯಲ್ಲಿಯೇ ಕುಳ್ಳಿರಿಸಿಕೊಂಡು ಮುನ್ನುಡಿಯನ್ನು ಕೂಡಲೇ ಬರೆದು ಕೊಟ್ಟರು. ಹೀಗೆ ಅನೇಕ ಕವಿಗಳ ಕವನ ಸಂಕಲನಗಳಿಗೆ ಇವರು ಮುನ್ನುಡಿ ಬರೆದು ಉತ್ತೇಜಿಸಿದ್ದಾರೆ. ೧೯೭೭ರಲ್ಲಿ ಸಂಸ್ಥೆಯ ಸೇವೆಯಿಂದ ನಿವೃತ್ತರಾದರೂ

ವಿಶ್ರಾಂತಿ ಪಡೆಯಲಿಲ್ಲ. ಇವರ ಮಾಗಿದ ಅನುಭವದ ಲಾಭವನ್ನು ಅದೇ ಆರಂಭಗೊಂಡ ನರೇಗಲ್ಲಿನ ಅನ್ನದಾನೇಶ್ವರ ಮಹಾವಿದ್ಯಾಲಯು ಪಡೆದು ಕೊಂಡಿತು. ಅವರ ಪ್ರಾಚಾರ್ಯರಾಗಿ ಸಂಸ್ಥೆಯ ಬೆಳವಣಿಗೆಗೆ ಭದ್ರಬುನಾದಿ ಹಾಕಿದರು. ಮೂರು ಸಾವಿರಮಠದ ಮಹಿಳಾ ವಿದ್ಯಾಲಯದ ಪ್ರಾಚಾರ್ಯರಾಗಿ ೧೯೬೭ ರಿಂದ ೧೯೬೯ರ ವರೆಗೆ ದಕ್ಷತೆಯಿಂದ ಕಾರ್ಯಮಾಡಿ ಈ ಸಂಸ್ಥೆಯ ಪ್ರಗತಿಗೆ ನಾಂದಿ ಹಾಕಿದರು. ಸೂಕ್ತ ಮಾರ್ಗದರ್ಶನಮಾಡಿದರು. ಅವೆರಡು ಸಂಸ್ಥೆಗಳು ಇಂದು ಹೆಮ್ಮರವಾಗಿ ಬೆಳೆದಿವೆ. ಸುಮಧುರ ಫಲವನ್ನೀಯುತ್ತಿವೆ. ನಾಡಿನಲ್ಲಿ ಖ್ಯಾತಿಯನ್ನು ಪಡೆದಿವೆ. ಯು.ಜಿ.ಸಿ.ಯವರೂ ಇವರ ಪಾಂಡಿತ್ಯದ ಲಾಭವನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠಕ್ಕೆ ಕೊಟ್ಟಿತು (೧೯೬೯-೧೯೭೩). ನಾಲ್ಕುವರುಷ ಅಲ್ಲಿ ಎಂ.ಎ. ವಿದ್ಯಾರ್ಥಿಗಳಿಗೆ ಛಂದಸ್ಸು ಕಲಿಸಿದರು. ತಮ್ಮ ಅನುಭವದ ಬುತ್ತಿಯನ್ನು ಕನ್ನಡ ವಿದ್ಯಾರ್ಥಿ ಗಳಿಗೆ ಹೃದಯಾರೆ ಹಂಚಿದರು. ಹಾಗೆಯೇ ೧೯೭೦ರಲ್ಲಿ ಕೇಂದ್ರ ಸರಕಾರದ ಸಾಂಸ್ಕೃತಿಕ ವಿನಿಮಯದ ಯೋಜನೆಯಂತೆ ಇವರನ್ನು ರಷ್ಯ ದೇಶಗಳ ಸಂದರ್ಶನ ಪಡೆಯಲು ಕಳಿಸಲಾಯಿತು. ಅಲ್ಲಿ ಅವರು ಭಾರತೀಯ ಸಂಸ್ಕೃತಿಯ ಹಿರಿಮೆ-ಗರಿಮೆಯನ್ನು ಮನವರಿಕೆಮಾಡಿಕೊಟ್ಟರು. ಅಲ್ಲಿಯ ಸಾಂಸ್ಕೃತಿಕ ಪರಂಪರೆಯ ಪರಿಚಯ ಮಾಡಿಕೊಂಡರು.

ಸಾಹಿತ್ಯ ಸೇವೆ

ಈಗಾಗಲೇ ಇವರ ಹನ್ನೊಂದು ಕೃತಿ ಕುಸುಮಗಳು ಅರಳಿವೆ. ತಮ್ಮ ಸೌಗಂಧವನ್ನು ಸೂಸಿವೆ. ಇವುಗಳಲ್ಲಿ ಏಳು ಕವನಸಂಕಲನಗಳು. ಅವುಗಳಲ್ಲಿ ಎರಡು ಮಕ್ಕಳ ಕವನ ಸಂಕಲನಗಳೂ ಸೇರಿವೆ. ಮಕ್ಕಳ ಮನೋವಿಕಾಸಕ್ಕಾಗಿ ಬರೆದ ಆ ಹಾಡುಗಳು ಬಹು ಮನೋಹರವಾಗಿವೆ. 'ನಕ್ಷತ್ರಗಾನ' 'ಭಾವತೀರ್ಥ'ಗಳಲ್ಲಿ ಪ್ರಕಟವಾದ ಪ್ರತಿಭೆ ಗರಿಗೆದರಿ 'ಗೀತ ಗೌರವ'ದಲ್ಲಿ ಪರಿಪಕ್ವತೆ ಪಡೆದಿದೆ. ಅವರ ಕಥನಕವನಗಳಂತೂ ಅತ್ಯಂತ ಸುಂದರವಾಗಿವೆ. ಬಂಧುರವಾಗಿವೆ. ಲಯಬದ್ಧವಾದ ಗೀತಗಳು ಕಿವಿಗಿಂಪಾಗಿವೆ. ಕಾವ್ಯಪ್ರೇಮಿ ಗಳ ಮನವನ್ನು ಆಕರ್ಷಿಸಿವೆ. ಡಾ. ದ. ರಾ. ಬೇಂದ್ರೆಯವರ ಮಾತಿನಲ್ಲಿ ಹೇಳುವದಾದರೆ "ಹಿರಿಯ ಕವಿ ಕುವೆಂಪು ಅವರಂತೆಯೆ ನಿಮ್ಮಲ್ಲಿಯೂ ದುಃಖ ಮಾನವ ಸುಖದ ಸಂವೇದನೆ ಇದೆ. ಅವರ ತಂತಿ ಮೀಟಿದಾಗ ಹೊರಟ ನಾದ ಆವರ್ಣನೀಯವಾಗಿರುತ್ತದೆ....ನೋಡಗಳ ಹಾಡು, ಹಚ್ಚೇವು ಕನ್ನಡದ ದೀಪ

—ಇವುಗಳ ಧಾಟಿಯು ಗತ್ತು 'ಜೀವ ಜಗ' 'ಗರ್ಭಸ್ಥ ಶಿಶು'—ಇವುಗಳ ವಿಚಾರ ವಿಲಾಸ ಅನೇಕ ಗೀತಗಳ ಸುಕುಮಾರ ಶೈಲಿ ನನ್ನ ಮನ ಮೆಚ್ಚಿಸಿದುವು. ಡಾ|| ರಂ. ಶ್ರೀ ಮುಗಳಿಯವರ ಅಭಿಪ್ರಾಯಗಳಿವು. 'ಡಿ.ಎಸ್. ಕರ್ಕಿ ಅವರು ಹಲವಾರು ವರುಷಗಳಿಂದ ಬರೆಯುತ್ತಿರುವ ಕವನಗಳು 'ನಕ್ಷತ್ರಗಾನ', 'ಭಾವತೀರ್ಥ', 'ತನನತೋಂ' ಎಂಬ ಹೆಸರಿನಲ್ಲಿ ಸಂಕಲಿತವಾಗಿವೆ. ಪ್ರಕೃತಿ ಮತ್ತು ಜೀವನದ ಸಾತ್ವಿಕ ಸೌಂದರ್ಯವು ಅವರ ಮನಸ್ಸನ್ನು ಸೆರೆ ಹಿಡಿದಿವೆ. ಪ್ರತಿಭೆಯು ಅಚಿಂತ್ಯ ಲೀಲೆ ಬೆರಗುಗೊಳಿಸಿವೆ. 'ಜೀವತಂತು', 'ವೀಣೆ', 'ಕರೆವನೆ ಅವ', 'ದಿವ್ಯಜ್ಯೋತಿ'—ಇವು ನಕ್ಷತ್ರಗಾನದ ಹೃದಯಸ್ಪರ್ಶಿಯಾದ ಕವನಗಳು. ಕನ್ನಡ ನಾಡಿನ ಹಲವು ಪುಣ್ಯಕ್ಷೇತ್ರಗಳನ್ನೂ ಕಲಾಕೃತಿಗಳನ್ನೂ ಕಂಡು ಉಕ್ಕಿದ ಭಾವನೆ-ಕಲ್ಪನೆಗಳನ್ನೂ ಅವರು ಭಾವತೀರ್ಥದಲ್ಲಿ ಹರಿಸಿದ್ದಾರೆ. ಇದರಲ್ಲಿ ಆರು ಪ್ರವಾಹವಾಗಿ ಹರಿದು ತುಂಗಭದ್ರೆಯ ಹಾಡು 'ಗೋಕರ್ಣ ತೀರ' 'ಗೊಮ್ಮಟ ಶಿಲ್ಪಿಗೆ' 'ಗೋಲ ಗುಮ್ಮಟ' ಇವು ಮೆಚ್ಚತಕ್ಕವು. 'ಭಾವತೀರ್ಥ' ಕುರಿತು ಗೋಕಾಕರ ನುಡಿಮುತ್ತುಗಳಿವು. 'ಮಲೆನಾಡಿನ ಗಿರಿನಿರ್ಝರದಂತೆಯೆ ಸ್ವಚ್ಛಂದವಾಗಿ, ಪವಿತ್ರವಾಗಿ, ಪಾವನವಾಗಿ ಕಾವ್ಯದ ಸೆಲೆಯು ಹೊರಹೊಮ್ಮಿದೆ. ಅದರ ಮಂಜುಳಗಾನಕ್ಕೆ ಮೋಹಿಸದವರು ವಿರಳ. ಈ ಹೊನಲಿನಲ್ಲಿ ಮೀಯುವುದು ಆರೋಗ್ಯಕರ, ಆಹ್ಲಾದಕರ. ಈ ಭಾವತೀರ್ಥದಲ್ಲಿ ಶುದ್ಧ ಹೃದಯದ ಸಂಸ್ಕಾರವಿದೆ, ಪವಿತ್ರ ಚಿತ್ರದ ಪ್ರಸನ್ನತೆಯಿದೆ." ಪ್ರಬುದ್ಧ ಕರ್ನಾಟಕದ ವಿಮರ್ಶೆಯಿದು: 'ಇಲ್ಲಿನ ಇಪ್ಪತ್ತು ಕವನಗಳು ಕನ್ನಡ ನಾಡಿನ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿದಾಗ ಹೊಮ್ಮಿಬಂದುದಾಗಿದೆ. ಶಿಲೆಯಲ್ಲಿ ಕಲೆಯಾಗಿ ಅರಳಿರುವ ಕನ್ನಡಿಗರ ಜೀವನ ಮಂದಾರದ ಕಂಪನ್ನು ಅವರು ತಮ್ಮ ನುಡಿಗಳಲ್ಲಿ ಸೆರೆಹಿಡಿಯಲು ಪ್ರಯತ್ನಿಸಿದ್ದಾರೆ. ಇಲ್ಲಿ ಸೌಂದರ್ಯ ತೀರ್ಥವೂ ಕಾವ್ಯಪ್ರಸಾದವೂ ಧಾರಾಳವಾಗಿ ದೊರೆಯುವುವೆಂದು ಹೇಳಬೇಕು." ಹೀಗೆ ನಮ್ಮ ನಾಡಿನ ಚೆಲುವು ಚಾರಿತ್ರ್ಯ ಬಂಧುರ ಶಿಲ್ಪ, ಸೌಂದರ್ಯಗಳನ್ನು ಚಿತ್ರಕ್ಕೆ ಎತ್ತಿ ಹಿಡಿಯುವ ಮಹತ್ವಪೂರ್ಣವಾದ ಸ್ಥಳಗಳಲ್ಲಿ ಕೆಲವನ್ನು ರಸಭಾವದೊಡನೆ ಛಂದದಲ್ಲಿ ಸುಳುಹುಗಾಣಿಸುವ ಗೀತ ಸಂಗ್ರಹ, ಬನವಾಸಿ, ಬದಾಮಿ, ಐಹೊಳೆ, ಪಟ್ಟದಕಲ್ಲು, ಶ್ರವಣಬೆಳಗೊಳ, ಕೂಡಲಸಂಗಮ, ಬೇಲೂರು, ಹಳೇಬೀಡು, ಹಂಪೆ, ವಿಜಯನಗರ ಇವೇ ಮೊದಲಾದ ಕನ್ನಡಿಗರ ಪುಣ್ಯಕ್ಷೇತ್ರಗಳ ಚೆಲುವು ಸಿಲವುಗಳು ಭಾವತೀರ್ಥದಲ್ಲಿ ಮೈದೋರಲು ಹವಣಿಸಿವೆ. 'ಶಿಲೆಸೀಲದಲ್ಲಿ ತಾ ಲೀನವಾಗಿ ಹೋದ ಬಹು ಮೂರ ದೂರ' ಎಂಬ ಕವನ

ವಂತೂ ಓದುಗರ ಕಣ್ಣಲ್ಲಿ ನೀರು ತರಿಸುವಂತಿದೆ. ಇದೊಂದು ಅತ್ಯಂತ ಹೃದಯ ವಿದ್ರಾವಕ ಶೋಕಗೀತೆ. ಅವರ ಹೃದಯ ಶ್ರೀಮಂತಿಕೆಗೆ ಸಾಕ್ಷಿಯಾಗಿದೆ. 'ಗೀತಗೌರವ' ಕಥನಕವನ ಸಂಕಲನ ಷಷ್ಟ್ಯಬ್ಧಿ ಸತ್ಕಾರ ಸಮಿತಿಯ ಪರವಾಗಿ ಪ್ರಕಟಗೊಂಡಿದೆ(೧೯೬೯). ಘನತೆಗೌರವಗಳನ್ನು ಪಡೆದ ಚಾರಿತ್ರಿಕ ವ್ಯಕ್ತಿಗಳಲ್ಲಿ ಕೆಲವರು ಈ ಕವನಗಳ ಕೇಂದ್ರಮೂರ್ತಿಗಳು. ಇದರಲ್ಲಿ ಹದಿನೆಂಟು ಕವನಗಳಿವೆ. ಒಂದೊಂದು ವಿಶಿಷ್ಟ ಸನ್ನಿವೇಶದಲ್ಲಿ ಒಬ್ಬೊಬ್ಬರು ಬೆಳಗಿದ ವಿಶಿಷ್ಟವಾದ ಸತ್ವಗುಣ ಈ ಗೀತಗಳ ರಚನೆಗೆ ಪ್ರೇರಣೆಯಾಗಿ ಪರಿಣಮಿಸಿತು ಎಂದಿದ್ದಾರೆ ಕರ್ಣಯವರು. ಬುದ್ಧದೇವ, ಬಸವಣ್ಣ, ಮಹಾತ್ಮಾಗಾಂಧಿ, ನೆಹರು ಇವರು ಇಲ್ಲಿ ಬಾಳಿನ ಬೆಳಕಾಗಿ ನಿಂತ ಮಹಾಪುರುಷರಲ್ಲಿ ಮುಖ್ಯರು. ಸ್ತ್ರೀ ಸ್ಫೂರ್ತಿಯ ಮೂರ್ತಿ, ಯಶೋಧರಾ ಸುಜಾತೆ, ನೀಲಾಂಬಿಕೆ, ಲಕ್ಷ್ಮಮ್ಮ, ದಾನಚಿಂತಾಮಣಿ, ಅತ್ತಿಮಬ್ಬೆ ಇವರೆಲ್ಲ ಸಚ್ಚಾರಿತ್ರ್ಯ ಚಿಂತಾಮಣಿಗಳು. ಇವುಗಳನ್ನು ಓದುವಾಗ ಒಂದು ಸೊಗಸಾದರೆ, ಹಾಡಿದರೆ ಇನ್ನೊಂದು ಬಗೆಯ ಸೊಬಗನ್ನು ಅನುಭವಿಸಬಹುದು. ಆಗಾಗ ಆಕಾಶವಾಣಿಯ ಮುಖಾಂತರ ತರಂಗ ತರಂಗವಾಗಿ ಕೇಳಿಬರುವ ಇವರ ಭಾವಗೀತೆಗಳನ್ನು ಮೆಚ್ಚದ ರಸಿಕರೇ ಇಲ್ಲ. 'ನಮನ' ಮನ ಮಿಡಿದು ದೇವನನ್ನು ಕರೆದ ಕವನಗಳೇ ಇಲ್ಲಿ ಹೆಚ್ಚು ಕಾಣಿಸುತ್ತವೆ. ಅನುಭವ ಪರಿಪೂರ್ಣವಾಗಿದೆ. ಪ್ರತಿಯೊಂದು ಶಬ್ದದಲ್ಲಿಯೂ ಭಾವಸೌಷ್ಠವ ಹೊರಸೂಸುತ್ತಿದೆ. ಕವಿ ಹೃದಯವನ್ನು ತೆರೆದು ಜಗದೀಶನಲ್ಲಿ ಮೊರೆ ಇಟ್ಟಿದ್ದಾರೆಂಬ 'ಮಾಜಗಂ' ಅವರ ಆಶೀರ್ವಾಣಿ ಯಥಾರ್ಥವೇ ಆಗಿದೆ.

"ಮನವೆಂಬ ಮನೆಗೆ ದೊರೆ ನೀನೆ ಬಾರಾ
ನೆನೆನೆನೆದ ನಮಗೆ ಸಿರಿಮೊಗವ ತೋರಾ
ಸವಿ ನಮಗೆ ನೀನೆ, ಛವಿ ನಮಗೆ ನೀನೆ
ಈ ಬಾಳ ತುಂಬ ಬರೆ ನಿನ್ನ ಬಿಂಬ"

ಸುಂದರ ಮಧುರ ಸ್ವರೂಪದ ದೇವನನ್ನು ಅದೆಷ್ಟು ಕರೆದರೂ ಕವಿಗೆ ತೃಪ್ತಿಯಿಲ್ಲ. ಅವರ ಕವನಗಳಲ್ಲಿ ಪ್ರಕ್ಷೋಭ—ಪ್ರಕೋಪ ಎಲ್ಲಿಯೂ ಕಾಣುವುದಿಲ್ಲ. ನೋವನುಂಡ ಜೀವಭಾವ ಸುಖವನ್ನೇ ಹಾರೈಸಿದೆ. ನಲಿವನ್ನೇ ನೀಡಿದೆ, ಮನಾನಂದಗೊಳಿಸಿದೆ. ರಮ್ಯ ಪ್ರಕೃತಿ ಘನಸಂಸ್ಕೃತಿಯನ್ನೇ ಎತ್ತಿಹಿಡಿದಿದೆ. ಜೋಳದ ಬೆಳೆಯಲ್ಲಿ, ಕುಂಬಳ ಬಳ್ಳಿಯಲ್ಲಿ, ಹಳ್ಳಿಯ ಹೂಗಳಲ್ಲಿ ಕವಿಹೃದಯ ಹಿಗ್ಗಿದೆ. 'ತನನತೋಂ' 'ಬಣ್ಣದ ಚೆಂಡು' ಮಕ್ಕಳ ಕವನಗಳನ್ನು ಹೊಸೆಯು

ವವರಲ್ಲಿ ಪರಿಣತರು, ಸಿದ್ಧಹಸ್ತರು ಎಂಬುದಕ್ಕೆ ನಿದರ್ಶನವಾಗಿವೆ. ಕುತೂಹಲ ಕೆರಳುವಂತೆ ಮಕ್ಕಳ ಮನ ಅರಳಿಸಿದ್ದಾರೆ.

“ನಾಡ ಬೆಡಗ
ಹಾಡುಹುಡಗ
ತನನ ತನನತೋಂ
ಕನ್ನಡದಲಿ
ನುಡಿಯಾಡಲಿ
ತನನ ತನನತೋಂ”

ಸ್ವಾತಂತ್ರ್ಯದ ಅರುಣೋದಯದ ಹೊಂಬೆಳಗಿನಲ್ಲಿ ರಾಷ್ಟ್ರಾಭಿಮಾನ ಮೂಡಿಸುವ ಈ ಗೀತೆಗಳು ಬಾಲಕರಿಗೆ ಚೇತನದ ಚಿಲುಮೆಯಾಗಿವೆ,

“ಎಲ್ಲ ದೇವರಲ್ಲಿ ನಮಗೆ
ನಾಡದೇವಿ ಹಿರಿಯಳು
ಅದಕೆ ನಮ್ಮ ಹಿರಿಯ ತಾಯಿ
ಮಮತೆಯಿಂದ ಪೊರೆವಳು”

‘ಬಣ್ಣದ ಚೆಂಡು’ ಚೆಂಡನ್ನು ಜೀವನಕ್ಕೆ ಹೋಲಿಸಿದ ರೀತಿ—ತುಂಬಾ ಮೆಚ್ಚುವಂಥದು.

“ಅಹಹಾ ರಬ್ಬರ ಚೆಂಡು
ಗಾಳಿಯ ಸುಂಡು
ಪುಟಿಯುವ ಚೆಂಡು
ಕುಣಿಸುವದು ಬಲು ದುಂಡು
ಕೊನೆಯಲ್ಲಿ ಒಂದು
ದಿನ ಪುಸ್ಸೆಂದು
ಆಟವ ಮುಗಿಸುವ ಚೆಂಡು”

ನಾಲ್ಕಿ ಶ್ರೀಯ ನೋಟ ಇವರ ಗದ್ಯ ಶೈಲಿಗೆ ಪ್ರಸಿದ್ಧವಾಗಿದೆ. ‘ಛಂದೋವಿಕಾಸ’ ಅವರ ದೀರ್ಘವಾದ ಸಾರಸ್ವತ ಪ್ರಪಂಚದ ಸುಮಧುರ ಫಲ. ಚಿರಂತನ ಕೃತಿ. ಛಂದಶ್ಶಾಸ್ತ್ರಾಭ್ಯಾಸಿಗಳಿಗೆ ಕೈಪಿಡಿ, ಕೈಗನ್ನಡಿ, ವೈಯಾಕರಣಿ ನಾಗವರ್ಮನನ್ನು ನೆನಪಿಗೆ ತರುವಂತಿದೆ. ‘ಮಕ್ಕಳ ಶಿಕ್ಷಣ’ ಒಂದು ಚಿಕ್ಕದಾದರು ಸೊಗಸಾದ ಚೊಕ್ಕ ಕೃತಿ. ಮಕ್ಕಳ ಶಿಕ್ಷಣದ ಬಗೆಗೆ ವಿವೇಚನೆ ಇದೆ. ಅದು ಈಗಾಗಲೇ ಹಲವಾರು ಆವೃತ್ತಿ ಕಂಡಿದೆ, ಜನಪ್ರಿಯವಾಗಿದೆ.

ಪ್ರಶಸ್ತಿ, ಪುರಸ್ಕಾರ, ಗೌರವ

ಇವರ ಸೇವೆಯನ್ನು ಮನಗಂಡು ೧೯೭೨ರಲ್ಲಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ರಾಜ್ಯಪ್ರಶಸ್ತಿ ನೀಡಿ ಗೌರವಿಸಿದೆ. ಹುಬ್ಬಳ್ಳಿಯ ನಾಗರಿಕರು ೧೯೬೮ರಲ್ಲಿ ಷಷ್ಟ್ಯಬ್ಧಿ ಸಮಾರಂಭ ಏರ್ಪಡಿಸಿ 'ಗೀತಗೌರವ' ಕವನ ಸಂಕಲನ ಬೆಳಕಿಗೆ ತಂದಿದೆ. ಜಾಗೃತ ಪ್ರಕಾಶನದವರು ರಾಜ್ಯೋತ್ಸವದ ಶುಭದಿನದಿಂದ 'ಕಾವ್ಯರ್ಷಿ' ಗೌರವ ಸಂಪುಟ ಅರ್ಪಿಸಿ ತನ್ನ ಕೃತಜ್ಞತೆ ಅರ್ಪಿಸಿದೆ. ರಾಜ್ಯ ಸರಕಾರದವರು ೨೫೦ ರೂ.ಗಳ ಮಾಸಿಕ ಗೌರವಧನ ನೀಡುತ್ತಿದೆ. ಇತ್ತೀಚೆ ಅವರ ಹಿರಿಯ ಮಗ ಚಿ. ರಾಜಶೇಖರನ ಆಕಸ್ಮಿಕ ಅಗಲುವಿಕೆಯಿಂದ ಅವರ ಮನಸ್ಸಿಗೆ ನೋವಾಗಿದೆ. ಚಿ. ರಾಜಶೇಖರ ತಂದೆಯಂತೆ ಭಾವಜೀವಿ, ಉತ್ತಮ ಕವಿಯಾಗಿದ್ದು, ಅದು ಡಾ. ಕರ್ಕಿಯವರಿಗೆ ತೃಪ್ತಿ ತಂದಿತ್ತು. ಆದರೂ ಅವರ ಸ್ಥಿತಪ್ರಜ್ಞೆಯನ್ನು ಮೆಚ್ಚಬೇಕಾದುದು. ಇದೀಗ ೭೦ರಲ್ಲಿ ಪಾದಾರ್ಪಣೆ ಮಾಡುತ್ತಿರುವ ಡಾ। ಡಿ. ಎಸ್. ಕರ್ಕಿಯವರು ನೂರು ಕಾಲ ಬದುಕಿ ಕನ್ನಡ ಸಾಹಿತ್ಯ ಸರಸ್ವತಿಯ ಅಭಿಮಾನಿಗಳಿಗೆ ಇನ್ನೂ ಹಲವಾರು ಕವನ ಸಂಕಲನಗಳನ್ನು ಅರ್ಪಿಸುವಂತಾಗಲೆಂದು ಹಾರೈಸುತ್ತೇನೆ.

ಎಸ್. ಎಸ್. ಭೂಸರಡ್ಡಿ



ಆಸೆ, ನಿರಾಸೆ ಎರಡೂ ಮಾನವನ ಯುಗ ವೈರಿಗಳು. ಆಸೆಯಿಂದ ದಾನವತನ ಹೆಚ್ಚುತ್ತದೆ. ನಿರಾಸೆಯಿಂದ ದುಷ್ಕರ್ಮ ಹೆಚ್ಚುತ್ತದೆ. ಆಶಾರಹಿತಭಾವ, ನಿರಾಶಾರಹಿತ ಸ್ಫೂರ್ತಿ ಇವೆರಡರ ಸಂಗಮದಿಂದ ಮನುಷ್ಯ ಬಾಳನ್ನು ರೂಪಿಸಿಕೊಳ್ಳಬೇಕು.

—ರಾಜಾಜಿ

ಪುಸ್ತಕ ವಿಮರ್ಶೆ

ನಾವು ಸರ್ವ ಸ್ವ-ತಂತ್ರರು — ಕವಿಗಳು: ಎಂ. ಡಿ. ಗೋಗೇರಿ; ಪ್ರಕಾಶಕರು: ಸಾಹಿತ್ಯ ಸೌಧ ಪ್ರಕಾಶನ, ಹುಬ್ಬಳ್ಳಿ; ಬೆಲೆ: ಐದು ರೂಪಾಯಿ, ಪುಟಗಳು: ೪೦.

ಇದು ಉದಯೋನ್ಮುಖ ಉತ್ಸಾಹಿ ತರುಣ ಕವಿ ಗೋಗೇರಿಯವರ ಐದನೆಯ ಕವನ ಸಂಕಲನ. ಇದರಲ್ಲಿ ೨೫ ನವ್ಯ ಕವನಗಳಿವೆ. ರಮ್ಯದಿಂದ ನವ್ಯದಕಡೆಗೆ ಕವಿ ಸಾಗಿರುವುದು ಈ ಕವನ ಸಂಕಲನ ವೈಶಿಷ್ಟ್ಯ. ಸಮಕಾಲೀನ ಜ್ವಲಂತ ಸಮಸ್ಯೆಗಳನ್ನು ಎತ್ತಿಕೊಂಡು ಕವಿಯು ಇಲ್ಲಿ ತನ್ನ ಅನಿಸಿಕೆಗಳನ್ನು ಪ್ರಾಮಾಣಿಕವಾಗಿ ಅಭಿವ್ಯಕ್ತಮಾಡುವ ಸಾಹಸ ಮಾಡಿದ್ದಾನೆ. ಇತ್ತೀಚೆಗೆ ಮದ್ಯಪಾನದ ಹಾವಳಿ ಹೆಚ್ಚಾಗಿದೆ. ಗುಡಿಗುಂಡಾರಗಳ ಬದಿಯಲ್ಲಿ ಶಾಲೆ ಕಾಲೇಜುಗಳ ಸಮೀಪದಲ್ಲಿಯೇ ಮದ್ಯದಂಗಡಿಗಳು ಪ್ರಾರಂಭವಾಗಿವೆ. ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ತತ್ವಗಳನ್ನು ವೇದಿಕೆಯ ಮೇಲೆ ಮನಬಂದಂತೆ ಹೇಳುವವರೇ ಬ್ರ್ಯಾಂದಿ, ವ್ಹಿಸ್ಕಿ ಕುಡಿದು ಕುಪ್ಪಳಿಸುತ್ತಿರುವ ಸನ್ನಿವೇಶಗಳನ್ನು ಕವಿಯು ಕಣ್ಣಾರೆ ಕಂಡಿದ್ದಾನೆ. ಅಂತೆಯೇ ಆತನ ಹೃದಯದಲ್ಲಿ ಸಾತ್ವಿಕ ಕೋಪ ಭುಗಿಲೆದ್ದು ಕವಿವಾಣಿ ಹೀಗೆ ಮಿಡಿದಿದೆ:

"ಗಾಂಧಿ ತಾತನ ತತ್ವ ಬೋಧಿಪ
ವೀರ ವೇದಿಕೆ ಶೂರರು
ಬ್ರ್ಯಾಂಡಿ ವ್ಹಿಸ್ಕಿ ಕುಸ್ತಾ ಪ್ಪಿಸಾ
ಬೋರ ಸಂಧಿಸು ಜಾರರು" (ಪು ೧)

ಗಾಂಧಿಯ ಹೆಸರು ಹೇಳಿ ಶೋಷಣೆ ಮಾಡುವ ಸಮಯಸಾಧಕರನ್ನು ಕವಿಯು ಚೆನ್ನಾಗಿ ತರಾಟೆಗೆ ತೆಗೆದುಕೊಂಡಿದ್ದಾನೆ. ಮಾತಿನ ಮಾಲೆ ಪೋಣಿಸಿ, ಅಜ್ಞ ಜನತೆಯ ಮತಗಿಟ್ಟಿಸುವ ರಾಜಕಾರಣಿಯನ್ನು ಕುರಿತಾದ ಈ ಕವನದ ಸಾಲುಗಳನ್ನು ನೋಡಿ:

"ಈ ಬಾರಿ
ನಿಮ್ಮ ಊರಿಗೆ ದಾರಿ ಮಾಡಿಸುತ್ತೇನೆ
ಕುಡಿಯುವ ನೀರಿನ ಬಾವಿ ತೋಡಿಸುತ್ತೇನೆ
ಕಾಲುವೆ ಕಡಿಸುತ್ತೇನೆ ಶಾಲೆ ಕೊಡಿಸುತ್ತೇನೆ
ಅಮೂಲ್ಯವಾದ ನಿಮ್ಮ ಮತ ನನಗೇ ನೀಡಿ
ನಿಮ್ಮ ಸೇವೆ ಮಾಡಲು ಅನುವು ಮಾಡಿ
....

ಕಡಿ ಯಂತಹ ನಿಮ್ಮ ಬಡಕಲು ದೇಹ ನೋಡಿ
ಕಂಬನಿ ಮಿಡಿಯುತ್ತಿದೆ
ಈ ಸಲ ನಾನು ಆರಿಸಿ ಬರಲಿ
ನ(ನಿ)ಮ್ಮೆಲ್ಲರ ಕಷ್ಟ ಪರಿಹಾರವಾದಂತೆಯೆ
....

ಹೀಗೆ ಮೋಹಕ ಮಾತುಗಳಿಂದ ಜನತೆಯ ಮತ ಪಡೆದ ಧೂರ್ತ ರಾಜಕಾರಣಿಯ ಚಿತ್ರವನ್ನು ನೋಡಬಹುದು. ಹಾಗೆಯೇ ಇಂದಿನ ಸಾಮಾಜಿಕ ವಿಪರೀತ ವಿಪರ್ಯಾಸ ಜೀವನದ ರೀತಿ ನೀತಿಗಳನ್ನು ವಿಡಂಬಿಸುವ ಕವನಗಳು ಓದುಗರ ಕುತೂಹಲವನ್ನು ಕೆರಳಿಸುತ್ತವೆ; ಕೆನಕಿಸುತ್ತವೆ; ಕೆಲವು ಸಂದರ್ಭದಲ್ಲಿ ವಿಚಾರಪರರನ್ನಾಗಿಯೂ ಮಾಡುತ್ತವೆ. ಇದೀಗ ಪಕ್ಷಾಂತರ, ಮತಾಂತರಗಳ ಹಾವಳಿ ಹೆಚ್ಚಾಗಿದೆ. ಪಕ್ಷಾಂತರಿಗಳನ್ನು ಕುರಿತಾದ ಈ ಸಾಲುಗಳು ಬಹು ಮೋಜಿನದಾಗಿವೆ:

"ಅಲ್ಲಿ ಹಾರುವರು ಇಲ್ಲಿ ಹಾರುವರು
ಎಲ್ಲಿ ಬೇಕಲ್ಲಿ ಹಾರುವರು
ಹಲ್ಲಿಗೇನೂ ದೊರೆಯದಿದ್ದಾಗ
ಮೆಲ್ಲಗೆ ಜಾರುವರು
....

ಸಮಾನತೆ ಇನ್ನು ನಮ್ಮ ಕೈಯಲ್ಲಿ ಬಂದಿದೆ. ಹೇಳುವುದು ವೇದಾಂತ, ತಿನ್ನುವುದು ಬದ್ನಿಕಾಯಿ ಎಂಬಂತಾಗಿದೆ ನಮ್ಮ ಬದುಕು. ಈ ವಿಷಮತೆ ದೂರಾದರೆ ಮತಾಂತರ ತಾನೇ ದೂರಾಗುತ್ತದೆ ಎಂಬ ಕವಿಯ ಮನೋಭಾವ ಕೊನೆಯ ಈ ಸಾಲುಗಳಲ್ಲಿ ಮಡುಗೊಂಡಿದೆ:

"ನಮ್ಮ ಅಡಗಿ ಮನ್ಯಾಗ ನೀವು ಬಂದು ಊಟಮಾಡಲಾರದಕ
ನಿಮ್ಮ ಅಡಗಿ ಮನ್ಯಾಗ ನಮಗ ಕರೆದುಕೊಂಡು ಉಣ್ಣಲಾರದಕ
ಶತಶತಮಾನಗಳಿಂದ ನಡೆದುಕೊಂಡು ಹೋಗುವ ಈ ಅಂತರ
ಕಡಿದು ಹಾಕಲಿಕ್ಕೆ
....
ನಿಲ್ಲ ಬಯಸಿದೇವೆ ಸಮಾಂತರ
ಊರ ಹೊರಗಿನ ಕೇರಿ ಕಿತ್ತು ಹಾಕಿ
ಊರಾಗ ಬರೂವಕ ನಾಲ್ಕು ಮಂದ್ಯಾಗ ಮನುಷ್ಯರಂತೆ"

ಬಿಳಿ ಹೊಲದ ರೈತರು (ಪುಟ ೩೫) ಕವನವಂತೂ ನಮ್ಮ ನಾಡಿನ ನೇಗಲ

ಯೋಗಿಯನ್ನು ಶೋಷಿಸುವ ಸುಲಿಯುವ ಅಧಿಕಾರ ವರ್ಗವನ್ನು ಕುರಿತಾಗಿದೆ. ಕವಿಯ ಸೂಕ್ಷ್ಮ ನಿರೀಕ್ಷಣಾ ಶಕ್ತಿಗೆ ನಿದರ್ಶನ. ಮಾದರಿಗಾಗಿ ಕೆಲವು ಸಾಲುಗಳು:

“ ಪರಪರ ಹರಿಯುವ ಬಿಳಿ ಹೊಲದ ಮೇಲೆ
ನೂರು ಬೆರಳಿನಿಂದ ಚೋಟುರಂಟೆ ಹಿಡಿದು
....
ಪ್ರತಿ ದಿನ ಹತ್ತೂ ಬೆರಳಿನಿಂದ ಎಣಿಸುವಷ್ಟು
ಫಸಲನ್ನು, ಪಡೆಯುವ ಬಿಳಿ ಬಟ್ಟೆಯ ರೈತರೆ,
ನಿಮಗೇನು ಗೊತ್ತು? ಕೆಸರಿನ ಗದ್ದೆಯಲ್ಲಿ ಆರು ಮೊಳದ
ಕಬ್ಬಿಣ ರಂಟೆಯಿಂದ ಊಳುವ ಕಷ್ಟ” (ಪು. ೩೫)

ರೈತನ ಶೋಷಣೆ ಮಾಡುವ ಅಧಿಕಾರಿವರ್ಗದ ದಬ್ಬಾಳಿಕೆಯನ್ನು ಇದಕ್ಕಿಂತಲೂ ಪರಿಣಾಮಕಾರಿಯಾಗಿ ಪ್ರಭಾವಕಾರಿಯಾಗಿ ಹೇಳುವುದು ದುಸ್ತರವೇ ಸರಿ.

ಜಾತೀಯತೆಯ ವಿಷಜ್ವಾಲೆ ಇಂದು ನಮ್ಮ ದೇಶವನ್ನು ಸುಡುತ್ತಿದೆ. ಜಾತೀಯತೆಯ ವಿಷಸರ್ಪ ಹೆಡೆ ಎತ್ತಿ ನಿಂತಿದೆ. ಈ ದುರಂತದ ದಳ್ಳುರಿಯಲ್ಲಿ ನಮ್ಮ ಜನತೆ ಬೆಂದು ಬೆಂಡಾಗುತ್ತಿದೆ. ಈ ವಿಷಯ ಸನ್ನಿವೇಶವನ್ನು ಕಣ್ಣಾರೆ ಕಂಡ ಕವಿಹೃದಯ ತಲ್ಲಣಿಸಿಹೋಗಿದೆ. ಕವಿಯ ಮನಸ್ಸು ಹೀಗೆ ಮಿಡಿದಿದೆ:

‘ ಕುಲ ಕುಲ ಕುಲ ಈ ಕುಲದ ಕುಲುಮೆಯು ತಿರಿ ಬತ್ತಿ
ಭುಗಿಲ್ಲೆಂದು ಮುಗಿಲತನಕ
ಬೆಂಕಿ ಎಬ್ಬಿಸುವುದು ಬೇಡ
ರಸ್ತಾ ಕಿಳಿಸಿ ಕುಸ್ತಿ ಹಿಡಿಸಿ ಗಸ್ತಿ ತಿರುಗಿಸುವುದು ಬೇಡ
ಒಪ್ಪಿಕೊಂಡು ಅಪ್ಪಿಕೊಂಡು ನಡಿಯೂದು ಪಾಡ’ (ಪುಟ ೩೨)

ಹೀಗೆ ವಿವಿಧ ವಿಷಯಗಳನ್ನು ವಸ್ತುನಿಷ್ಠವಾಗಿ ಪರಿಶೀಲಿಸಿ ತಕ್ಕ ಪರಿಹಾರ ಸೂಚಿಸುವ ಕವಿಯ ಮನೋಧರ್ಮ ಮೆಚ್ಚಬೇಕಾದುದೇ ಆಗಿದೆ. ನಮ್ಮ ಸುತ್ತಮುತ್ತ ನಡೆದಿರುವ ಅನಿಷ್ಟಗಳನ್ನು ದೂರಮಾಡುವ ತವಕ ಕವಿಗಿದೆ. ಅವುಗಳನ್ನು ಓದುಗರ ಮನದೆದುರು ಸೆಟೆದು ನಿಲ್ಲಿಸುವ ಕಾರ್ಯ ಈ ಕವಿಯಿಂದ ನಡೆದಿದೆ. ‘ಈ ಕವನ ಸಂಕಲನದ ಮೂಲಕ ಹೊಸ ಅಭಿವ್ಯಕ್ತಿಯ ಕವಿಯೊಬ್ಬನು ನುಡಿದೇವಿಯ ಪೂಜೆಗಾಗಿ ಸಿದ್ಧನಾಗಿ ಬಂದಿದ್ದಾನೆಂಬುದನ್ನು ಸಿದ್ಧಮಾಡಿ ತೋರಿಸಿದ್ದಾನೆ.’ ಎನ್ನುವ ಮುನ್ನುಡಿ ಬರೆದು ಮುನ್ನಡೆಸಿದ ಪಾಟೀಲ ಪುಟ್ಟಪ್ಪನವರ ಹಾಗೂ ‘ಗೋಗೇರಿ ಕನ್ನಡ ಕಾವ್ಯ ಪ್ರಪಂಚದಲ್ಲಿ ಮೇಲಕ್ಕೇರುವ

ಗಾಳಿಪಟ' ಎನ್ನುವ ಸುರೇಂದ್ರ ದಾನಿಯವರ ಮಾತುಗಳು ಮನನೀಯವಾಗಿವೆ. ಆದರೆ ನಾಲ್ವತ್ತು ಪುಟಗಳ ಈ ಪುಸ್ತಕದ ಬೆಲೆ ಐದುರೂಪಾಯಿ ಇಟ್ಟಿರುವುದು ಬಹು ದುಬಾರಿಯಾಯಿತು. ಕನ್ನಡ ಕಸ್ತೂರಿಯ ಪರಿಮಳ ಸುತ್ತೆಲ್ಲ ಹರಡಲು ಕಾವ್ಯಪ್ರೇಮಿಗಳ ಸಂಖ್ಯೆ ಹೆಚ್ಚಾಗಲು ಕಡಿಮೆ ದರದಲ್ಲಿ ಈ ಬಗೆಯ ಕಾವ್ಯ ಸಂಕಲನಗಳು ದೊರೆಯುವಂತಾಗಬೇಕು.

ಎಸ್. ಎಸ್. ಭೂಸರಡ್ಡಿ

* * *

ಸ್ವಾಗತ-ಪ್ರಾರ್ಥನಾಮಾಲೆ—ಲೇಖಕರು: ಎಚ್. ಸೀತಾರಾಮರಾವ್, ಹೊಸಬಾಳೆ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ೧೯೮೨, ಪುಟ: ೬೨, ಬೆಲೆ: ಎಂಟು ರೂಪಾಯಿ.

ಕಿರು ಕವಿತೆಗಳ ವರ್ಗಕ್ಕೆ ಸೇರುವ ಸ್ವಾಗತ-ಪ್ರಾರ್ಥನಾ ಮಾಲೆಯಲ್ಲಿ ಮೂವತ್ತು ಸ್ವಾಗತ ಪದ್ಯಗಳಿವೆ. ಇವು ಸುಮಾರು ಇಪ್ಪತ್ತು ವರ್ಷಗಳ ಅವಧಿಯಲ್ಲಿ ರಚಿತವಾಗಿರುವಂತವು. ಕಾವ್ಯರಚನೆಗೆ ಕಾರಣವಾದ ಸಂದರ್ಭಗಳು ಅನೇಕ. ಸಹಕಾರ ಸಂಘ, ಆಸ್ಪತ್ರೆ, ಹಣ್ಣಿನ ಅಂಗಡಿ ಇತ್ಯಾದಿಗಳ ಉದ್ಘಾಟನೆ, ಬೆಳ್ಳಿಹಬ್ಬ ಅಥವಾ ಸನ್ಮಾನಸಮಾರಂಭ, ಸಾಹಿತ್ಯ ಸಮ್ಮೇಳನಗಳ ಉದ್ಘಾಟನಾ ಸಮಾರಂಭ—ಹೀಗೆ ಸಾಮಾನ್ಯ ವಿಷಯಗಳಿಂದ ಹಿಡಿದು ಸಾಹಿತ್ಯದವರೆಗೆ ಪದ್ಯ ರಚನೆ ನಡೆದಿದೆ. ಅತ್ಯಂತ ಹಿಂದಿನದು ದಿನಾಂಕ ೨೨-೧೦-೧೯೬೩ರಂದು ಸೊರಬ ತಾಲ್ಲೂಕಿನ ತಲಕಾಲಕೊಪ್ಪದ ಹವ್ಯಕ ಕೋ-ಆಪರೇಟಿವ್ ಸೊಸೈಟಿಯ ನೂತನ ಕಟ್ಟಡದ ಪ್ರಾರಂಭೋತ್ಸವ ನಿಮಿತ್ತ ರಚಿತವಾದದ್ದು. ಅತ್ಯಂತ ಇತ್ತೀಚಿನದು ದಿನಾಂಕ ೮-೨-೧೯೮೨ರಂದು ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ನಡೆದ ಅಖಿಲ ಹವ್ಯಕ ದ್ವಿತೀಯ ಮಹಾಸಮ್ಮೇಳನದ ನೆನಪಿಗೆ ರಚಿತವಾದದ್ದು. ಇಲ್ಲಿನ ಬಹುತೇಕ ಪದ್ಯಗಳ ಛಂದಸ್ಸು ವಾರ್ಧಕ ಷಟ್ಪದಿ. ಸರಾಗವಾಗಿ ಷಟ್ಪದಿ ರಚಿಸುವ ಕಲೆ ಸೀತಾರಾಮರಾವ್ ಅವರಿಗೆ ಕರಗತವಾಗಿದೆ. ಯಾವುದೇ ವಿಷಯ ಕುರಿತು ನಿರರ್ಗಳವಾಗಿ ಅವರು ಷಟ್ಪದಿಯನ್ನು ಬರೆಯಬಲ್ಲರು. ಈ ರಚನೆಗಳಿಗೆ ರಾಯರು ನಮ್ಮ ಹಿಂದಿನ ಕನ್ನಡ ಕವಿಗಳಿಗೆ, ಅವರಲ್ಲಿಯೂ ಲಕ್ಷ್ಮೀಶನಿಗೆ ಬಹಳಷ್ಟು ಋಣಿಯಾಗಿದ್ದಾರೆ. ಇವುಗಳನ್ನು ಓದಿದಂತೆಲ್ಲ ಎಲ್ಲೋ ಹಿಂದೆ ಓದಿದ ಪದ್ಯಗಳ ಛಾಯೆ ನಮ್ಮ ಮನಸ್ಸಿನಲ್ಲಿ ಮೂಡಿ ಮರೆಯಾಗುತ್ತದೆ. ಅನೇಕ ಪದ್ಯಗಳು ಬಹಳಷ್ಟು ಬಾರಿ ಪುನರಾವರ್ತನೆಗೊಂಡಿವೆ.

ಇಲ್ಲಿನ ಪದ್ಯಗಳಲ್ಲಿ ಗುರುತಿಸಬಹುದಾದ ಒಂದು ಮಹತ್ವದ ಅಂಶವೆಂದರೆ ಸೀತಾರಾಮರಾಯರು ಕೊಡುವ ಕೆಲವು ವ್ಯಕ್ತಿ ಚಿತ್ರಗಳು. ಇಂಥ ಸಂದರ್ಭಗಳಲ್ಲಿ ತೂಕತಪ್ಪದ, ಹಿತಮಿತವಾದ ಪ್ರಶಂಸೆ ಕಂಡುಬರುತ್ತದೆ. ಈ ಮಾತಿಗೆ ಸಾಕ್ಷಿಯಾಗಿ ಕೆಲವು ಪದ್ಯಗಳನ್ನು ಗಮನಿಸಬಹುದು. ಡಿ. ದೇವರಾಜ ಅರಸರನ್ನು ಕುರಿತ ಒಂದು ಷಟ್ಪದಿ ತುಂಬ ಅರ್ಥಪೂರ್ಣವಾಗಿದೆ.

ದೇಶಸೇವೆಯೆ ಈಶಸೇವೆ ಎಂದರಿತು ಸತೆ
ಮೈಸೂರು ರಾಜ್ಯದಲ್ಲಿ ದೀನಸೇವೆಯು ಗೈದ
ಶೇಷಜನಸಂಪ್ರೀತಿಯಂ ಗಳಿಸುತೆಲ್ಲರಾ ದಕ್ಷನೇತಾರರಾಗಿ
ಈಶದಯದಿಂ ಮುಖ್ಯಮಂತ್ರಿ ಪದಮಂ ಪಡೆದು
ಸಾಸಿರಯತ್ನಂಗಳಿಂ ರಾಜ್ಯದಾ ಪೆಸರ
ಲೇಸಾಗಿ ಕರ್ನಾಟಕದ ನಾಮದಿಂ ಕರೆಯುತಮರರಾಗಿರುವರಲ್ತೆ

ಶಿವರಾಮಕಾರಂತರಿಗೆ ಜ್ಞಾನಪೀಠ ಪ್ರಶಸ್ತಿ ಲಭ್ಯವಾದ ಸಂದರ್ಭದಲ್ಲಿ ಅವರನ್ನು ಸಾಗರದಲ್ಲಿ ಸನ್ಮಾನಿಸುವ ಹೊತ್ತಿನಲ್ಲಿ ರಚಿತವಾದ ಒಂದು ಪದ್ಯ ಹೀಗಿದೆ:

ಕಡಲತೀರದ ಕೋಟವೆಂಬ ಸುಗ್ರಾಮದಲಿ
ಕಡಲವದನಿಯಂತೆ ಜನಿಸುತ ಬಾಲ್ಯದಿಂ ಜ್ಞಾನ
ಕಡಲೊಳೀಸಾಟದಿಂ ಮುಳುಗು ತೇಳುತಲಿ ತೆರೆಗಳ ಮಧ್ಯದರೆಯಂದದಿ
ಕಡಲಾಳದೊಲು ವಿದ್ಯಾಜ್ಞಾನ ಜಲನಿಧಿಯಂ
ಕಡಲಪುರ ಸಾಗರದ ಸಕಲ ಜನತೆಯು ಮುದದಿ
ಕಡಲಭಾರ್ಗವರಾಮ ಶಿವರಾಮ ಕಾರಂತರಾ ಬಾಗಿ ಸ್ವಾಗತಿಸೆವು.

ಆಗಿನ ಮೈಸೂರು ಸಂಸ್ಥಾನದ ವ್ಯವಸಾಯ ಸಚಿವರಾಗಿದ್ದ ಶ್ರೀ ನಾರಾಯಣ ಗೌಡರನ್ನು ಕುರಿತು ಒಂದು ಅನಿಸಿಕೆ ಇದು:

ಜನಿಸಿ ಬಡಕೃಷಿಕರೊಳ್ ಸ್ವಪ್ರಯತ್ನದಿಂ ಸಕಲ
ಜನರ ಸಂಪ್ರೀತಿಯಂ ಬಾಲ್ಯದಿಂ ಪಡೆದು ಸ
ನ್ಮನದಿ ವಿದ್ಯಾಜ್ಞಾನವಂ ಗಳಿಸುತಾದರದಿ ದೇಶಸೇವೆಯ ಗೈಯುತ
ವಿನುತ ಕೃಷಿಸಚಿವರಾಗಿ ವಿದೇಶಗಳ ಪರ್ಯ
ಟನದಿ ಸುವ್ಯವಸಾಯದನುಭವಂಗಳ ಪಡೆದ
ಘನವಂತ ನಾರಾಯಣಗೌಡರಿಗೆ ಸರ್ವೇಶ ಶುಭವಂ ನೀಡಲಿ

ಸಂದರ್ಭದ ತುರ್ತಿಗೆ ರಚಿತವಾದ ಈ ಪದ್ಯಗಳಲ್ಲಿ ಕಾವ್ಯಾಂಶ ಕಡಿಮೆ. ಪ್ರಸ್ತುತ ಸಂಕಲನದಲ್ಲಿರುವ 'ತೋಟಿಗರು' ಎಂಬ ಸ್ವಾಗತ ಪದ್ಯವೊಂದು

ಮಾತ್ರ ಕಾವ್ಯದ ಸೊಗಡಿನಿಂದ ಕೂಡಿದ್ದು ಓದುಗಗೆ ಖುಷಿಕೊಡುವಂತಿದೆ. "ಸ್ವಾಗತ ಪದ್ಯಮಾಲಿಕೆಗಳೂ ಸಹ ಒಂದು ಬಗೆಯ ಕಾವ್ಯದ ಗುಂಪಿಗೆ ಸೇರತಕ್ಕವು. ಪದ್ಯ ರಚನಾಶಕ್ತಿಯ ಜೊತೆಗೆ ಕಾವ್ಯಪ್ರತಿಭೆಯೂ ಇದ್ದಾಗ ಸ್ವಾಗತ ಪದ್ಯಗಳಲ್ಲಿ ಕಾವ್ಯ ಗುಣಗಳು ಒಡಮೂಡಿ ಸಭಾಸದರ ಮನಸ್ಸನ್ನು ಸೆಳೆಯುತ್ತವೆ. ಅಂತಹ ಉತ್ತಮ ಕಾವ್ಯಾಂಶಗಳನ್ನು ಈ ಪದ್ಯಮಾಲಿಕೆಗಳಲ್ಲಿ ಸಹೃದಯರು ಸುಲಭವಾಗಿ ಗುರುತಿಸಬಹುದು" ಎಂದು ಈ ಪುಸ್ತಕಕ್ಕೆ ಮುನ್ನುಡಿ ಬರೆದಿರುವ ಶ್ರೀ ಎನ್. ರಂಗನಾಥಶರ್ಮ ಅವರು ಹೇಳಿದ್ದಾರೆ. ಆದರೆ ಇವರ ಮಾತುಗಳ ತೂಕವನ್ನು ಸಂಪೂರ್ಣವಾಗಿ ಹೊರುವ ಶಕ್ತಿ ಇಲ್ಲಿನ ರಚನೆಗಳಿಗೆ ಇಲ್ಲ. ಅವರೇ ಇನ್ನೊಂದು ಮಾತನ್ನು ಹೇಳಿದ್ದಾರೆ—ಇವು ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ ಕೆಲವು ಮುಖ್ಯ ಸಮಾರಂಭಗಳ ಐತಿಹಾಸಿಕ ದಾಖಲೆಯಾಗುತ್ತವೆ. ಅಷ್ಟರಮಟ್ಟಿಗೆ ಈ ರಚನೆಗಳಿಗೆ ಅಸ್ತಿತ್ವವಿದೆ.

ಕೃಷ್ಣ ಹಾಸನ



ಇತರರ ಅನ್ನದ ತುತ್ತಿಗೆ ಕಲ್ಲುಹಾಕದಿರು. ಅದೇ ಕಲ್ಲು ನಿನ್ನ ಅನ್ನದ ತುತ್ತಿಗೂ ಬಿದ್ದೀತೆಂಬ ಪೂರ್ಣ ಭಯ ನಿನಗಿರಲಿ.

ಭಕ್ತಿ ಗೌರವಗಳಿರುವಲ್ಲಿ ಪರಮಾತ್ಮನ ಸಾಕ್ಷಾತ್ಕಾರವಿದ್ದೇ ಇರುತ್ತದೆ. ಉತ್ತಮ ಗುಣ ನಡತೆಯಿರುವಲ್ಲಿ ಮಾತ್ರ ಭಕ್ತಿ ಗೌರವಗಳ ಸಾಕ್ಷಾತ್ಕಾರವಿರುತ್ತದೆ.

—ಸ್ವಾಮಿ ರಾಮದಾಸ

ನಮ್ಮ ಮನಸ್ಸು ಕೋಮಲವಾಗಿದ್ದರೆ ಜಗತ್ತೇ ಸಿಹಿ ಎನ್ನುತ್ತೇವೆ. ನಮ್ಮ ಮನಸ್ಸು ಕಲ್ಮಷವಾಗಿದ್ದರೆ ಜಗತ್ತೇ ಹುಳಿಯೆನ್ನುತ್ತೇವೆ.

ಸೌಹಾರ್ದವು ಇತರೆಲ್ಲ ಅಸ್ತ್ರಗಳಿಗಿಂತ ಸುಲಭವಾಗಿ ಜಗತ್ತನ್ನು ಗೆದ್ದುಕೊಡ ಬಲ್ಲದು. ವಿಶಾಲ ಹೃದಯದಿಂದ ವಿಶ್ವಾಸವನ್ನು ಗೆಲ್ಲಬಹುದು.

—ನೆಹರೂಜೀ

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ : ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು.

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಕೃಷ್ಣಮೂರ್ತಿಪುರಂ : : ಮೈಸೂರು - ೪

Reg. No. KRNN. 29 / WPP 6

LICENSE No. 21
LICENSED TO POST WITHOUT PREPAYMEN

ನೀವು ಓದಲೇಬೇಕಾದ ಪುಸ್ತಕಗಳು.....

ಜನಪ್ರಿಯ ವಾಲ್ಮೀಕಿ ರಾಮಾಯಣ

ಶರಣ ಚರಿತಾಮೃತ

ನನ್ನೂರು

ಗೋಕುಲ

ಭಗತ್‌ಸಿಂಗ್

ಸಿ. ವಿ. ರಾಮನ್

ವಚನ ಭಾಗವತ

ವಿದ್ಯಾಪೀಠಗಳು

ಶ್ರೀ ಶಂಕರಾಚಾರ್ಯ

ಆಂಡರ್‌ಸನ್ ಮತ್ತು ಇತರ ಕತೆಗಳು

ನಳಚರಿತ್ರೆಯ ಸಂಗ್ರಹ

ಗ್ರಾಂಟ್ವಿಗ್

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

Edited by R. Boraiah, Printed by H. G. Ramaswamy Iyenga
Manager at Karnataka State Adult Education Council Pres
and Published by Karnataka State Adult Education Counc
Mysore city (India)